# ಅಗಸ್ತ್ಯ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ (ರಿ)

ಸಂಘದ ಪ್ರತಿ ವರ್ಷದ ಕಾರ್ಯಕ್ರಮವಾದ, ಪ್ರತಿಭಾನ್ವಿತ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಮತ್ತು ಹಿರಿಯ ಸದಸ್ಯರುಗಳಿಗೆ ಸನ್ಮಾನ ಸಮಾರಂಭವನ್ನು ದಿನಾಂಕ:01–09–2024ರಂದು ಬೆಳಿಗ್ಗೆ 9.30 ಗಂಟೆಗೆ ನಿಗದಿಪಡಿಸಲಾಗಿದ್ದು, ಸರ್ವಸದಸ್ಯರ ಸಭೆ ಪ್ರಾರಂಭವಾಗುವ ಮೊದಲು ಸದರಿ ಕಾಯಕ್ರಮವನ್ನು ನಡೆಸಲಾಯಿತು.

ಎಸ್ಎಸ್ಎಲ್ಸಿ – 15, ಪಿಯುಸಿ – 11 ಹಿರಿಯ ಸದಸ್ಯರು –11 ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪಡೆದವರು –1

---

ದಿನಾಂಕ:01–09–2024ರಂದು ಬೆಳಿಗ್ಗೆ 11.00 ಘಂಟೆಗೆ ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಮೈಸೂರು ಇಲ್ಲಿ ಜರುಗಿದ ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.(ರಿ.)ನ 29ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿಗಳು.

**ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಎಂ ಡಿ ಗೋಪಿನಾಥ್‌ರವರು ವಹಿಸಿದ್ದರು.**

**ಕೋರಂಗೆ ಅವಶ್ಯಕವಾದ ಸದಸ್ಯರ ಸಂಖ್ಯೆ:608**
**ಹಾಜರಿದ್ದ ಸದಸ್ಯರ ಸಂಖ್ಯೆ: 2195**

**ಸಭೆಯನ್ನು ಪ್ರಾರಂಭಿಸಲು ಅಗತ್ಯವಿರುವ ಕೋರಂ ಬಗ್ಗೆ ಮಾಹಿತಿ ಪಡೆದು ಸಭೆ ನಡೆಸಲು ಅಗತ್ಯ ಕೋರಂ ಇರುವ ಬಗ್ಗೆ ಸದಸ್ಯರುಗಳಿಗೆ ಮಾಹಿತಿ ನೀಡಿ ಅನುಮತಿ ಮೇರೆಗೆ, ಅಧ್ಯಕ್ಷರ ಅನುಮತಿ ಪಡೆದು ನಂತರ ಬೆಳಿಗ್ಗೆ 11.30 ಘಂಟೆಗೆ ಅಗತ್ಯ ಕೋರಂ ಇರುವ ಬಗ್ಗೆ ಧೃಢೀಕರಿಸಿ ಶ್ರೀ ಎಂ ಡಿ ಗೋಪಿನಾಥ್‌ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಪ್ರಾರಂಭಿಸಲಾಯಿತು.**

ಸದಸ್ಯರಾದ ಶ್ರೀ ಕಣ್ಣಾಮಾಚಾರ್‌ರವರು ಮಾತನಾಡಿ ತಮಗೆ ಸರ್ವಸದಸ್ಯರ ಸಭೆಯ ವರದಿಪುಸ್ತಕ ತಲುಪದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಅಧ್ಯಕ್ಷರು ಉತ್ತರಿಸಿ ಸಂಘದ 6079 ಸದಸ್ಯರಿಗೂ ಒಂದೇ ದಿನ ಅಂಚೆ ಮುಖಾಂತರ ವರದಿಪುಸ್ತಕ ಕಳುಹಿಸಲಾಗಿದ್ದು, ದಿನಾಂಕ:31/08/2024ರ ಶನಿವಾರ ಸಂಜೆ 5.00 ಗಂಟೆಗೆ ಸಂಘದ ವತಿಯಿಂದ ಇದಕ್ಕೆ ಸಂಬಂಧಿಸಿದಂತೆ ಎಸ್ಎಂಎಸ್ ಸಹ ಕಳುಹಿಸಲಾಗಿದೆ. ಇದಲ್ಲದೆ ಮೈಸೂರು ಮಿತ್ರ ಮತ್ತು ಸಂಜೆವಾಣಿ ಪತ್ರಿಕೆಯಲ್ಲಿ ಮಾಹಿತಿಯನ್ನು ಪ್ರಕಟಿಸಲಾಗಿದೆ ಎಂದು ತಿಳಿಸಿದರು. ಅನೇಕ ಸದಸ್ಯರು ವರದಿಪುಸ್ತಕದ ಪ್ರತಿ ತಲುಪಿರುವುದಿಲ್ಲ ಎಂದು ತಿಳಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಸಂಘದ ವತಿಯಿಂದ ಅಂಚೆ ಕಛೇರಿಗೆ ಒಂದು ಪತ್ರ ಬರೆದು ಸಂಘದ ಬಹುತೇಕ ಸದಸ್ಯರಿಗೆ ಪ್ರತಿ ತಲುಪಿಲ್ಲದಿರುವ ಬಗ್ಗೆ ಅಂಚೆ ಮೇಲಾಧಿಕಾರಿಗಳಿಗೆ ದೂರು ನೀಡುವಂತೆ ಸೂಚಿಸಿದರು. ಅಧ್ಯಕ್ಷರು ಇದಕ್ಕೆ ಒಪ್ಪಿಗೆ ಸೂಚಿಸಿದರು.

ಪ್ರಭಾರ ಕಾರ್ಯದರ್ಶಿಯವರು ವೇದಿಕೆ ಮೇಲೆ ಉಪಸ್ಥಿತರಿರುವ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಖಜಾಂಚಿಗಳು ಹಾಗೂ ಎಲ್ಲಾ ನಿರ್ದೇಶಕರನ್ನು ಸ್ವಾಗತಿಸಿ, ಸಭೆಯನ್ನು ಪ್ರಾರಂಭಿಸಲು ಅನುಮತಿ ಕೋರಿದರು.

1) **ಪ್ರಾರ್ಥನೆ:** ಶ್ರೀ ಮಹಾಲಿಂಗು ಹಾಗೂ ಕುಮಾರಿ ಚಿನ್ಮಯಿರವರ ಸುಮಧುರ ಪ್ರಾರ್ಥನೆಯೊಂದಿಗೆ ಸರ್ವಸದಸ್ಯರ ಸಭೆಯನ್ನು ಪ್ರಾರಂಭಿಸಲಾಯಿತು.

2) **ಸಾಮೂಹಿಕ ಶಾಂತಿ ಮಂತ್ರ ಮತ್ತು ಅಗಸ್ತ್ಯ ಮುನಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ:** ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಖಜಾಂಚಿಗಳು. ನಿರ್ದೇಶಕರುಗಳು ಹಾಗೂ ಎಲ್ಲಾ ಸದಸ್ಯರು ಒಟ್ಟಾಗಿ ಸಾಮೂಹಿಕ ಶಾಂತಿಮಂತ್ರ ಪಠಿಸಿದರು, ವೇದಿಕೆ ಮೇಲೆ ಉಪಸ್ಥಿತರಿದ್ದವರು ಅಗಸ್ತ್ಯ ಮಹಾಮುನಿಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಜ್ಯೋತಿಯನ್ನು ಬೆಳಗಿಸಿದರು.

3) **ಸ್ವಾಗತ ಭಾಷಣ:** ಸಂಘದ ಹಿರಿಯ ನಿರ್ದೇಶಕರಾದ 'ಸಹಕಾರ ರತ್ನ' ಶ್ರೀ ಸಿ ವಿ ಪಾರ್ಥಸಾರಥಿರವರು ಸ್ವಾಗತ ಭಾಷಣವನ್ನು ಮಾಡುತ್ತಾ, ವೇದಿಕೆ ಮೇಲೆ ಆಸೀನರಾಗಿರುವ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಖಜಾಂಚಿಗಳಿಗೆ ಹಾಗೂ ಎಲ್ಲಾ ನಿರ್ದೇಶಕರುಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು. ಸರ್ವಸದಸ್ಯರ ಸಭೆಗೆ ಹಾಜರಿರುವ ಸಂಘದ ಎಲ್ಲಾ ಸದಸ್ಯರು, ಆಂತರಿಕ ಲೆಕ್ಕಪರಿಶೋಧಕರಾದ ಶ್ರೀ ಮಧುಸೂದನ್, ಕಾನೂನು ಸಲಹೆಗಾರರಾದ ಶ್ರೀ

ಶಶಿಧರ್, ಶ್ರೀ ಕೆ ಟಿ ಸ್ವಾಮಿ, ಶ್ರೀ ಎಂ ಎನ್ ಶ್ರೀನಿವಾಸ್, ಸಂಘದ ಮೌಲ್ಯಮಾಪಕರಾದ ಶ್ರೀ ಶ್ರೀನಿವಾಸ್‌ರವರಿಗೆ ಸ್ವಾಗತವನ್ನು ಕೋರಿದರು. ಇಂದಿನ ಕಾರ್ಯಕ್ರಮದ ನಿರ್ವಹಣೆಗೆ ಶ್ರಮಿಸಿರುವ ಪ್ರಭಾರ ಕಾರ್ಯದರ್ಶಿ ಹಾಗೂ ಸಿಬ್ಬಂದಿ ವರ್ಗದವರಿಗೆ ಸ್ವಾಗತ ಕೋರಿದರು ಮತ್ತು ಸಭೆ ನಡೆಯಲು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಶ್ರಮಿಸಿರುವ ಎಲ್ಲರಿಗೂ ಸ್ವಾಗತ ಕೋರಿದರು. ಎಲ್ಲರನ್ನೂ ಸ್ವಾಗತಿಸಿದ ನಿರ್ದೇಶಕರಾದ ಶ್ರೀ ಸಿ ವಿ ಪಾರ್ಥಸಾರಥಿರವರನ್ನು ಸಂಘದ ಅಧ್ಯಕ್ಷರು ಸ್ವಾಗತಿಸಿದರು.

**4) <u>29ನೇ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು ಮತ್ತು ಮುದ್ರಣ ದೋಷದ ಬಗ್ಗೆ</u>:**

ಸದಸ್ಯರಾದ ಶ್ರೀ ಕೆ.ಎನ್. ಶ್ರೀನಿವಾಸಶರ್ಮಾರವರು (ಸ.ಸಂ.4590) ಮಾತನಾಡಿ ಸಭೆಯ ಪ್ರಾರಂಭಕ್ಕೆ ಅಗತ್ಯವಿರುವ ಕೋರಂ ಬಗ್ಗೆ ಮಾಹಿತಿ ನೀಡಿ ಎಂದು ಕೇಳಲು, ಪ್ರಭಾರ ಕಾರ್ಯದರ್ಶಿಯವರು ಸಭೆ ನಡೆಸಲು ಅಗತ್ಯ ಕೋರಂ 608 ಎಂದು ತಿಳಿಸಿದರು. ಇದನ್ನು ಹೇಗೆ ಲೆಕ್ಕಾಚಾರ ಮಾಡಲಾಗಿದೆ ಎಂದು ಶ್ರೀ ಶ್ರೀನಿವಾಸಶರ್ಮಾರವರು ಪ್ರಶ್ನಿಸಿದರು. ಅಧ್ಯಕ್ಷರು ಉತ್ತರಿಸಿ 6079 ಸದಸ್ಯರ ಶೇಕಡ 10ರಷ್ಟನ್ನು ಕೋರಂ ಎಂದು ಪರಿಗಣಿಸಲಾಗಿದೆ ಎಂದು ತಿಳಿಸಿದರು. ಕಾಯಿದೆ ಕಾನೂನುನಲ್ಲಿ ತಿಳಿಸಿರುವ ವಿಷಯವನ್ನು ಓದುವಂತೆ ಶ್ರೀ ಶ್ರೀನಿವಾಸಶರ್ಮಾರವರು ಹೇಳಿದರು. ಪ್ರಭಾರ ಕಾರ್ಯದರ್ಶಿಯವರು ಓದಿ ತಿಳಿಸಲಾಗಿ ಶ್ರೀ ಶ್ರೀನಿವಾಸಶರ್ಮಾರವರು ಮಾತನಾಡಿ ಸರ್ವಸದಸ್ಯರ ಸಭೆಯಲ್ಲಿ ಯಾವುದೇ ನಿರ್ಣಯವನ್ನು ಬಹುಮತದ ಆಧಾರದ ಮೇಲೆ ಪಡೆಯುವುದರಿಂದ ಕಾಯಿದೆ ಕಾನೂನಿನಲ್ಲಿ ತಿಳಿಸಿರುವಂತೆ ಮತದಾನದ ಹಕ್ಕುಳ್ಳ ಶೇ.10ನ್ನು ಕೋರಂ ಎಂದು ಪರಿಗಣಿಸಲು ತಿಳಿಸಿದರು. ಈ ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿಯನ್ನು ಚುನಾವಣೆ ಹಾಗೂ ಸರ್ವಸದಸ್ಯರ ಸಭೆ ಎರಡಕ್ಕೂ ಅನ್ವಯವಾಗುತ್ತದೆ ಇನ್ನು ಮುಂದೆ ಕಾನೂನು ಪಾಲನೆ ಮಾಡಬೇಕು ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಮುಂದೆ ಇದರ ಬಗ್ಗೆ ಸೂಕ್ತವಾದ ಮಾಹಿತಿ ಪಡೆದು ಪಾಲನೆ ಮಾಡಲಾಗುವುದು ಎಂದು ತಿಳಿಸಿದರು.

29ನೇ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಪ್ರಭಾರ ಕಾರ್ಯದರ್ಶಿಯವರಾದ ಶ್ರೀಮತಿ ಎನ್ ವೀಣಾರವರು ಸಭೆಗೆ ಓದಿ ತಿಳಿಸಿರುವುದನ್ನು ಸಭಾ ನಡಾವಳಿಯಲ್ಲಿ ದಾಖಲಿಸಲಾಯಿತು. ಈ ಕೆಳಗೆ ತಿಳಿಸಿರುವ ಮುದ್ರಣ ದೋಷವನ್ನು ಸಭೆಯಲ್ಲಿ ಓದಿ ತಿಳಿಸಲಾಯಿತು. ಸಂಘದ ಸದಸ್ಯರಾದ ಶ್ರೀ ಚಂದ್ರಶೇಖರ್ (ಸ.ಸಂಖ್ಯೆ3385), ಶ್ರೀನಾಥ್ ಟಿ ಪಿ (ಸ.ಸಂಖ್ಯೆ83) ಸೂಚಿಸಿ ಡಿ ಎನ್ ಕೃಷ್ಣಮೂರ್ತಿ (ಸ.ಸಂಖ್ಯೆ4083) ಹಾಗೂ ಶ್ರೀ ಎಂ ಎಸ್ ಕೇಶವರಾವ್ (ಸ ಸಂಖ್ಯೆ 1451) ಅನುಮೋದನೆ ನೀಡಲಾಯಿತು.

**ಮುದ್ರಣ ದೋಷಗಳು (2023–24)**

| ಕ್ರಸಂ | ಪುಟ ಸಂಖ್ಯೆ | ವಿವರ |
|---|---|---|
| 1 | ಪುಟ ಸಂಖ್ಯೆ:3 ಕಾರ್ಯಕ್ರಮ ಸಂಖ್ಯೆ (13) | ಸಹಕಾರ ಸಂಘಗಳ ಕಾಯಿದೆ ಕಲಂ 58ರ ರೀತ್ಯ ಎಂದು ತಿದ್ದುಪಡಿ ಮಾಡಿಕೊಳ್ಳಬೇಕು |
| 2 | ಪುಟ ಸಂಖ್ಯೆ:6 ರಲ್ಲಿ ಕ್ರಮ ಸಂಖ್ಯೆ:1 ಸದಸ್ಯರ ಷೇರು ಬಂಡವಾಳ | ಸಾಲಿನ ಅಖೈರಿಗೆ ಸಾಮಾನ್ಯ ಸದಸ್ಯರು–6079, ಸಹ ಸದಸ್ಯರು –551, ನಾಮ ಮಾತ್ರ ಸದಸ್ಯರು –6 ಒಟ್ಟು 6636 ಎಂದು ತಿದ್ದುಪಡಿ ಮಾಡಿಕೊಳ್ಳಬೇಕು |
| 3 | ಪುಟ ಸಂಖ್ಯೆ:10 ರಲ್ಲಿ ಕ್ರಮ ಸಂಖ್ಯೆ:11 | ಎರಡನೇ ಪ್ಯಾರ 5ನೇ ಸಾಲಿನಲ್ಲಿ ಸರ್ವ ಸದಸ್ಯರ ಸಭೆಯ ವರದಿ ಪುಸ್ತಕದಲ್ಲಿ ಎಂದು ತಿದ್ದುಪಡಿ ಮಾಡಿಕೊಳ್ಳಬೇಕು |
| 4 | ಪುಟ ಸಂಖ್ಯೆ:33 ಶೀರ್ಷಿಕೆಯಲ್ಲಿ 2023–24ರ ವೆಚ್ಚವು ಸರ್ವಸದಸ್ಯರ ಸಭೆಯ ಮಂಜೂರಾತಿ ವೆಚ್ಚಕ್ಕಿಂತ ಹೆಚ್ಚುವರಿಯಾಗಿ ರೂ.2,12,906/–ಗಳು ಖರ್ಚಾಗಿರು ವುದನ್ನು ಸರ್ವಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ. | 2023–24ರ ವೆಚ್ಚವು ಸರ್ವ ಸದಸ್ಯರ ಸಭೆಯ ಮಂಜೂರಾತಿ ವೆಚ್ಚಕ್ಕಿಂತ ಹೆಚ್ಚುವರಿಯಾಗಿ ರೂ.8,27,423/–ಗಳು ಖರ್ಚಾಗಿರು ವುದನ್ನು ಸರ್ವ ಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ. |

| | | |
|---|---|---|
| 5 | ಪುಟ ಸಂಖ್ಯೆ:33 (1)ಠೇವಣಿಗಳ ಮೇಲಿನ ಬಡ್ಡಿ ಪಾವತಿ | ಮಂಜೂರಾತಿಗಿಂತ ಹೆಚ್ಚಾಗಿ ಖರ್ಚಾಗಿರುವುದು ರೂ.6,14,517/– ಎಂದು ತಿದ್ದುಪಡಿ ಮಾಡಿಕೊಳ್ಳಬೇಕು. |
| 6 | ಪುಟ ಸಂಖ್ಯೆ:34ರಲ್ಲಿ ಮಂಜೂರಾತಿಗಿಂತ ಹೆಚ್ಚಾಗಿ ಖರ್ಚಾಗಿರುವುದು ಒಟ್ಟು ಮೊತ್ತ (5) 1,48,626/–ರ ಬದಲಾಗಿ | ಮಂಜೂರಾತಿಗಿಂತ ಹೆಚ್ಚಾಗಿ ಖರ್ಚಾಗಿರುವುದು ಒಟ್ಟು ಮೊತ್ತ (5) ರೂ.7,63,143/– |
| 7 | ಪುಟ ಸಂಖ್ಯೆ:34ರಲ್ಲಿ ಮಂಜೂರಾತಿಗಿಂತ ಹೆಚ್ಚಾಗಿ ಖರ್ಚಾಗಿರುವುದು ಒಟ್ಟು ಖರ್ಚು ಮೊತ್ತ (1) ರಿಂದ (7)ರವರೆಗೆ ರೂ.2,12,906/– ರ ಬದಲಾಗಿ | ಮಂಜೂರಾತಿಗಿಂತ ಹೆಚ್ಚಾಗಿ ಖರ್ಚಾಗಿರುವುದು ಒಟ್ಟು ಖರ್ಚು ಮೊತ್ತ (1) ರಿಂದ (7)ರವರೆಗೆ ರೂ.8,27,423/– ಎಂದು ತಿದ್ದುಪಡಿ ಮಾಡಿಕೊಳ್ಳಬೇಕು. |
| 8 | ಪುಟ ಸಂಖ್ಯೆ:34ರಲ್ಲಿ ಬಂಡವಾಳ ಖರ್ಚು (ಅಂದಾಜು) | ಪಿಠೋಪಕರಣ ಖರೀದಿಗಾಗಿ (ಪ್ರಧಾನ ಕಛೇರಿ ಮತ್ತು ಶಾಖಾ ಕಛೇರಿಗಾಗಿ) ಹಾಗೂ ಕಛೇರಿ ಉಪಕರಣಗಳು ಇದರಲ್ಲಿ ದಿನಾಂಕ:31/03/2024ಕ್ಕೆ ರೂ.8,500/–ನ್ನು ರೂ.15,550/– ಎಂದು ತಿದ್ದುಪಡಿ ಮಾಡಿಕೊಳ್ಳಬೇಕು. |

ಈ ಮೇಲಿನ ತಿದ್ದುಪಡಿಗಳನ್ನು ಸೂಚಿಸಿ ಅನುಮೋದಿಸುವಂತೆ ಪ್ರಭಾರ ಕಾರ್ಯದರ್ಶಿಯವರು ಸಭೆಯಲ್ಲಿ ಕೇಳಿದರು. ಶ್ರೀ ಕೆ.ಎನ್. ಶ್ರೀನಿವಾಸಶರ್ಮಾರವರು (ಸ.ಸಂ.4590) ಮಾತನಾಡಿ ಪುಟ ಸಂಖ್ಯೆ:3 ವಿಷಯ ಸಂಖ್ಯೆ:15ರಲ್ಲಿ ಮರಣ ಹೊಂದಿರುವ ಸದಸ್ಯರ ಸಾಲದ ಮೊತ್ತವನ್ನು ಕರಡು ಸಂಶಯಾಸ್ಪದ ನಿಧಿಯಿಂದ ಹೊಂದಾಣಿಕೆ ಮಾಡುವ ಬಗ್ಗೆ ಅನುಮೋದನೆ ನೀಡುವುದು ಎಂದು ಕೇಳಿದ್ದು, ಪುಟ ಸಂಖ್ಯೆ:10ರಲ್ಲಿ ಮರಣ ಧೃಢೀಕರಣ ಲಭ್ಯವಿರುವುದಿಲ್ಲವೆಂದು ತಿಳಿಸಲಾಗಿರುತ್ತದೆ. ಆ ನಿಟ್ಟಿನಲ್ಲಿ ವಿಷಯದಲ್ಲಿ ಮರಣ ಹೊಂದಿರುವ ಎಂಬ ಪದ ಸೂಕ್ತವಲ್ಲ ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ನಮಗೆ ಮೌಖಿಕ ಮಾಹಿತಿ ಇದ್ದು, ಯಾವುದೇ ಧೃಢೀಕರಣ ಪಡೆಯಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದರು. ಶ್ರೀ ಕೆ.ಎನ್. ಶ್ರೀನಿವಾಸಶರ್ಮಾರವರು (ಸ.ಸಂ.4590) ಮಾತನಾಡಿ ಧೃಢೀಕರಣ ಇಲ್ಲದ ಕಾರಣದಿಂದ ಮರಣ ಹೊಂದಿರುವ ಪದವನ್ನು ತೆಗೆಯಬೇಕು ಎಂಬುದು ನನ್ನ ಅನಿಸಿಕೆ ಮುಂದೆ ಈ ವಿಷಯ ಬಂದಾಗ ಚರ್ಚಿಸೋಣ ಎಂದು ತಿಳಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿರವರು (ಸ.ಸಂ:4083)ಮಾತನಾಡಿ ತಾವು ಅವರು ಮರಣ ಹೊಂದಿರುವ ಬಗ್ಗೆ ಮಾಹಿತಿ ಸಿಕ್ಕ ತಕ್ಷಣ ಅವರಿಗೆ ಪತ್ರ ಬರೆದು ಅವರ ಮನೆಯವರಿಂದ ಮರಣ ಧೃಢೀಕರಣ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಈ ಸದಸ್ಯರುಗಳ ವಿಳಾಸ ಬದಲಾವಣೆಯ ಮಾಹಿತಿ ಇರುವುದಿಲ್ಲ ಹಾಗೂ ಕುಟುಂಬ ಸದಸ್ಯರ ಮಾಹಿತಿಯು ಲಭ್ಯವಾಗದ ಕಾರಣ ಮರಣ ಧೃಢೀಕರಣ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಉತ್ತರಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿರವರು ಮಾತನಾಡಿ ನೀವೇ ಕಾರ್ಪೋರೇಷನ್‌ನಲ್ಲಿ ಅರ್ಜಿ ನೀಡಿ ಪಡೆದುಕೊಳ್ಳಬಹುದು ನೀವು ಈಗಾಗಲೇ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಬೇಕಾಗಿತ್ತು ಎಂದು ತಿಳಿಸಿದರು. ಶ್ರೀ ಕಣ್ಣಾಮಾಚಾರ್‌ರವರು (ಸ.ಸಂ:3348) ಈಗ 15 ಸದಸ್ಯರ ಸಾಲ ಮನ್ನಾ ಮಾಡಲಾಗುತ್ತಿದೆಯೇ ಎಂದು ಪ್ರಶ್ನಿಸಿದರು. ಅಧ್ಯಕ್ಷರು ಉತ್ತರಿಸಿ ಅವರಿಂದ ಸಾಲ ವಸೂಲಾತಿ ಮಾಡಲು ಅರ್ಜಿದಾರರು ಹಾಗೂ ಜಂಟಿದಾರರು ಅವರ ಕುಂಟುಂಬದವರು ಯಾರು ಲಭ್ಯವಿರುವುದಿಲ್ಲ ಆದ ಕಾರಣ ಕರಡು ಸಂಶಯಾಸ್ಪದ ಸಾಲದ ನಿಧಿಯಿಂದ ಹೊಂದಾಣಿಕೆಗೆ ಸಭೆಯ ಅನುಮತಿಗೆ ಮಂಡಿಸಲಾಗಿದೆ ಎಂದು ತಿಳಿಸಿದರು. ಶ್ರೀ ಕಣ್ಣಾಮಾಚಾರ್‌ರವರು ಮಾತನಾಡಿ ಯಾರು ಲಭ್ಯವಿಲ್ಲದಿದ್ದರೆ ಸಾಲವನ್ನು ಮನ್ನಾ ಮಾಡುತ್ತೀರಾ ಎಂದು ಮರು ಪ್ರಶ್ನಿಸಿದರು. ಅಧ್ಯಕ್ಷರು ಉತ್ತರಿಸಿ ಈಗಾಗಲೇ ಸಭೆಯ ಪ್ರಾರಂಭದಲ್ಲಿ ಸದಸ್ಯರುಗಳು ವಿಷಯ ಸೂಚಿ ಪ್ರಕಾರ ನಡೆಸಲು ತಿಳಿಸಿದರು. ಮುದ್ರಣ ದೋಷವನ್ನು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

**5. <u>ದೈವಾಧೀನರಾದ ಸದಸ್ಯರುಗಳಿಗೆ ಗೌರವಾರ್ಥವಾಗಿ ಸಂತಾಪ ಸೂಚನೆ:</u>**

2023–24ನೇ ಸಾಲಿನಲ್ಲಿ ಮೃತರಾದ ಸದಸ್ಯರುಗಳ ಹೆಸರುಗಳಿರುವ ಈ ಕೆಳಗಿನ ಪಟ್ಟಿಯನ್ನು ನಿರ್ದೇಶಕರಾದ ಶ್ರೀಮತಿ ನಾಗಶ್ರೀರವರು ಓದಿದರು. ಇದರೊಂದಿಗೆ ಸಂಸ್ಥೆಯ ಗಮನಕ್ಕೆ ಬಾರದ ಮೃತ ಸದಸ್ಯರನ್ನು ಒಳಗೊಂಡಂತೆ ಮೃತರಾದ ಎಲ್ಲ ಸದಸ್ಯರ ಗೌರವಾರ್ಥವಾಗಿ ಒಂದು ನಿಮಿಷ ಮೌನ ಆಚರಿಸುವ ಮೂಲಕ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

# ಅಗಸ್ತ್ಯ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ (ರಿ)

**2023–24ನೇ ಸಾಲಿನ ದೈವಾಧೀನರಾದ ಸದಸ್ಯರ ಪಟ್ಟಿ**

| ಕ್ರ ಸಂಖ್ಯೆ | ಸದಸ್ಯರ ಹೆಸರು | ಸದಸ್ಯತ್ವದ ಸಂಖ್ಯೆ | ಕ್ರ ಸಂಖ್ಯೆ | ಸದಸ್ಯರ ಹೆಸರು | ಸದಸ್ಯತ್ವದ ಸಂಖ್ಯೆ |
|---|---|---|---|---|---|
| 1 | ಚಂಚಲ | 1714 | 29 | ರಂಗಮಣಿ ಎನ್ ಆರ್ | 1630 |
| 2 | ಚೆನ್ನಕೇಶವಯ್ಯ ಆರ್ ಕೆ | 1208 | 30 | ಉಮಾಮಣಿ ಕೆ ಎಸ್ | 1307 |
| 3 | ಜಗನ್ನಾಥ ಐಯ್ಯಂಗಾರ್ | 4883 | 31 | ವಿಶ್ವನಾಥ್ ಹೆಚ್ ಎನ್ | 4610 |
| 4 | ಶ್ರೀನಿವಾಸಾಚಾರ್ ಟಿ ಜಿ | 363 | 32 | ಸತೀಶ್ ಕೆ | 50152 |
| 5 | ಲಕ್ಷ್ಮಿಕಾಂತ್‌ರಾಜೇ ಅರಸ್ | 50559 | 33 | ಸರಸ್ವತಿ | 4391 |
| 6 | ಪ್ರಸಾದ್ ಅರ್ ಎನ್ | 1558 | 34 | ರಾಮಚಂದ್ರ ಮುರ್ತಿ ಹೆಚ್ ಎನ್ | 7557 |
| 7 | ಶಂಕರ್ ಎಲ್ | 2312 | 35 | ಈಶ್ವರ್ ಸಿ | 7247 |
| 8 | ವೇಣುಗೋಪಾಲ್ ಕೆ | 4929 | 36 | ಸುಬ್ರಮಣ್ಯಂ ಸಿ ವಿ | 2153 |
| 9 | ರಘು ಕೆ ಎಸ್ | 5671 | 37 | ರಮೇಶ್ ಹೆಚ್ ವಿ | 1774 |
| 10 | ಸುಲೋಚನಮ್ಮ | 1715 | 38 | ಜಗನಾಥ್ ಬಿ ಎಸ್ | 5310 |
| 11 | ಲಲಿತಾಂಬ ಆರ್ ವಿ | 2307 | 39 | ವಾಸುದೇವ ಮೂರ್ತಿ ಎಂ ಎಸ್ | 2046 |
| 12 | ವೆಂಕಟಸುಬ್ಬಯ್ಯ ಎಂ ಎಸ್ | 2386 | 40 | ಮಧುಮತಿ ಕೆ ಎಸ್ | 2504 |
| 13 | ಲೀಲಾವತಮ್ಮ ಎನ್ | 4115 | 41 | ಶಕುಂತಲ | 50205 |
| 14 | ಸಂಪತ್ ಕುಮಾರ್ | 2588 | 42 | ಮೋಹನ್ ಕುಮಾರ್ ಬಿ ಆರ್ | 5486 |
| 15 | ವೆಂಕಟಾದ್ರಿ ವಿ ಆರ್ | 3098 | 43 | ಸತೀಶ್ ಕೆ | 6169 |
| 16 | ರಾಮಕೃಷ್ಣ ಸಿ ವಿ | 4742 | 44 | ಜನಾರ್ಧನ್ ಎಂ ಎಸ್ | 8022 |
| 17 | ಚಂದ್ರಶೇಖರ್ ಎಸ್ | 3100 | 45 | ನಾಗರಾಜ್ ಹೆಚ್ ಎನ್ | 7451 |
| 18 | ಬದ್ರಿನಾಥ್ ಬಿ ಆರ್ | 1542 | 46 | ವಿಜಯರಾಮಚಂದ್ರ | 4213 |
| 19 | ಮಂಜುನಾಥ್ ಸಿ ವಿ | 2411 | 47 | ಸುಬ್ಬರಾವ್ ಕೆ ವಿ | 4782 |
| 20 | ಸತ್ಯನಾರಯಣ ಕೆ ಎನ್ | 1339 | 48 | ಸತ್ಯನಾರಾಯಣ ಹೆಚ್ ಎಸ್ | 5495 |
| 21 | ಕಳಸ್ವಾಡ್ ಮಾಧುರಾವ್ | 1746 | 49 | ದಾಕ್ಷಯಿಣಿ ಪಿ ಆರ್ | 4206 |
| 22 | ಕಮಲಮ್ಮ ಜಿ | 3072 | 50 | ನರಸಿಂಹಮೂರ್ತಿ ಎಂ ಎನ್ | 5504 |
| 23 | ನಂಜುಂಡಸ್ವಾಮಿ ವೈ ಎನ್ | 4557 | 51 | ಮಂಜುನಾಥ್ ಜಿ ಎಸ್ | 617 |
| 24 | ಚಂದ್ರಶೇಖರ್ ಕೆ ಎಸ್ | 5950 | 52 | ಶಂಕರ ಕೆ | 7772 |
| 25 | ಪರಿಮಳ ಎಂ ಎಸ್ | 5499 | 53 | ಕೃಷ್ಣ ಮೂರ್ತಿ ಕೆ ಎಸ್ | 7810 |
| 26 | ಮಂಜುಳಾದೇವಿ | 3890 | 54 | ಗೀತಾ ಹೆಚ್ ಎನ್ | 4826 |
| 27 | ಜಗದೀಶ ಜಿ ಡಿ | 1775 | 55 | ಶೇಷಾದ್ರಿ ಕೆ | 7270 |
| 28 | ಸತ್ಯನಾರಾಯಣ ಕೆ ಆರ್ | 3998 | | | |

**6. 28ನೇ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು ಓದಿ ದಾಖಲಿಸುವುದು:**

ನಿರ್ದೇಶಕರಾದ ಶ್ರೀ ಹೆಚ್.ಎಸ್. ಪ್ರಶಾಂತ್ ತಾತಾಚಾರ್‌ರವರು 28ನೇ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು ಪುಟವಾರು ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ಈ ನಡಾವಳಿಯನ್ನು ಈಗಾಗಲೇ ಇಲಾಖೆಗೆ ಕಳುಹಿಸಲಾಗಿದ್ದು, ಇದರಲ್ಲಿ ತಿದ್ದುಪಡಿ ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದರು. ಅಧ್ಯಕ್ಷರು ತಾವೇ ಇದಕ್ಕೆ ಅಭಿಪ್ರಾಯ ಸೂಚಿಸಬೇಕು ಎಂದು ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ಮುಂದೆ ಮುದ್ರಣ ದೋಷಗಳನ್ನು ಸರಿಪಡಿಸಿಕೊಂಡು ಸಲ್ಲಿಸುವ ಅಭಿಪ್ರಾಯ ವ್ಯಕ್ತಪಡಿಸಿದರು. ಮುಂದುವರೆದು ನನ್ನ ಪ್ರಶ್ನೆಗೆ ನಾನೇ ಉತ್ತರ ನೀಡಬೇಕೆ ಎಂದು ಕೇಳಿದ್ದಕ್ಕೆ ಅಧ್ಯಕ್ಷರು ಉತ್ತರಿಸಿ ಕೆಲವೊಂದು ಪ್ರಶ್ನೆಗೆ ತಮ್ಮ ಬಳಿಯೇ ಉತ್ತರವೂ ಇರುವುದರಿಂದ ಈ ರೀತಿಯ ಪ್ರಶ್ನೆಗಳು ಅವಶ್ಯಕತೆಯೇ? ಆದುದರಿಂದ ತಾವೇ ಉತ್ತರವನ್ನು ನೀಡುವಂತೆ ತಿಳಿಸಿದ್ದು ಎಂದರು ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಪುಟ ಸಂಖ್ಯೆ:7 ರಲ್ಲಿ ಕೆಲವೊಂದು ಕ್ರಮವಿಡಲಾಗುವುದು ಎಂಬುವುದಕ್ಕೆ ಭದ್ರತಾ ಕಪಾಟಿನ ಠೇವಣಿ ಮೇಲಿನ ಬಡ್ಡಿ ಸರಿಪಡಿಕೊಳ್ಳಲಾಗಿದೆಯೇ ಎಂದು ಪ್ರಶ್ನಿಸಿದರು. ಇದಕ್ಕೆ ಪ್ರಭಾರ ಕಾರ್ಯದರ್ಶಿಯವರು ಉತ್ತರಿಸಿ ಆರ್ಥಿಕ ತ:ಖ್ತೆಯಲ್ಲಿ ಸರಿಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು. ಶ್ರೀ ಕೇಶವಪ್ರಸಾದ್‌ರವರು ಮಾತನಾಡಿ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್‌ನ ಠೇವಣಿ ಮೊಬಲಗು ಖಂಡಿತ ಬರುವುದು ಎಂದು ತಿಳಿಸಿರುವುದರ ಸ್ಥಿತಿಯನ್ನು ತಿಳಿಸುವಂತೆ ಪ್ರಶ್ನಿಸಿದರು. ಅಧ್ಯಕ್ಷರು ಉತ್ತರಿಸಿ ಮುಂದೆ ಇದರ ಬಗ್ಗೆ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಪುಟ ಸಂಖ್ಯೆ:12ರಲ್ಲಿ ಕಟ್ಟಡದ ಸಿ ಆರ್ ನೀಡಲು ಸತಾಯಿಸುತ್ತಿದ್ದಾರೆ ಎಂದು ರೆಕಾರ್ಡು ಆಗಿರುವುದು ಅಂದಿನ ಚರ್ಚೆಗೆ ಬಂದಿರಬಹುದು ಈ ಪದವನ್ನು ಸಕಾಲದಲ್ಲಿ ಪಡೆಯಲು ಆಗುತ್ತಿಲ್ಲ ಎಂದು ತಿಳಿಸಬಹುದಿತ್ತೆಂದು ತಿಳಿಸಿದರು. ಶ್ರೀ ಕೇಶವಪ್ರಸಾದ್‌ರವರು ಮಾತನಾಡಿ ಅನುಪಾಲನಾ ವರದಿಯಲ್ಲಿ 93 ಜನರಿಗೆ ವಕೀಲರಿಂದ ನೋಟಿಸ್ ನೀಡಲಾಗಿದ್ದು, ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಿರುವುದರ ಸ್ಥಿತಿಗತಿಯನ್ನು ತಿಳಿಸಿ ಎಂದು ಕೇಳಿದರು. ಮುಂದುವರೆದು ಮಾತನಾಡಿ ದಾವಾ ಹೂಡಿರುವ ಯಾವುದೇ ಲಕ್ಷಣ ಈ ಬಾರಿ ಆರ್ಥಿಕ ತ:ಖ್ತೆಯಲ್ಲಿ ಕಂಡುಬಂದಿರುವುದಿಲ್ಲವೆಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಆ ವಿಷಯ ಬಂದಾಗ ಇದಕ್ಕೆ ಉತ್ತರ ನೀಡಲಾಗುವುದು, ಈಗ ಮಂಡನೆ ಮಾಡುತ್ತಿರುವ ವಿಷಯ ಕಳೆದ ಸಭೆಯ ನಡಾವಳಿ ಮುಂದಿನ ವಿಷಯಗಳಲ್ಲಿ ಇದರ ಸ್ಥಿತಿಗತಿಯ ಮಾಹಿತಿಯನ್ನು ನೀಡಲಾಗುವುದು ಎಂದು ತಿಳಿಸಿದರು. ಶ್ರೀ ಕೇಶವ ಪ್ರಸಾದ್‌ರವರು ಮಾತನಾಡಿ ಈ ವಿಷಯವನ್ನು ಯಾವ ವಿಷಯ ಬಂದಾಗ ಚರ್ಚಿಸಬೇಕು ಎಂದು ಕೇಳಿದರು. ಅಧ್ಯಕ್ಷರು ಉತ್ತರಿಸಿ ಇತರೇ ವಿಷಯಗಳಲ್ಲಿ ಕೇಳಬಹುದು ಎಂದು ಉತ್ತರಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ವಾರ್ಷಿಕ ವರದಿ ಪುಟ ಸಂಖ್ಯೆ:15ರಲ್ಲಿ ಚರ್ಚಿಸಬಹುದು ಎಂದು ತಿಳಿಸಿದರು. ನಂತರ 28ನೇ ವಾರ್ಷಿಕ ನಡಾವಳಿಗಳಿಗೆ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಲಾಯಿತು.

**7. 2023–24ನೇ ಸಾಲಿನ ಆಡಳಿತ ಮಂಡಲಿಯ ವರದಿ:**

ಪ್ರಭಾರ ಕಾರ್ಯದರ್ಶಿಯವರು ಅಧ್ಯಕ್ಷರಾದ ಶ್ರೀ ಎಂ ಡಿ ಗೋಪಿನಾಥ್‌ರವರು ಈ ವಿಷಯವನ್ನು ಸಭೆಗೆ ಮಂಡಿಸುತ್ತಾರೆ ಎಂದು ತಿಳಿಸಿದರು.

ಅಧ್ಯಕ್ಷರಾದ ಶ್ರೀ ಎಂ ಡಿ ಗೋಪಿನಾಥ್‌ರವರು, 2023–24ನೇ ಸಾಲಿನ ಆಡಳಿತ ಮಂಡಲಿಯ ವರದಿಯನ್ನು ಸಭೆಗೆ ತಿಳಿಸುತ್ತಾ ಸಂಘದ ಆಡಳಿತ ಮಂಡಲಿ ಚುನಾವಣೆಯು ದಿನಾಂಕ:28/01/2024ರಂದು ನಡೆದಿದ್ದು, ದಿನಾಂಕ:08/02/2024ರಂದು ನೂತನ ಪದಾಧಿಕಾರಿಗಳ ಆಯ್ಕೆಯಾಗಿ ನೂತನ ಆಡಳಿತ ಮಂಡಲಿಯು ಅಧಿಕಾರಕ್ಕೆ ಬಂದಿರುತ್ತದೆ. ಚುನಾಯಿತರಾಗಿರುವ ಎಲ್ಲಾ ನಿರ್ದೇಶಕರ ಪರವಾಗಿ ಸಂಘದ ಎಲ್ಲಾ ಸದಸ್ಯರಿಗೂ ವಂದನೆಗಳನ್ನು ತಿಳಿಸುತ್ತಾ, ಮುಂದಿನ ದಿನದಲ್ಲಿ ಸಂಘದ ಅಭಿವೃದ್ಧಿಗಾಗಿ ಎಲ್ಲಾ ನಿರ್ದೇಶಕರು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಸಂಘದ ಮತ್ತು ಸದಸ್ಯರ ಅನುಕೂಲಕ್ಕಾಗಿ ಶ್ರಮಿಸಲಾಗುವುದು ಎಂದು ತಿಳಿಸಿದರು. ಇಂದಿನ ಸರ್ವಸದಸ್ಯರ ಸಭೆಯನ್ನು ಕಾರ್ಯಕ್ರಮದ ವಿಷಯ ಸೂಚಿಯಂತೆ ನಡೆಸಲು ತಿಳಿಸಿದರು. ಈ ಬಾರಿ ನಿವ್ವಳ ಲಾಭದಲ್ಲಿ ಕಡಿಮೆಯಾಗಿರುತ್ತದೆ ಸಂಘದಲ್ಲಿ ಚುನಾವಣೆ ಖರ್ಚುಗಳು ಹಾಗೂ ರಜತ ಸಿರಿ ಆರ್ ಡಿ ಖಾತೆಯ ಮೇಲಿನ ಬಡ್ಡಿ ಹೆಚ್ಚುವರಿಯಾಗಿರುತ್ತದೆ. ಮುಂದಿನ ದಿನಗಳಲ್ಲಿ ಹೆಚ್ಚು ಲಾಭ ಮಾಡುವ ಬಗ್ಗೆ ಹೆಚ್ಚು ಒತ್ತು ನೀಡಲಾಗುವುದು ಎಂದು ನಮ್ಮ ಆಡಳಿತ ಮಂಡಲಿಯ ಪರವಾಗಿ ವಿಶ್ವಾಸವನ್ನು ನೀಡಲಾಗುವುದು ಎಂದು ತಿಳಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಕಳೆದ ನಾಲ್ಕು ವರ್ಷಗಳಿಂದ ಸಂಘವು 'ಬಿ' ದರ್ಜೆಯಲ್ಲಿ ಬರುತ್ತಿರುವ ಕಾರಣ ಅದಕ್ಕೆ ತಾವು ತೆಗೆದುಕೊಂಡಿರುವ ಕ್ರಮದ ಮಾಹಿತಿ ನೀಡಲು ತಿಳಿಸಿದರು. ಸುಸ್ತಿ ಸಾಲದ ವಸೂಲಾತಿಗೆ ಹೆಚ್ಚಿನ ಕಾನೂನು ಕ್ರಮವನ್ನು

ತೆಗೆದುಕೊಳ್ಳಲಾಗುತ್ತಿದೆ, ಸದಸ್ಯರು ಸಹಕರಿಸುವಂತೆ ಕೇಳಲಾಯಿತು. ಸಾಲ ಪಡೆದ ಸದಸ್ಯರು ಕ್ರಮವಾಗಿ ಮರುಪಾವತಿ ಮಾಡಬೇಕು ಎಲ್ಲ ಸದಸ್ಯರು ಸಕ್ರಿಯವಾಗಿ ಸಂಘವು ಒದಗಿಸುವ ಸೌಲಭ್ಯಗಳನ್ನು ಪಡೆದುಕೊಂಡು ನಿರಂತರವಾದ ವ್ಯವಹಾರದಲ್ಲಿ ತೊಡಗಿಸಿಕೊಳ್ಳುವಂತೆ ತಿಳಿಸಿದರು. ಶ್ರೀ ಸಿ ಎಸ್ ಚಂದ್ರಶೇಖರ್‌ರವರು ಮಾತನಾಡಿ ಜಮಾ ಖರ್ಚು ಹಾಕಿಲ್ಲ ಇದರ ಅನುಮೋದನೆ ಬೇಡವೇ ಎಂದು ಪ್ರಶ್ನಿಸಿದರು. ಅಧ್ಯಕ್ಷರು ಉತ್ತರಿಸಿ ಪ್ರತಿ ಬಾರಿ ಲಾಭ-ನಷ್ಟ ಮತ್ತು ಆಸ್ತಿ ಜವಾಬ್ದಾರಿ ತ:ಖ್ತೆಗಳನ್ನು ಮಾತ್ರ ಅನುಮೋದನೆ ಪಡೆಯುತ್ತಿದ್ದೆವು. ತಾವು ಈ ಬಾರಿ ತಿಳಿಸಿರುವುದನ್ನು ಮುಂದಿನ ಸಭೆಯಲ್ಲಿ ಅಳವಡಿಸಿಕೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ಕಣ್ಣಾಮಾಚಾರ್‌ರವರು ಮಾತನಾಡಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಏಕೆ ನೆರವೇರಿಸಲಿಲ್ಲ ಎಂಬುದರ ಬಗ್ಗೆ ವಿಚಾರಿಸಿದರು. ಅಧ್ಯಕ್ಷರು ಉತ್ತರಿಸಿ ಈ ಕಾರ್ಯಕ್ರಮವನ್ನು ಬೆಳಿಗ್ಗೆ 9.30ಗಂಟೆಗೆ ನೆರವೇರಿಸಲಾಯಿತು ಎಂದು ತಿಳಿಸಿದರು. ಶ್ರೀ ಸಿ ಎಸ್ ಚಂದ್ರಶೇಖರ್‌ರವರು ಮಾತನಾಡಿ ಪುಟ ಸಂಖ್ಯೆ:5ರಲ್ಲಿ ತುಲನಾತ್ಮಕ ವಿವರಗಳಲ್ಲಿ ಸುಸ್ತಿಸಾಲದ ಮತ್ತು ಡಿಕ್ರಿ ಸಾಲದ ಮಾಹಿತಿಗಳನ್ನು ನೀಡಲು ತಿಳಿಸಿದರು. ಶ್ರೀ ಯೋಗಿಶ್‌ರವರು (ಸ. ಸಂಖ್ಯೆ:6551) ಸದಸ್ಯರ ಹಕ್ಕಿನ ಬಗ್ಗೆ ಸೂಕ್ತ ಮಾಹಿತಿಗಳನ್ನು ತಾವು ನೀಡಿರುವುದಿಲ್ಲ, ಚುನಾವಣೆ ಸಮಯದಲ್ಲಿ ನಿಮಗೆ ಮತದಾನದ ಹಕ್ಕು ಇರುವುದಿಲ್ಲವೆಂದು ತಿಳಿಸಿದಾಗ ಇದರ ಬಗ್ಗೆ ಅಪೂರ್ಣವಾದ ಮಾಹಿತಿ ಸದಸ್ಯರಿಗೆ, ಸೂಕ್ತವಾದ ಮಾಹಿತಿಯನ್ನು ಒದಗಿಸಬೇಕು ಅಲ್ಲವೇ ಎಂದು ಪ್ರಶ್ನಿಸಿದರು. ಅಧ್ಯಕ್ಷರು ಉತ್ತರಿಸಿ ಸಂಘದ ಪ್ರತಿ ಸರ್ವಸದಸ್ಯರ ಸಭೆಯಲ್ಲಿ ಮಾಹಿತಿಯನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು. ಮೊದಲಿಗೆ ಸರ್ಕಾರದ ನಿಯಮಗಳಿಗೆ ಎಲ್ಲರು ಬದ್ಧರಾಗಿರಬೇಕು ಎಂದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಜಮಾ ಖರ್ಚು ತ:ಖ್ತೆಯನ್ನು ಸರ್ವಸದಸ್ಯರ ಸಭೆಯಲ್ಲಿ ಮಂಡಿಸಬೇಕು ಎಂದು ಸಂಘದ ಉಪನಿಯಮದ ಪುಟ ಸಂಖ್ಯೆ:24ರಲ್ಲಿರುವುದರಿಂದ ಮುಂದೆ ಇದನ್ನು ಅಳವಡಿಸುವಂತೆ ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಈಗಾಗಲೇ ತಿಳಿಸಿರುವಂತೆ ಮುಂದೆ ಅಳವಡಿಸಿಕೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ಮುಳ್ಳೂರು ಗುರುಪ್ರಸಾದ್‌ರವರು (ಸ. ಸಂಖ್ಯೆ:4663) ಮಾತನಾಡಿ ಸದಸ್ಯರ ಲಾಭಾಂಶದ ಬಗ್ಗೆ ಮಾತನಾಡಬೇಕು ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ಸದಸ್ಯರೆಲ್ಲರಿಗೂ ಮತ್ತೊಮ್ಮೆ ವಿಷಯ ಸೂಚಿಯಂತೆ ಕಾರ್ಯಕ್ರಮವನ್ನು ನಡೆಸಲು ತಿಳಿಸಿದರು. ಶ್ರೀ ರಮೇಶ್ ಕುಮಾರ್‌ರವರು (ಸ. ಸಂಖ್ಯೆ:3573) ಮಾತನಾಡಿ ಅಧ್ಯಕ್ಷರು ಚರ್ಚಿಸುತ್ತಿರುವ ವಿಷಯಕ್ಕೆ ಮಾತ್ರ ಉತ್ತರಿಸಿ ರೂಲಿಂಗ್ ಕೊಡಿ ಎಂದು ಸಲಹೆ ನೀಡಿದರು. ಸಂಘದ ಖಜಾಂಚಿಗಳು ಅಧ್ಯಕ್ಷರ ಅನುಮತಿ ಪಡೆದು ಸಂಘದ ಸಧಸ್ಯರು ಹಾಗೂ ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಶ್ರೀ ಟಿ ಎಸ್ ಶ್ರೀವತ್ಸರವರು ಸಭೆಗೆ ಆಗಮಿಸಿದ್ದು, ಅವರನ್ನು ಸ್ವಾಗತಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಠೇವಣಾತಿ ಕಳೆದ ಬಾರಿಗೆ ಹೋಲಿಸಿದಾಗ ಈ ಬಾರಿ ರೂ.1.50 ಕೋಟಿ ಕಡಿಮೆಯಾಗಿರುವುದರಿಂದ ಸಂಘದ ಮೂಲ ಬಂಡವಾಳ ಕಡಿಮೆ ಆಗಲಿಲ್ಲವೇ ಅದೇ ರೀತಿ ಕಾಯ್ದಿರಿಸಿದ ಲೆಕ್ಕಗಳು ರೂ.30ಲಕ್ಷ ಹೆಚ್ಚು ಆಗಿರುತ್ತದೆ, ಹಿಂದಿನ ವರ್ಷದ ನಿವ್ವಳ ಲಾಭಕ್ಕೆ ಹೋಲಿಕೆ ಮಾಡಿದಾಗ ಈ ಬಾರಿ ಕಡಿಮೆ ಆಗಿರುತ್ತದೆ. ಸಂಸ್ಥೆಯ ವರ್ಗೀಕರಣವು 'ಬಿ' ದರ್ಜೆಯಾಗಿದ್ದು, ಇದಕ್ಕೆ ಸೂಕ್ತ ಮಾಹಿತಿ ನೀಡಬೇಕು ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಠೇವಣಾತಿಗಳು ಬಡ್ಡಿದರ ಕಾಲಕ್ಕೆ ನಿರ್ಧರಿಸಿದ ಆಧಾರವಾಗಿ ಇರುತ್ತದೆ. ಸದಸ್ಯರು ಠೇವಣಾತಿಯಲ್ಲಿ ಕಡಿಮೆಯಾದರು ವಸೂಲಾತಿ ಹೆಚ್ಚು ಮಾಡಿಕೊಳ್ಳುವುದರಿಂದ ಸಂಘಕ್ಕೆ ಒಳ್ಳೆಯದೆ ಆಗುವುದು. ಠೇವಣಾತಿಗೆ ನೀಡುವ ಬಡ್ಡಿ ದರವು ಅವರ ಅವಧಿ ಮುಕ್ತಾಯದವರೆಗೂ ನೀಡಲೇಬೇಕಾಗಿರುತ್ತದೆ ಸಂಘಕ್ಕೆ ಆ ನಿರ್ದಿಷ್ಟ ಅವಧಿವರೆಗೂ ಹೊರೆಯಾಗಿರುತ್ತದೆ ಎಂದು ತಿಳಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಠೇವಣಿ ಮೇಲಿನ ಬಡ್ಡಿದರವು ಸಾಲದ ಮೇಲಿನ ಬಡ್ಡಿದರಕ್ಕಿಂತ ಕಡಿಮೆ ಅಲ್ಲವೇ, ಸಂಘದಲ್ಲಿ ಠೇವಣಿ ಮೊತ್ತ ಕಡಿಮೆಯಾಗಬಾರದು ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ತಮ್ಮ ಸಲಹೆಯಂತೆ ಮುಂದಿನ ದಿನಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಅಧ್ಯಕ್ಷರು ಮುಂದುವರೆದು ಮಾತನಾಡಿ ಇಂದಿನ ಸಭೆಯಲ್ಲಿ ಸದಸ್ಯರೆಲ್ಲರಿಗೂ ಠೇವಣಿ ಮಾಡುವಂತೆ ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ಪುಟ ಸಂಖ್ಯೆ:6 ರಲ್ಲಿ ಮರಣ ನಿಧಿ ಸಂಖ್ಯೆ ಎಂಬುದನ್ನು ಮರಣ ಸಂಖ್ಯೆ ಎಂದು ಮಾಡಿಕೊಳ್ಳಲು ತಿಳಿಸಿದರು. ಮುಂದುವರೆದು ಮಾತನಾಡಿ ಪುಟ ಸಂಖ್ಯೆ:7 ರಲ್ಲಿ ಸದಸ್ಯರ ಲಾಭಾಂಶ 3 ವರ್ಷದ ಒಳಗೆ ಪಡೆಯದೆ ಇದ್ದಲ್ಲಿ ಮೀಸಲು ನಿಧಿಗೆ ವರ್ಗಾವಣೆ ಮಾಡುವುದು ಸೆಪ್ಟಂಬರ್‌ನಲ್ಲಿ ವರ್ಗಾವಣೆ ಮಾಡಬೇಕು ನೀವು ಡಿಸೆಂಬರ್‌ವರೆಗೂ ವಿಸ್ತರಿಸಿರುವುದು ಕಾನೂನಿನಲ್ಲಿ ಅವಕಾಶವಿರುವುದಿಲ್ಲ ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಸದಸ್ಯರ ಅನುಕೂಲಕ್ಕಾಗಿ ಈ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು, ಶ್ರೀ ರಮೇಶ್ ಕುಮಾರ್‌ರವರು ಮಾತನಾಡಿ ಕಾನೂನು ಚೌಕಟ್ಟನ್ನು ಬಿಟ್ಟು ಹೋಗುವುದು ಬೇಡ ಎಂದು ತಿಳಿಸಿದರು. ಈ ದಿನಾಂಕವನ್ನು 30/09/2024 ಎಂದು ಮಾಡಲು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಪುಟ ಸಂಖ್ಯೆ:8ರಲ್ಲಿ ಜಿಎಸ್‌ಟಿ ಶಾಸನಬದ್ಧವಾದ ಕಡಿತವನ್ನು ಸಂಗ್ರಹಣೆಯ ಪಾವತಿ ಎಂದು ತಿದ್ದುಪಡಿ ಮಾಡಿಕೊಳ್ಳಲು ತಿಳಿಸಿದರು. ಶ್ರೀ ಸಿ ಎಸ್ ಚಂದ್ರಶೇಖರ್‌ರವರು ಮಾತನಾಡಿ ಪುಟ ಸಂಖ್ಯೆ:9ರಲ್ಲಿ ಧನವಿನಿಯೋಗಗಳ

ವಿವರದಲ್ಲಿ ಎನ್ ಸಿ ಬಿ ಯಲ್ಲಿ ಕಳೆದ ಬಾರಿಗೆ ಹೋಲಿಸಿದಾಗ ಈ ಬಾರಿಯ ಮೊಬಲಗಿನ ವ್ಯತ್ಯಾಸ ವಿವರ ನೀಡಲು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ವಿಮೆಯಿಂದ ರೂ.5ಲಕ್ಷ ಬಂದಿರುವುದರಿಂದ ಠೇವಣಿ ಮೊತ್ತ ಕಡಿಮೆಯಾಗಿರುತ್ತದೆ ಎಂದು ತಿಳಿಸಿದರು. ಶ್ರೀ ಕೇಶವಪ್ರಸಾದ್‌ರವರು ಮಾತನಾಡಿ ಬಡ್ಡಿ ಬಗ್ಗೆ ವಿಚಾರ ಮಾಡಿದರು. ಅಧ್ಯಕ್ಷರು ಉತ್ತರಿಸಿ ಠೇವಣಾತಿಯನ್ನು ನವೀಕರಿಸಿದಾಗ ಬಡ್ಡಿಯನ್ನು ಸೇರಿ ನವೀಕರಣವಾಗುತ್ತಿರುತ್ತದೆ ಎಂದು ತಿಳಿಸಿದರು. ಶ್ರೀ ಕೇಶವಪ್ರಸಾದ್‌ರವರು ಆಟೋ ರಿನೀವಲ್ ಆಗುವುದಿಲ್ಲವೇ ಎಂದು ಕೇಳಿದರು. ಅದಕ್ಕೆ ಅಧ್ಯಕ್ಷರು ಪ್ರತ್ಯುತ್ತರವಾಗಿ ನಾವು ನವೀಕರಣಕ್ಕೆ ಸೂಚನೆ ನೀಡಿದರೇ ಮಾತ್ರ ಮಾಡಲಾಗುತ್ತಿದ್ದು, ಅಲ್ಪಾವಧಿಗೆ ಮಾತ್ರ ನವೀಕರಣವನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು. ಶ್ರೀ ಚಂದ್ರಶೇಖರ್‌ರವರು ಮಾತನಾಡಿ ರೂ.5ಲಕ್ಷ ವಿಮೆಯಿಂದ ಬಂದಿರುವುದಾಗಿ ತಿಳಿಸಿದ್ದು, ರೂ.3ಲಕ್ಷ ವ್ಯತ್ಯಾಸ ಕಾರಣ ಕೇಳಿದರು. ಅಧ್ಯಕ್ಷರು ಉತ್ತರಿಸಿ ನವೀಕರಣ ಮಾಡಿದಾಗ ಆ ಠೇವಣಾತಿಯ ಬಡ್ಡಿಯನ್ನು ಸಹ ಸೇರಿಸಿ ಮಾಡಲಾಗುತ್ತಿದೆ ಏಕೆಂದರೆ ಆರ್‌ಬಿಐ ನಿರ್ಬಂಧದಿಂದ ಯಾವುದೇ ಮೊತ್ತವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದರು. ಶ್ರೀ ರಮೇಶ್ ಕುಮಾರ್ ರವರು ಮಾತನಾಡಿ ತಾವು ಎನ್ ಸಿ ಬ್ಯಾಂಕ್ ಎಂದು ನಮೂದಿಸಿರುವ ಉದ್ದೇಶವನ್ನು ತಿಳಿಸಿ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ಎಂದು ನಮೂದಿಸಬಹುದಿತ್ತು ವಿಮೆಯಿಂದ 5ಲಕ್ಷ ಹಣ ಬಂದ ಮೇಲೆ ಇನ್ನು ಮುಂದೆ ಯಾವುದು ಮೊತ್ತ ವಾಪಸ್ ಬರುವುದಿಲ್ಲ ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಸರ್ವಸದಸ್ಯರ ಸಭೆಯಲ್ಲಿ ತಪ್ಪು ಮಾಹಿತಿ ನೀಡುವುದು ಬೇಡ, ನಾವು ಹಣ ಹಿಂಪಡೆಯಲು ಎಲ್ಲಾ ರೀತಿಯ ಕಾನೂನು ಕ್ರಮವನ್ನು ತೆಗೆದುಕೊಳ್ಳಲಾಗಿದ್ದು, ಅವರ ಬಳಿ ಮಾತನಾಡಲಾಗಿರುತ್ತದೆ ಯಾವುದೇ ವಂಚನೆಯಾಗಿರುವುದಿಲ್ಲ ಬ್ಯಾಂಕ್ ವಿಲೀನಿಕರಣಕ್ಕೆ ಕ್ರಮಕೈಗೊಳ್ಳಲಾಗುತ್ತಿದ್ದು, ಆ ನಂತರ ನಮ್ಮ ಠೇವಣಿಯನ್ನು ಹಿಂದಿರುಗಿಸುವಂತೆ ತಿಳಿಸಲಾಗಿದೆ ಎಂದು ತಿಳಿಸಿದರು. ಈ ಪ್ರಕ್ರಿಯೆ ನಡೆಯದೆ ಇದ್ದರೆ ಬ್ಯಾಂಕ್‌ನ್ನು ಸಮಾಪ್ತಿಗೊಳಿಸಿದರು ಸಹ ನಮ್ಮ ಠೇವಣಿ ಮೊತ್ತ ಬರುತ್ತದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ಕಳೆದ ಸರ್ವಸದಸ್ಯರ ಸಭೆಯಲ್ಲಿ ಇನ್ನು 4 ತಿಂಗಳಲ್ಲಿ ಹಣ ಬರುವುದಾಗಿ ತಿಳಿಸಲಾಗಿತ್ತು ಆದರೆ ಇದುವರೆಗೂ ಯಾವ ಮೊತ್ತವು ಬಂದಿರುವುದಿಲ್ಲ, ಈ ಹಿಂದೆ ನಿರ್ದೇಶಕ ಮಂಡಲಿ ಸಭೆಯ ನಿರ್ಧಾರಕ್ಕೆ ವಿರುದ್ಧವಾಗಿ ಮರುಹೂಡಿಕೆ ಮಾಡಿರುವುದು ತಪ್ಪು ಎಂದು ತಿಳಿಸಿದರು. ಮುಂದುವರೆದು ಈ ಪ್ರಕರಣ ಕಾಯಿದೆ ಅನ್ವಯ ತನಿಖೆ ಮಾಡಬೇಕಾಗಿರುವ ಪ್ರಕರಣವಾಗಿರುತ್ತದೆ ಸರಿಯಾಗಿರುವ ಮಾಹಿತಿಯನ್ನು ಸಭೆಗೆ ನೀವೇ ನೀಡಬೇಕು ಎಂದು ತಿಳಿಸಿದರು. ಅಧಕ್ಷರು ಉತ್ತರಿಸಿ ಆರ್‌ಬಿಐ ನಿರ್ಬಂಧ ಮುಕ್ತಾಯವಾಗುವವರೆಗೂ ಯಾವುದನ್ನು ಹೇಳಲಾಗುವುದಿಲ್ಲ ನಾವು ಎನ್ ಸಿ ಬ್ಯಾಂಕ್ ಅಧ್ಯಕ್ಷರ ಬಳಿ ಮಾತನಾಡಿದ್ದು, ವಿಲೀನೀಕರಣ ಆಗದೇ ಇದ್ದಲ್ಲಿ ಸಮಾಪ್ತಿಗೆ ಬರೆಯುವಂತೆ ಇದರಿಂದ ಠೇವಣಿದಾರರಿಗೆ ಠೇವಣಿ ಮೊತ್ತವನ್ನು ಅವರ ಭದ್ರತಾ ಠೇವಣಿ ಹಾಗೂ ಇತರೇ ನಿಧಿಗಳಿಂದ ಪಾವತಿಸಬಹುದಾಗಿರುತ್ತದೆ ಎಂದು ಭರವಸೆ ನೀಡಿರುತ್ತಾರೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ನಮಗೆ ಬರಬೇಕಾದ ಬಡ್ಡಿ ಕಡಿಮೆಯಾಗುತ್ತಿರುವುದಕ್ಕೆ ಯಾರು ಹೊಣೆ ಆಗಬಹುದು ಎಂದು ತಿಳಿಸಿದರು. ಖಜಾಂಚಿಗಳು ಮಾತನಾಡಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ ಎನ್ ಸಿ ಬಿ ಯವರು ಠೇವಣಿ ವಾಪಸಾತಿಗೆ ಆರ್‌ಬಿಐ ನಿರ್ಬಂಧ ಸಡಿಲಿಕೆ ನಂತರ ನೀಡುವುದಾಗಿ ತಿಳಿಸಿರುತ್ತಾರೆ ಎಂದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ತಾವು ಠೇವಣಿಯನ್ನು ಅವಧಿಗೆ ಮುಕ್ತಾಯಗೊಳಿಸಬಹುದಾಗಿತ್ತು, ಆದರೆ ಭವಿಷ್ಯದಲ್ಲಿ ಏನಾಗಬಹುದು ಎಂಬುದರ ಬಗ್ಗೆ ಮಾಹಿತಿ ಯಾರಿಗೂ ಇರುವುದಿಲ್ಲ ಎಂದು ತಿಳಿಸುತ್ತಾ ಇನ್ನು ಮುಂದೆ ಎನ್ ಸಿ ಬಿ ಎಂಬುದರ ಬದಲಿಗೆ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ಎಂದು ಅದರ ಸಮಸ್ಯೆಗಳನ್ನು ಸಹ ನಮೂದಿಸಬೇಕು ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಇದರ ಬಡ್ಡಿದರವು ಕಡಿಮೆಯಾಗಿರುವುದಕ್ಕೆ ಆಡಳಿತ ಮಂಡಲಿಯವರೇ ಹೊಣೆಗಾರರು ಎಂದು ತಿಳಿಸಿದರು. ಖಜಾಂಚಿಗಳು ಉತ್ತರಿಸಿ ತಮ್ಮ ಅನಿಸಿಕೆಯನ್ನು ಒಪ್ಪಲಾಗುವುದಿಲ್ಲ, ನಾವು ಸಹ ಸುಮ್ಮನೆ ಇಲ್ಲದೇ ಎಲ್ಲಾ ರೀತಿಯ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತಿದೆ ಹಾಗೂ ನಮ್ಮ ಠೇವಣಿ ಹಿಂಪಡೆಯುವ ನಿಟ್ಟಿನಲ್ಲಿ ಕಾರ್ಯನಿರ್ವಹಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು. ಮುಂದುವರೆದು ಮಾತನಾಡಿ ಕಳೆದ ಬಾರಿ ಸ್ಥಿರಾಧಾರ ಸಾಲ ಪಡೆದ ಶ್ರೀ ಪರಮೇಶ್ವರ್‌ರವರ ಸುಸ್ತಿ ಸಾಲವನ್ನು ಸಹ ಮರುಪಾವತಿ ಮಾಡಿರುವುದಿಲ್ಲ ಎಂಬುದರ ಬಗ್ಗೆ ಅನೇಕ ಚರ್ಚೆಗಳು ನಡೆದಿದ್ದು, ಅದು ಈಗ ಸಂಪೂರ್ಣವಾಗಿ ಮರುಪಾವತಿ ಆಗಿರುತ್ತದೆ. ಅದೇ ರೀತಿ ಕ್ರಮ ತೆಗೆದುಕೊಳ್ಳಲು ಸಮಯಬೇಕಾಗುವುದು ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಆಡಳಿತ ಮಂಡಲಿಯವರು ನಿಷ್ಠೆಯಿಂದ ಕಾರ್ಯ ನಿರ್ವಹಣೆ ಮಾಡಲಾಗುತ್ತಿದ್ದು, ಇದಕ್ಕೆ ಯಾರು ದಂಡ ತೆರುವ ಅವಶ್ಯಕತೆ ಇರುವುದಿಲ್ಲ ಎಂದು ಸಭೆಯನ್ನು ಮುಂದುವರೆಸಲು ತಿಳಿಸಿದರು. ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಮಾಜಿ ನಿರ್ದೇಶಕರು ಶ್ರೀ ಪ್ರೀತನ್‌ರವರು ಹೇಳಿದಂತೆ ಡಿ ಆರ್ ಕಛೇರಿಗೆ ದೂರು ಸಲ್ಲಿಕೆ ನೀಡಲು ಸಾಧ್ಯವಿಲ್ಲ, ಎನ್ ಸಿ ಬಿ ಮುಖ್ಯ ಕಛೇರಿ ಬೆಂಗಳೂರು ಆದುದರಿಂದ ನೀವು ಆರ್‌ಸಿಎಸ್‌ನಲ್ಲಿ ಸಲ್ಲಿಸಬೇಕಾಗುತ್ತದೆ ಎಂದು ತಿಳಿಸಿದರು. ಶ್ರೀ ಕೌಶಿಕ್‌ರವರು ಮಾತನಾಡಿ ಶ್ರೀ

ಪ್ರೀತನ್‌ರವರು ಹೇಳಿದ ರೀತಿ ತಾವು ಡಿ ಆರ್ ಇಲಾಖೆಯಲ್ಲಿ ಕೇಸ್ ಹಾಕಬೇಕಾಗಿತ್ತು ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ವಿಷಯವನ್ನು ನಿಲ್ಲಿಸಿ ಅದಕ್ಕೆ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ಪಾರ್ಥಸಾರಥಿಯವರು ನಾನು ನೀಡಿರುವ ಅರ್ಜಿಯನ್ನು ಚರ್ಚಿಸುವಂತೆ ತಿಳಿಸಿದರು. ಈ ವಿಷಯವನ್ನು ಇತರೇ ವಿಷಯಗಳಲ್ಲಿ ತಿಳಿಸಲಾಗುವುದು ಎಂದು ತಿಳಿಸುತ್ತಾ, ಮುಂದಿನ ದಿನಗಳಲ್ಲಿ ಸರಿಯಾದ ಜಾಗದ ವ್ಯವಸ್ಥೆ ಮಾಡಿ ಸದಸ್ಯರಿಗೆ ಗೌರವವಿರಲಿ ಎಂದು ತಿಳಿಸಿದರು. ಶ್ರೀ ಪಾರ್ಥಸಾರಥಿಯವರು ಮಾತನಾಡಿ ಮೊದಲು ನನ್ನ ಅರ್ಜಿಯನ್ನು ಓದಿ ಎಂದು ಹೇಳಿದರು. ಅಧ್ಯಕ್ಷರು ಮಾತನಾಡಿ ವಿಷಯ ಸೂಚಿ ಪ್ರಕಾರ ಹೋಗುವಂತೆ ತಿಳಿಸಿರುತ್ತಾರೆ ಮುಂದೆ ಈ ವಿಷಯ ಬಂದಾಗ ಓದಲಾಗುವುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್‌ನ ದಿನಾಂಕ:31/03/2024ರ ಆರ್ಥಿಕ ತ:ಖ್ತೆಗಳನ್ನು ತರಿಸಿಕೊಳ್ಳುವಂತೆ ತಿಳಿಸಿದರು. ಶ್ರೀ ರಮೇಶ್‌ಕುಮಾರ್‌ರವರು ಮಾತನಾಡಿ ಪುಟ ಸಂಖ್ಯೆ:9ರಲ್ಲಿ ಚರ ಮತ್ತು ಸ್ಥಿರಾಸ್ತಿ ಎಂದು ನಾಗರೀಕ ಸೌಲಭ್ಯ ನಿವೇಶನದಲ್ಲಿ ಶಾಖೆಯನ್ನು ನಡೆಸಲಾಗುತ್ತಿದ್ದು, ಅದರಿಂದ ಲಾಭ ಬರುತ್ತಿದೆಯೇ 30 ವರ್ಷ ಆದ ನಂತರ ಸಂಘದ ಹೆಸರಿಗೆ ಪೂರ್ಣ ಮಾಲಿಕತ್ವ ನೀಡುವುದು ಅಸಾಧ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಶಾಖೆಯನ್ನು ಅಭಿವೃದ್ಧಿಪಡಿಸುವುದು ಅಸಾಧ್ಯ ಅದೇ ರೀತಿ ಬೇರೆಯವರಿಗೆ ಬಾಡಿಗೆ ನೀಡುವುದು ಕಾನೂನು ಬಾಹಿರವಾಗಿರುತ್ತದೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಸೂಕ್ತವಾದ ನಿರ್ಣಯವನ್ನು ಆಡಳಿತ ಮಂಡಲಿ ಸದಸ್ಯರು ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಅಧ್ಯಕ್ಷರು ಉತ್ತರಿಸಿ ಶಾಖೆಯಲ್ಲಿ ಇಬ್ಬರು ಸಿಬ್ಬಂದಿಯನ್ನು ಇಟ್ಟು ಕಾರ್ಯ ನಿರ್ವಹಿಸಲಾಗುತ್ತಿದೆ. ಅಲ್ಲಿ ಖರ್ಚುಗಳು ಸಹ ಕಡಿಮೆ ಈಗಾಗಲೇ ಬೆಂಗಳೂರಿನಲ್ಲಿ ಮಾಲಿಕತ್ವ ಪಡೆಯುವ ವ್ಯವಸ್ಥೆ ಬಂದಿದ್ದು, ಮುಂದೆ ಒಂದು ದಿನ ಮೈಸೂರಿನಲ್ಲಿಯೂ ಬರಬಹುದು. ಈಗಾಗಲೇ ಅಲ್ಲಿ ಬೆಲೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವುದರಿಂದ ತಾಳ್ಮೆಯಿಂದ ಕಾಯಬೇಕು ಎಂದು ತಿಳಿಸಿದರು. ಶ್ರೀ ರಮೇಶ್‌ಕುಮಾರ್‌ರವರು ಮಾತನಾಡಿ ಮಾಲೀಕರು ನಾವಲ್ಲದೇ ಇರುವುದರಿಂದ ಬೆಲೆ ಹೆಚ್ಚಳವಾದರು ನಮಗೆ ಉಪಯೋಗವಾಗುವುದಿಲ್ಲ ಮೈಸೂರಿನಲ್ಲಿ ಯಾರಿಗಾದರು ಸಿಎ ನಿವೇಶನವನ್ನು ಅವರ ಹೆಸರಿಗೆ ಮಾಲಿಕತ್ವ ನೀಡಿರುವ ಪ್ರಕರಣವಿದ್ದಲ್ಲಿ ನಮಗೂ ಸಿಗಬಹುದು ಅಂತಹ ಪ್ರಕರಣ ಇಲ್ಲದೇ ಇರುವುದರಿಂದ ಸಂಘಕ್ಕೆ ಅನಾವಶ್ಯಕ ಖರ್ಚಿನ ಹೊರೆ ತಡೆಯಲು ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಸವಕಳಿನಿಧಿಯಲ್ಲಿ ಮುಂದಿನ ದಿನದಲ್ಲಿ ಗುತ್ತಿಗೆ ಅವಧಿಯನ್ನು ವಿಸ್ತರಿಸಬಹುದು ಅದರ ಉಪಯೋಗಕ್ಕಾಗಿ ತೆಗೆದು ಇಡಲಾಗುತ್ತಿದ್ದು, ಮಾಲಿಕತ್ವ ನಮಗೆ ಸಿಗುವುದರ ಮಾಹಿತಿ ಇರುವುದಿಲ್ಲವೆಂದರು. ಶ್ರೀ ಶೈಲಾಪ್ರಕಾಶ್‌ರವರು ಮಾತನಾಡಿ ಅಧ್ಯಕ್ಷರು ಅದರ ಬೆಲೆ ಹೆಚ್ಚಳವಾಗುವುದು ಎಂಬ ಮಾಹಿತಿ ಸರಿಯಾಗಿರುವುದಿಲ್ಲ ಸಿಎ ನಿವೇಶನದ ಬೆಲೆ ಯಾವಾಗಲು ಶೂನ್ಯವಾಗಿರುತ್ತದೆ ಎಂದು ತಿಳಿಸಿದರು. ಸದಸ್ಯರುಗಳಾದ ಶ್ರೀ ಶೈಲಾಪ್ರಕಾಶ್, ಶ್ರೀ ಕೇಶವಪ್ರಸಾದ್, ಶ್ರೀ ರಮೇಶ್‌ಕುಮಾರ್ ಅವರುಗಳು ನಿವೇಶನವು ಸಂಘದ ಸುಪರ್ದಿಯಲ್ಲಿರುತ್ತದೆ ಆದರೆ ಮಾಲಿಕತ್ವ ಹೊಂದಿರುವುದಿಲ್ಲವೆಂದು ಅಭಿಪ್ರಾಯವನ್ನು ತಿಳಿಸಿದರು. ಮುಂದುವರೆದು ಇದರ ಬಗ್ಗೆ ಕಾನೂನು ಸಲಹೆಗಾರರ ಮಹಿತಿ ಪಡೆದು ಸೂಕ್ತ ಕ್ರಮಕೈಗೊಳ್ಳಲು ತಿಳಿಸಿದರು. ಅಧ್ಯಕ್ಷರು ತಮ್ಮ ಸಲಹೆಯಂತೆ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ಗುತ್ತಿಗೆ ಆಧಾರದ ಮೊತ್ತವನ್ನು 30 ವರ್ಷಗಳಿಗೆ ಭಾಗಿಸಿ ತೆಗದಿಡಲಾಗುತ್ತಿದ್ದು, ಈ ಮೊತ್ತವನ್ನು ಬಾಡಿಗೆ ರೀತಿಯಲ್ಲಿಯೇ ಪಾವತಿಸಲಾಗುತ್ತಿದೆ ಇದಲ್ಲದೆ ಇತರೇ ವೆಚ್ಚಗಳು ಇರುತ್ತದೆ. ಇದರ ನಿಟ್ಟಿನಲ್ಲಿ ಅಲ್ಲಿಂದ ಉತ್ಪತ್ತಿ ಎಷ್ಟು ಆಗುತ್ತಿರಬಹುದು ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ಈ ಮೊತ್ತವನ್ನು ಮುಂದೆ ಗುತ್ತಿಗೆ ಆಧಾರಕ್ಕೆ ನಿಗದಿಪಡಿಸುವ ಮೊತ್ತಕ್ಕೆ ಅಥವಾ ಅವಕಾಶವಿದ್ದಲ್ಲಿ ನಮಗೆ ಮಾಲಿಕತ್ವ ನೀಡಿದಾಗ ಈ ಮೊಬಲಗನ್ನು ಹೊಂದಾಣಿಕೆ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ಚಂದ್ರಶೇಖರ್ ರವರು ಮಾತನಾಡಿ ಟಿ ಡಿ ಎಸ್ ಬರಬೇಕಾದದ್ದು, 2014 ರಿಂದ ಇರುವುದನ್ನು ತಾವು ಬ್ಯಾಂಕ್ ಗಳಿಗೆ 80ಪಿ ಸೌಲಭ್ಯವಿರುವುದರ ಮಾಹಿತಿ ನೀಡಿದ್ದಲ್ಲಿ ಟಿಡಿಎಸ್ ಕಡಿತ ತಡೆಯಬಹುದಿತ್ತಲ್ಲವೇ, ಸಂಘದ ಪಾನ್ ಕಾರ್ಡ್‌ನಲ್ಲಿ ಹೆಸರು ವ್ಯತ್ಯಾಸದಿಂದ ರೀಫಂಡ್ ಮೊತ್ತವು ಸಹ ಬಂದಿರುವುದಿಲ್ಲ ಇದಕ್ಕೆ ಸೂಕ್ತ ಕ್ರಮ ಅಗತ್ಯ ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ಸಂಘವು ಕೆಲವೊಂದು ಪ್ರಕರಣದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಶ್ರೀ ಶ್ರೀನಿವಾಸ ಶರ್ಮರವರು ಸೂಕ್ತ ಸಲಹೆಯನ್ನು ಈ ಹೆಸರು ಬದಲಾವಣೆಯಲ್ಲಿ ಸೂಚಿಸಿದ್ದಾರೆ ಮುಂದೆ ಇದಕ್ಕೆ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಅನೇಕ ಚರ್ಚೆ ಹಾಗೂ ಸಲಹೆಯ ನಂತರ 2023–24ನೇ ಸಾಲಿನ ಆಡಳಿತ ಮಂಡಲಿ ವರದಿಗೆ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಲಾಯಿತು.

**8. <u>2023–24ನೇ ಸಾಲಿನ ಲೆಕ್ಕ ಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳ ಅನುಮೋದನೆ:</u>**

ಖಜಾಂಚಿಯವರಾದ ಶ್ರೀ ಕೆ ನಾಗರಾಜರವರು ವರದಿಪುಸ್ತಕದ ಪುಟ ಸಂಖ್ಯೆ:15ರಲ್ಲಿರುವ ಸುಸ್ತಿಸಾಲಗಳ ವರ್ಷಾವಾರು ವಿವರವನ್ನು ಮಂಡಿಸಿದರು. ಶ್ರೀ ಸಿ ಎಸ್ ಚಂದ್ರಶೇಖರ್‌ರವರು ಮಾತನಾಡಿ 6 ವರ್ಷದ ಮೇಲ್ಪಟ್ಟು ಸ್ಥಿರಾಧಾರ ಸಾಲ ಹಾಗೂ ವಾಹನ ಸಾಲದ ಸುಸ್ತಿ ವಸೂಲಾತಿಗೆ ವಾಹನ ಜಪ್ತಿ ಮಾಡಲಾಗಿದೆಯೆ, ವಿದ್ಯಾಭ್ಯಾಸ ಸಾಲ ಪ್ರಧಾನ ಕಛೇರಿ 3 ಶಾಖಾ ಕಛೇರಿ 4 ಕಳೆದ ಬಾರಿ 1 ಎಂದು ಇರುತ್ತದೆ ಎಂದು ಪ್ರಶ್ನಿಸಿದರು. ಖಜಾಂಚಿಗಳು ಉತ್ತರಿಸಿ ಕಳೆದ ಬಾರಿ ಮುದ್ರಣ ದೋಷವಾಗಿದ್ದು, ತಿದ್ದುಪಡಿಗೆ ಸೂಚಿಸಲಾಗಿರುತ್ತದೆ ಎಂದು ತಿಳಿಸಿದರು. ಮುಂದುವರೆದು ಮಾತನಾಡಿ ಆರು ವರ್ಷದ ಮೇಲ್ಪಟ್ಟು ಕೆಲವು ಸಾಲಗಳನ್ನು ಡಿಕ್ರಿ ಹೂಡಲಾಗಿದ್ದು, ಕಾನೂನು ಕ್ರಮಗಳನ್ನು ಕಟ್ಟುನಿಟ್ಟಾಗಿ ನಿರ್ವಹಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ವಾಹನವನ್ನು ಜಪ್ತಿ ಮಾಡಿ 15 ವರ್ಷಗಳ ನಂತರ ಕ್ರಮಕೈಗೊಳ್ಳದೆ ಇದ್ದರೆ ಸುಸ್ತಿ ವಸೂಲಾತಿ ಮಾಡಲು ಸಾಧ್ಯವೇ ಎಂದು ಕೇಳಿದರು. ಅಧ್ಯಕ್ಷರು ಉತ್ತರಿಸಿ ತಾವು ಕೇಳುತ್ತಿರುವ ಸದಸ್ಯರು ಪರಾರಿಯಾಗಿದ್ದು, ಅವರ ವಿವರ ತಿಳಿದಿರುವುದಿಲ್ಲ, ಅದು ತಮಗೂ ತಿಳಿದಿರುತ್ತದೆ ಎಂದು ತಿಳಿಸಿದರು. ಶ್ರೀ ಕೇಶವಪ್ರಸಾದ್‌ರವರು ಮಾತನಾಡಿ ಡಿಕ್ರಿ ಹಾಕಿದ ನಂತರ ಡಿಕ್ರಿ ಆವಾರ್ಡ್ ಆಗುತ್ತದೆ, ಆ ನಂತರ ಎಷ್ಟು ಪ್ರಕರಣ ಎಕ್ಸಿಕ್ಯುಷನ್‌ಗೆ ಹಾಕಲಾಗಿದೆ ಎಂದು ಕೇಳಿದರು. ಅಧ್ಯಕ್ಷರು ಉತ್ತರಿಸಿ ಇಲಾಖೆಯಲ್ಲಿ ಸೇಲ್ ಆಫೀಸರ್ ಇರಲಿಲ್ಲ ಈಗ ಬಂದಿದ್ದು, ಮುಂದೆ ಕ್ರಮಕೈಗೊಳ್ಳಲಾಗುವುದು ಎಂದು ಉತ್ತರಿಸಿದರು. ಶ್ರೀ ಚಂದ್ರಶೇಖರ್‌ರವರು ಮಾತನಾಡಿ ದಿನವಹಿ ತೀರುವಳಿ ಸಾಲದ 21 ಕೇಸ್‌ಗಳಿಗೆ ಕ್ರಮ ಏನು ತೆಗೆದುಕೊಳ್ಳಲಾಗಿದೆ ಎಂದು ಪ್ರಶ್ನಿಸಿದರು. ಖಜಾಂಚಿಗಳು ಉತ್ತರಿಸಿ ಆರು ವರ್ಷವಾಗಿರುವುದರಿಂದ ಡಿಕ್ರಿಗೆ ಹಾಕಲಾಗಿರುತ್ತದೆ ಎಂದು ಉತ್ತರಿಸಿದರು. ಈ ಬಾರಿ 93 ಕೇಸ್‌ಗಳನ್ನು ಡಿಕ್ರಿ ಹಾಕಲು ನೀಡಲಾಗಿದೆ ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಸಂಘದಲ್ಲಿ ಮೂವರು ಕಾನೂನು ಸಲಹೆಗಾರರಿದ್ದು, ಅವರಿಂದ ಡಿಕ್ರಿ ಕ್ರಮ ಕೈಗೊಳ್ಳುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು. ಶ್ರೀ ವೆಂಕಟಸುಬ್ಬಯ್ಯರವರು ಮಾತನಾಡಿ ವಾಹನ ಸಾಲಗಳನ್ನು ನೀಡುವ ಬದಲು ಮನೆ ಆಧಾರ ಸಾಲಗಳಿಗೆ ಹೆಚ್ಚು ಒತ್ತು ನೀಡುವಂತೆ ತಿಳಿಸಿದರು. ಮುಂದುವರೆದು ಸಂಘದಿಂದ ಸಾಲ ಕೊಡುವ ಮೊದಲು ಭದ್ರತೆ ಮುಖ್ಯವೆಂದು ತಿಳಿಸಿದರು. ಸಾಲದ ಮೇಲಿನ ಬಡ್ಡಿಯನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪರಿಶೀಲಿಸಿ ಅರ್ಧ ಪರ್ಸೆಂಟ್ ವಿನಾಯಿತಿ ನೀಡುವುದರಿಂದ ಸದಸ್ಯರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು. ಸುಸ್ತಿ ವಸೂಲಾತಿಯನ್ನು ಶಿಸ್ತಿನಿಂದ ಮಾಡಲು ಸೂಚಿಸಿದರು. ಅಧ್ಯಕ್ಷರು ತಮ್ಮ ಸಲಹೆ ಸೂಕ್ತವಾಗಿದ್ದು ಆಡಳಿತ ಮಂಡಲಿ ಪರವಾಗಿ ಧನ್ಯವಾದವನ್ನು ತಿಳಿಸಿದರು. ಶ್ರೀ ಕೇಶವಪ್ರಸಾದ್‌ರವರು ಮಾತನಾಡಿ ಮಾಜಿ ಅಧ್ಯಕ್ಷರಾದ ಶ್ರೀ ಸಿ ವಿ ಪಾರ್ಥಸಾರಥಿಯವರು ತುಂಬಾ ಹೊತ್ತಿನಿಂದ ವೇದಿಕೆ ಮೇಲೆ ಕಾಣುತ್ತಿಲ್ಲ ಇಷ್ಟು ಹೊತ್ತು ವೇದಿಕೆಯಿಂದ ಹೊರಗೆ ಹೋಗುವುದು ಸಭಾ ಮರ್ಯಾದೆಯಲ್ಲವೆಂದು ತಿಳಿಸಿದರು.

2023-24ನೇ ಸಾಲಿನ ಲೆಕ್ಕ ಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳನ್ನು ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಲಾಯಿತು. ಪುಟ ಸಂಖ್ಯೆ:16 ರಿಂದ 23ರವರೆಗೆ ಲಾಭ-ನಷ್ಟ ಹಾಗೂ ಆಸ್ತಿ-ಜವಾಬ್ದಾರಿ ತ:ಖ್ತೆಗಳ ವಿವರಗಳಿದ್ದು, ಪುಟವಾರು ತಿಳಿಸಿಕೊಂಡು ಹೋಗಲು ಸಭೆಯ ಅನುಮೋದನೆಗೆ ಕೋರಿದರು. ಯಾವ ಪುಟದಲ್ಲಿ ಸದಸ್ಯರಿಗೆ ಮಾಹಿತಿ ಅವಶ್ಯಕವಿದ್ದಲ್ಲಿ ಕೇಳಬಹುದು ಎಂದು ತಿಳಿಸಿದರು. ಸಭೆಯ ಅನುಮತಿಯಂತೆ ಪುಟ ಸಂಖ್ಯೆ:16ರಲ್ಲಿ ಶ್ರೀ ಸಿ ಎಸ್ ಚಂದ್ರಶೇಖರ್‌ರವರು ಮಾತನಾಡಿ ಗುತ್ತಿಗೆ ಸಿಬ್ಬಂದಿ ವೆಚ್ಚ ಹೆಚ್ಚಾಗಿರುವ ಬಗ್ಗೆ ಮಾಹಿತಿ ಕೇಳಿದರು. ಖಜಾಂಚಿಗಳು ಉತ್ತರಿಸಿ ಕಳೆದ ಬಾರಿ ಇಬ್ಬರು ಗುತ್ತಿಗೆ ಆಧಾರದ ಸಿಬ್ಬಂದಿಗಳಿದ್ದರು ನಂತರ ಮೂರು ಸಿಬ್ಬಂದಿ ಇರುತ್ತಾರೆ ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಪ್ರತಿ ಸಿಬ್ಬಂದಿಗೂ ಸರಾಸರಿ ವೇತನ ಹದಿನೇಳರಿಂದ ಇಪ್ಪತ್ತು ಸಾವಿರಗಳಾಗುತ್ತದೆ. ಇದರಲ್ಲಿ ಹೆಚ್ಚಿನ ವೇತನ ಪಿ ಎಫ್ ಎಲ್ಲಾ ಸೇರಿರುತ್ತದೆ ಎಂದು ತಿಳಿಸಿದರು. ಶ್ರೀ ರಮೇಶ್‌ಕುಮಾರ್‌ರವರು ಮಾತನಾಡಿ ತಾವು ಏಜೆನ್ಸಿಯವರ ಮೂಲಕ ಸಿಬ್ಬಂದಿಯನ್ನು ತೆಗೆದುಕೊಳ್ಳುವ ಬದಲು ಪತ್ರಿಕೆಯಲ್ಲಿ ಜಾಹಿರಾತು ಮೂಲಕ ಸಿಬ್ಬಂದಿಯನ್ನು ತೆಗೆದುಕೊಳ್ಳಬಹುದು ಅಲ್ಲವೇ ಎಂದು ಪ್ರಶ್ನಿಸಿದರು. ಖಜಾಂಚಿಗಳು ಉತ್ತರಿಸಿ ಯಾವುದೇ ಸಿಬ್ಬಂದಿಯನ್ನು ಕಾಯಿದೆ ನಿಯಮದಂತೆ ನೇಮಕ ಮಾಡಿಕೊಳ್ಳಲು ಸಾಧ್ಯ ಹೊರತು ನಾವು ಆಡಳಿತ ಮಂಡಲಿಯವರು ನಿರ್ಧರಿಸಿ ಪತ್ರಿಕೆಯಲ್ಲಿ ಜಾಹಿರಾತು ನೀಡಿ ನೇಮಕ ಮಾಡಿಕೊಳ್ಳಲು ಸಾಧ್ಯವಿರುವುದಿಲ್ಲ ಎಂದು ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ಗುತ್ತಿಗೆ ಸಿಬ್ಬಂದಿ ವೇತನದಲ್ಲಿ ಜಿಎಸ್‌ಟಿ ಸೇರುವುದಿಲ್ಲ ಎಂದು ತಿಳಿಸಿದರು ಜಮಾ ಖರ್ಚಿನಲ್ಲಿ ಹಂಗಾಮಿ ಎಂದು ನಮೂದಿಸಿರುವುದನ್ನು ಸರಿಪಡಿಸಿಕೊಳ್ಳಲು ತಿಳಿಸಿದರು ಹಾಗೂ ಎಲ್ಲಾ ಕಡೆಯು ಒಂದೇ ಪದವನ್ನು ಬಳಕೆ ಮಾಡಲು ತಿಳಿಸಿದರು. ನಮ್ಮ ಪ್ರತಿಯಲ್ಲಿಯೂ ಹಾಗೂ ಆಡಿಟರ್ ಪ್ರತಿಯಲ್ಲಿಯೂ ಬದಲಾವಣೆ ಮಾಡಲು ತಿಳಿಸಿದರು. ಶ್ರೀ ರಮೇಶ್ ಕುಮಾರ್‌ರವರು ಮಾತನಾಡಿ 180 ದಿನ ನಿರಂತರವಾಗಿ ಕೆಲಸ ಮಾಡಿದ ಮೇಲೆ ಅವರು ಮೇಲಿನ ಪ್ರಾಧಿಕಾರಕ್ಕೆ ಹೋದರೆ ಅವರನ್ನು ಖಾಯಂ ಮಾಡಬೇಕು ಎಂದು ತಿಳಿಸಿದರು. ಶ್ರೀ ಕೇಶವ ಪ್ರಸಾದ್‌ರವರು ಮಾತನಾಡಿ ಗುತ್ತಿಗೆ ಆಧಾರದ ಸಿಬ್ಬಂದಿಯನ್ನು ಯಾವ ರೀತಿ ಭರ್ತಿ ಮಾಡಲಾಗುತ್ತಿದೆ. ಖಜಾಂಚಿಗಳು

ಮಾತನಾಡಿ ಗುತ್ತಿಗೆ ಸಿಬ್ಬಂದಿಯನ್ನು ಕರಾರು ಮೂಲಕ ಏಜೆನ್ಸಿಯವರೊಂದಿಗೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ಗುತ್ತಿಗೆ ಸಿಬ್ಬಂದಿಯವರಿಗೆ ಯಾವ ರೀತಿ ಪತ್ರ ನೀಡಲಾಗಿದೆ ಎಂದು ಪ್ರಶ್ನಿಸಿದರು. ಖಜಾಂಚಿಗಳು ಉತ್ತರಿಸಿ ನಮಗೂ ಸಿಬ್ಬಂದಿಗೂ ಯಾವುದೇ ರೀತಿಯ ಕರಾರು ಇರುವುದಿಲ್ಲ, ಸಂಬಂಧಪಟ್ಟ ಏಜೆನ್ಸಿಯವರೊಂದಿಗೆ ಕರಾರು ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ಗುತ್ತಿಗೆ ಸಿಬ್ಬಂದಿಯವರಿಗೆ ಯಾವುದೇ ಪಾವತಿಯನ್ನು ನೇರವಾಗಿ ಮಾಡಲು ಸಾಧ್ಯವಿರುವುದಿಲ್ಲವೆಂದು ತಿಳಿಸಿದರು. ಯಾವುದೇ ಪಾವತಿಯನ್ನು ಏಜೆನ್ಸಿಯವರ ಮೂಲಕ ಮಾಡಲು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಕರಾರನ್ನು ಸಂಘದ ಕಾನೂನು ಸಲಹೆಗಾರರು ಸಿದ್ಧಪಡಿಸಿದ್ದು, ಕರಾರಿನ ರೀತ್ಯ ಕ್ರಮ ತೆಗೆದುಕೊಳ್ಳಲಾಗುವುದು ತಿಳಿಸಿದರು. ಮುಂದುವರೆದು ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ಪುಟ ಸಂಖ್ಯೆ:17ರಲ್ಲಿ ಆದಾಯ ತೆರಿಗೆ ಪಾವತಿ ಮಾಹಿತಿಯನ್ನು ಆಪೇಕ್ಷಿಸಿದರು. ಅಧ್ಯಕ್ಷರು ಉತ್ತರಿಸಿ ಸಂಘದಲ್ಲಿ ಈ ಹಿಂದೆ ಇ-ಟಿಡಿಎಸ್ ವಿಳಂಬ ಶುಲ್ಕ ಪಾವತಿಸಬೇಕಾದದ್ದನ್ನು ಈ ಖಾತೆಯಿಂದ ಪಾವತಿಸಲಾಗಿದೆ ಎಂದು ತಿಳಿಸಿದರು. ಪುಟ ಸಂಖ್ಯೆ:17ರಲ್ಲಿ ಯುಕೋ ಬ್ಯಾಂಕ್ ಸ್ವೀಪ್ ಠೇವಣಿಯ ಬಡ್ಡಿ ಆದರೆ ಬ್ಯಾಂಕ್ ಆಫ್ ಇಂಡಿಯಾದಲ್ಲಿಯು ಸ್ವೀಪ್ ಠೇವಣಿಯಿದ್ದು, ಅದಕ್ಕೆ ಬಡ್ಡಿ ಬಂದಿರುವುದಿಲ್ಲವೇ ಎಂದು ಪ್ರಶ್ನಿಸಿದರು. ಖಜಾಂಚಿಗಳು ಉತ್ತರಿಸಿ ಯುಕೋ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಇಂಡಿಯಾ ಎರಡು ಸ್ವೀಪ್ ಬಡ್ಡಿ ಸೇರಿರುತ್ತದೆ ಎಂದು ತಿಳಿಸಿದರು. ಶ್ರೀ ಕೇಶವಪ್ರಸಾದ್‌ರವರು ಮಾತನಾಡಿ ಸಂಭಾವನೆ ಯಾರಿಗೆ ಪಾವತಿಸಲಾಗಿದೆ ಎಂದು ಪ್ರಶ್ನಿಸಿದರು. ಖಜಾಂಚಿಗಳು ಉತ್ತರಿಸಿ ಆಂತರಿಕ ಲೆಕ್ಕ ಪರಿಶೋಧಕರಿಗೆ ಮಾಹೆಯಾನ ಸಂಭಾವನೆಯಿಂದ ಪಾವತಿಸಲಾಗಿದೆ ಎಂದು ತಿಳಿಸಿದರು. ಶ್ರೀ ಕೇಶವ ಪ್ರಸಾದ್‌ರವರು ಕಾನೂನು ವೆಚ್ಚದ ಮಾಹಿತಿಯನ್ನು ಆಪೇಕ್ಷಿಸಿದರು. ಖಜಾಂಚಿಗಳು ಉತ್ತರಿಸಿ ಗುತ್ತಿಗೆ ಸಿಬ್ಬಂದಿಗಳ ಕರಾರು, ಸ್ಕೇಟಿಂಗ್ ರಿಂಕ್ ಬಾಡಿಗೆ ಕರಾರು, ವಿಜಯನಗರ ಶಾಖೆಯ ಕಟ್ಟಡದ ಒಂದು ಭಾಗವನ್ನು ಬಾಡಿಗೆಗೆ ನೀಡಲಾಗಿದ್ದು ಅದರ ಕರಾರು, ಈ ಎಲ್ಲಾ ದಾಖಲೆಗಳನ್ನು ತಯಾರಿಸಿದ್ದರ ಬಾಬ್ತು ಕಾನೂನು ಸಲಹೆಗಾರರಿಗೆ ಪಾವತಿಸಿರುವುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ಸಾದಿಲ್ವಾರು ವೆಚ್ಚದಲ್ಲಿ ಏನೇನು ಸೇರಿರಬಹುದು ಎಂದು ಪ್ರಶ್ನಿಸಿದರು. ಖಜಾಂಚಿಗಳು ಉತ್ತರಿಸಿ ಸಾದಿಲ್ವಾರು ವೆಚ್ಚದಲ್ಲಿ ವಿಜಯನಗರ ಶಾಖೆಯ ಕಛೇರಿ ಸಹಾಯಕರಿಗೆ ಮಾಹೆಯಾನ ಸಂಬಳವನ್ನು, ಪ್ರಧಾನ ಶಾಖೆಯಲ್ಲಿ ಹೆಚ್ಚುವರಿ ಕಾರ್ಯದ ನಿಮಿತ್ತ ನೇಮಕವಾಗಿರುವ ಸಿಬ್ಬಂದಿಗೆ ದಿನನಿತ್ಯದ ಭತ್ಯೆಯನ್ನು, ಸಂಘದ ಸಿಬ್ಬಂದಿಗೆ ನಿರ್ದೇಶಕರಿಗೆ ಕಾಫೀ/ಟೀ ವೆಚ್ಚ, ದಿನನಿತ್ಯದ ಕ್ಲಿನಿಂಗ್ ವೆಚ್ಚ, ಪ್ರತಿನಿತ್ಯ ಹೂ ಖರಿದಿಸಿದ್ದು, ಇತರೇ ವೆಚ್ಚಗಳು ಸೇರಿರುತ್ತದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ಇದರಲ್ಲಿ ಇಬ್ಬರು ಸಿಬ್ಬಂದಿಗಳಿದ್ದು, ಅವರನ್ನು ಮುಂದುವರೆಸಲಾಗುತ್ತದಯೇ ಅವರನ್ನು ಹೊರ ಗುತ್ತಿಗೆಯಿಂದ ಏಕೆ ತೆಗೆದುಕೊಳ್ಳಬಾರದು? ಇದಕ್ಕೆ ಸಂಬಂಧಿಸಿದಂತೆ ಕಾನೂನು ಸಲಹೆಗಾರರ ಸಲಹೆ ಪಡೆದು ಮುಂದಿನ ಕ್ರಮ ಕೈಗೊಳ್ಳುವಂತೆ ತಿಳಿಸಿದರು. ಖಜಾಂಚಿಗಳು ಉತ್ತರಿಸಿ ಅವಶ್ಯಕತೆಗೆ ಅನುಗುಣವಾಗಿ ಮಾಡಿಕೊಳ್ಳುತ್ತೇವೆ ಸಂಘದ ಪ್ರಧಾನ ಕಛೇರಿಯಲ್ಲಿ ಒಬ್ಬರು ಸಿಬ್ಬಂದಿಯನ್ನು ಅರ್ಧ ದಿನದ ಕರ್ತವ್ಯಕ್ಕೆ ತೆಗೆದುಕೊಳ್ಳಲಾಗಿದೆ ಇವರಿಗೆ ಪಾವತಿ ಸಾದಿಲ್ವಾರು ಶೀರ್ಷಿಕೆಯಿಂದ ಪಾವತಿಸಲಾಗಿದೆ ಎಂದು ತಿಳಿಸಿದರು. ತಮ್ಮ ಸಲಹೆಯಂತೆ ಮುಂದೆ ಕಾನೂನು ಸಲಹೆಗಾರರ ಸಲಹೆ ಪಡೆದು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಪುಟ ಸಂಖ್ಯೆ:20ರಲ್ಲಿ ಯುಕೋ ಬ್ಯಾಂಕ್ ಚಾಲ್ತಿಖಾತೆಯಲ್ಲಿ ಋಣಾತ್ಮಕ ಮೊತ್ತದ ಬಗ್ಗೆ ಕೇಳಿದರು. ಅಧ್ಯಕ್ಷರು ಉತ್ತರಿಸಿ ನಾನು ಈಗಾಗಲೇ ಲೆಕ್ಕ ಪರಿಶೋಧಕರ ಬಳಿ ಚರ್ಚಿಸಲಾಗಿದ್ದು, ಈ ಮೊತ್ತವನ್ನು ಒಳ ಕಾಲಂನಲ್ಲಿ ತೋರಿಸುವಂತೆ ತಿಳಿಸಲಾಗಿತ್ತು ಎಂದು ತಿಳಿಸಿದರು. ಖಜಾಂಚಿಗಳು ಉತ್ತರಿಸಿ ದಿನಾಂಕ:31/3/24ರಲ್ಲಿ ಠೇವಣಾತಿಗೆ ವರ್ಗಾವಣೆ ಮಾಡಲಾಗಿರುತ್ತದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ನೀವು ಮಾಡಿರುವ ಪದ್ಧತಿ ಸರಿಯಿರುವುದಿಲ್ಲವೆಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ನಾವು ದಿನಾಂಕ:31/3/24ರಲ್ಲಿ ಚೆಕ್ ನೀಡಿರುವುದರಿಂದ ಅದೇ ದಿನ ಖಾತೆಗೆ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಪುಟ ಸಂಖ್ಯೆ:21ರಲ್ಲಿ ಸಿಬ್ಬಂದಿ ಉಪದಾನಕ್ಕೆ ಸಂಬಂಧಿಸಿದಂತೆ 2004ರಲ್ಲಿ ಒಂದು ಸುತ್ತೋಲೆ ಇರುತ್ತದೆ, ಸಂಘದ ಉಪನಿಯಮದಲ್ಲಿ ಅಳವಡಿಸಿಕೊಂಡಂತೆ ಲೆಕ್ಕಾಚಾರ ಮಾಡಿ ನೀಡಬೇಕಾಗಿರುತ್ತದೆ, ಆದರೆ ಗ್ರ್ಯಾಚ್ಯುಟಿ ಆಕ್ಟನ ಪ್ರಕಾರ ಲೆಕ್ಕಾಚಾರ ಮಾಡಿ, ಉಪನಿಯಮದ ಪ್ರಕಾರವು ಲೆಕ್ಕಾಚಾರ ಮಾಡಿ ಸಿಬ್ಬಂದಿಗೆ ಅನುಕೂಲಕರವಾದ ಮೊಬಲಗನ್ನು ನೀಡಬೇಕಾಗಿರುತ್ತದೆ. ನಾನು ನಿರ್ದೇಶಕನಾಗಿದ್ದಾಗಲೇ ಇದನ್ನು ತಿಳಿಸಿರುತ್ತೇನೆ. ನಾನು ಈಗ ನೀಡಿರುವ 2004ರ ಸುತ್ತೋಲೆ ಪ್ರಕಾರ ಲೆಕ್ಕಾಚಾರ ಮಾಡಿ ಗ್ರಾಚ್ಯುಟಿ ಆಕ್ಟನ ಪ್ರಕಾರನು ಲೆಕ್ಕಾಚಾರ ಮಾಡಿ ಸಿಬ್ಬಂದಿಗೆ ಅನುಕೂಲವಾಗುವ ಮೊತ್ತವನ್ನು ಈ ಹಿಂದೆ ನಿವೃತ್ತರಾಗಿರುವ ಸಿಬ್ಬಂದಿಗಳಿಗೂ ಅನ್ವಯಿಸಿ ವ್ಯತ್ಯಾಸದ ಮೊಬಲಗನ್ನು ನೀಡಲು ತಿಳಿಸಿದರು. ಖಜಾಂಚಿಗಳು ಉತ್ತರಿಸಿ ಗ್ರಾಚ್ಯುಟಿ ಲೆಕ್ಕಾಚಾರವನ್ನು ಸಂಘದ ಸನ್ನದು ಲೆಕ್ಕಿಗರಿಗೆ ಕಳುಹಿಸಿ, ಅವರು ಲೆಕ್ಕಾಚಾರ ಸರಿಯಾಗಿರುವಂತೆ ತಿಳಿಸಿರುತ್ತಾರೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ

ಶರ್ಮರವರು ಮಾತನಾಡಿ ಈ ಸುತ್ತೋಲೆ ಅವರಿಗೆ ನೀಡಲಾಗಿತ್ತೇ ನೀವು ಗ್ರ್ಯಾಚ್ಯುಟಿ ಆ್ಯಕ್ಟ್ ಪ್ರಕಾರ ಲೆಕ್ಕಾಚಾರ ಮಾಡಿ ಸರಿಯಾಗಿದೆಯೇ ಎಂದು ಕೇಳಿರುವುದನ್ನು ಒಪ್ಪಿರುತ್ತಾರೆ. ಸಿಬ್ಬಂದಿಗೆ ಯಾವುದು ಅನುಕೂಲವಾಗುವುದು ಅದನ್ನು ನೀಡಬೇಕೆಂದು ಸುತ್ತೋಲೆ ತಿಳಿಸಿರುವುದರಿಂದ ಅದೇ ರೀತಿ ನೀಡಬೇಕು ಎಂದು ತಿಳಿಸಿದರು. ಖಜಾಂಚಿಗಳು ಮಾತನಾಡಿ ನಾವು ಗ್ರ್ಯಾಚ್ಯುಟಿ ಆ್ಯಕ್ಟ್‌ನ ಪ್ರಕಾರ ಲೆಕ್ಕಾಚಾರ ಮಾಡಿ ನೀಡುವುದರಿಂದ ಸಿಬ್ಬಂದಿಗೆ ನಷ್ಟವಾಗುತ್ತಿದೆಯೇ ಎಂದು ಹೇಳಲಾಗಿ ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಕಾನೂನು ಹೇಳಿದ ರೀತಿ ನಡೆದುಕೊಳ್ಳುವುದು ಸರಿ ಎಂದು ತಿಳಿಸಿದರು. ಇದನ್ನು ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು ಎಂದು ಖಜಾಂಚಿಗಳು ತಿಳಿಸಿದರು. ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಎಕ್ಸ್‌ಗ್ರೇಷಿಯಾ ಯಾರಿಗೆ ಪಾವತಿಸಬೇಕು ಎಂದು ಕೇಳಿದರು. ಅಧ್ಯಕ್ಷರು ಉತ್ತರಿಸಿ ಕಳೆದ ಬಾರಿ ಕಾಯ್ದಿರಿಸಿದ ಮೊತ್ತದಲ್ಲಿ ವಿತರಿಸಿ ಉಳಿದಿರುವ ಮೊತ್ತ ಇದನ್ನು ಸಿಬ್ಬಂದಿಗೆ ನೀಡಲಾಗುವುದು ಎಂದು ತಿಳಿಸಿದರು. ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಖಾಯಂ ಸಿಬ್ಬಂದಿಗೆ ಬೋನಸ್ಸ್ ನೀಡಲು ಅವಕಾಶವಿರುತ್ತದೆ, ಹಂಗಾಮಿ ಸಿಬಂದಿಗೆ ಎಕ್ಸ್‌ಗ್ರೇಷಿಯಾ ಪಾವತಿಸಬೇಕು ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಖಾಯಂ ನೌಕರರಿಗೆ ಡಿಎ ನೀಡುತ್ತಿದ್ದು, ಎಲ್ಲರಿಗೂ ಎಕ್ಸ್‌ಗ್ರೇಷಿಯಾವನ್ನೇ ಪಾವತಿ ಮಾಡುತ್ತಿರುವುದು ಈ ಹಿಂದೆ ಸರ್ವಸದಸ್ಯರ ಸಭೆಯಲ್ಲಿ ನಿರ್ಧಾರವಾಗಿರುತ್ತದೆ ಎಂದು ತಿಳಿಸಿದರು. ಶ್ರೀ ಜಗದೀಶ್‌ರವರು ಮಾತನಾಡಿ ಕೆಲವೊಂದಕ್ಕೆ ಸರ್ವಸದಸ್ಯರ ಸಭೆಯ ನಿರ್ಧಾರವೆಂದು ಕೆಲವೊಂದಕ್ಕೆ ಆಡಳಿತ ಮಂಡಲಿ ಅಧಿಕಾರವೆಂದು ಹೇಳುತ್ತೀರಿ ಸರ್ವಸದಸ್ಯರ ಸಭೆಯ ನಿರ್ಧಾರವನ್ನು ಏಕೆ ಬದಲಾವಣೆ ಮಾಡಿದ್ದೀರಿ ಎಂದು ಕೇಳಿದರು. ಅಧ್ಯಕ್ಷರು ಉತ್ತರಿಸಿ ಖಾಯಂ ಮತ್ತು ಗುತ್ತಿಗೆ ಆಧಾರದ ಸಿಬ್ಬಂದಿಯನ್ನು ಗಮನದಲ್ಲಿಟ್ಟುಕೊಂಡು ಪಾವತಿ ಮಾಡಲಾಗಿದೆ ಎಂದು ತಿಳಿಸಿದರು. ಶ್ರೀ ಜಗದೀಶ್‌ರವರು ಇದಕ್ಕೆ ಪ್ರತಿಕ್ರಿಯಿಸಿ ಇದನ್ನು ಸರ್ವಸದಸ್ಯರ ಸಭೆಗೆ ತರುವ ಮೊದಲೇ ಸರಿಮಾಡಿ ಅನುಮತಿ ಪಡೆಯಬೇಕು ಎಂದು ತಿಳಿಸಿದರು. ಮುಂದುವರೆದು ಮಾತನಾಡಿ ಯಾವುದಾದರು ಮಾಹಿತಿಗಳನ್ನು ಕೇಳಿದಾಗ ಕಛೇರಿಯಲ್ಲಿ ಬಂದು ಪಡೆಯಲು ತಿಳಿಸುತ್ತಿರುವುದು ಸರಿಯಲ್ಲ ಎಂದು ಹೇಳಿದರು. ವಿವರವನ್ನು ಸರ್ವಸದಸ್ಯರ ಸಭೆಯಲ್ಲಿ ನೀಡಬೇಕು ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಪುಟ ಸಂಖ್ಯೆ:22ರಲ್ಲಿ ಸದಸ್ಯರ ಲಾಭಾಂಶ ವರ್ಷಾವಾರು ಕುಳುವಾರು ತಾಳೆಯಾಗಿರುವುದಿಲ್ಲವೆಂದು ರೂ.37000/- ವ್ಯತ್ಯಾಸ ಇರುವುದಾಗಿ ತಿಳಿಸಿರುತ್ತಾರೆ ಕಾರಣವೇನು ಎಂದು ಕೇಳಿದರು. ಖಜಾಂಚಿಗಳು ಉತ್ತರಿಸಿ ಈಗಾಗಲೇ ಮರಣ ಹೊಂದಿರುವವರು ಹಾಗೂ ಷೇರು ಮುಕ್ತಾಯಗೊಂಡಿರುವ ಖಾತೆಗಳ ವ್ಯತ್ಯಾಸವಿದ್ದು, ಅದನ್ನು ಸರಿಪಡಿಸಿಕೊಳ್ಳಲಾಗುವುದು ಎಂದು ತಿಳಿಸಿದರು. ಮುಂದುವರೆದು ಮಾತನಾಡಿ ಶ್ರೀ ಶ್ರೀನಿವಾಸ ಶರ್ಮರವರು ಈ ಲೆಕ್ಕ ಪತ್ರಗಳ ಅನುಮೋದನೆಗೆ ತಮ್ಮ ಅಸಮ್ಮತಿ ಇರುವುದಾಗಿ ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರನ್ನು ಹೊರತುಪಡಿಸಿ ಉಳಿದ ಸದಸ್ಯರು 2023-24ನೇ ಸಾಲಿನ ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳಿಗೆ ಅನುಮೋದನೆ ಸೂಚಿಸಿದರು.

**9. 2023-24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ, ಅನುಪಾಲನಾ ವರದಿಯ ಪರಿಶೀಲನೆ ಮತ್ತು ಅನುಮೋದನೆ:**

ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಎಂ ಎನ್ ಸೌಮ್ಯರವರು 2023-24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ, ಅನುಪಾಲನಾ ವರದಿಯನ್ನು ಅನುಮೋದನೆಗಾಗಿ ಸರ್ವಸದಸ್ಯರ ಸಭೆಗೆ ಮಂಡಿಸಿದರು.

**2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ**

| ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರರೀತ್ಯ ಅನುಸೂಚಿಗಳು | ಅನುಸೂಚಿಗೆ ಸನ್ನದು ಲೆಕ್ಕಿಗರು ಸೂಚಿಸಿರುವ ಮಾಹಿತಿ | ಸನ್ನದು ಲೆಕ್ಕಿಗರ ವರದಿಗೆ ಸಂಘದ ಅನುಪಾಲನಾ ವರದಿ |
|---|---|---|
| 13(ಬಿ) (1) ನಿಯತ ಸದಸ್ಯರು ಸಂಘದ ವ್ಯವಹಾರಗಳಲ್ಲಿ ತೊಡಗಿಸಿಕೊಂಡ ಬಗ್ಗೆ ಟಿಪ್ಪಣಿ | ಸಾಮಾನ್ಯ ಸದಸ್ಯನು ಉಪನಿಯಮದಲ್ಲಿದ್ದಂತೆ ಸಂಘದ ವಿವಿಧ ಸಾಲ ಸೌಲಭ್ಯಗಳನ್ನು ಪಡೆಯಲು, ಜಾಮೀನುದಾರನಾಗಲು, ಠೇವಣಾತಿಗಳಲ್ಲಿ ಹೂಡಿಕೆ ಮಾಡಲು, ವಾರ್ಷಿಕ ಸಭೆ/ವಿಶೇಷ ಮಹಾ ಸಭೆ ಹಾಗೂ ಆಡಳಿತ ಮಂಡಲಿಗೆ ನಡೆಯುವ ಚುನಾವಣೆಗಳಲ್ಲಿ ಭಾಗವಹಿಸಲು, ವಾರ್ಷಿಕ ವರದಿ/ಹಣಕಾಸು ತ:ಖ್ತೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಸಹ ಸದಸ್ಯನು ಉಪನಿಯಮದಲ್ಲಿದ್ದಂತೆ ಎಲ್ಲಾ ಸಾಲಗಳನ್ನು ಪಡೆಯಲು, ಒಬ್ಬ ಸದಸ್ಯನಿಗೆ ಜಾಮೀನುದಾರನಾಗಲು ಅರ್ಹರಾಗಿರುತ್ತಾರೆ. ಆದರೆ ವಾರ್ಷಿಕ ಸಭೆ/ವಿಶೇಷ | ಈಗಾಗಲೇ ಸಂಘವು ತನ್ನ ಸದಸ್ಯರಿಗೆ ವಾರ್ಷಿಕ ಮಹಾ ಸಭೆಯ ವರದಿ ಪುಸ್ತಕದಲ್ಲಿ ಸದಸ್ಯರ ಹಕ್ಕು ಮತ್ತು ಅವರು ನಿರಂತರವಾಗಿ ಸಂಘದ ವ್ಯವಹಾರದಲ್ಲಿ ತೊಡಗಿಸಿಕೊಳ್ಳುವ ಬಗ್ಗೆ ಅವಶ್ಯ ಮಾಹಿತಿಯನ್ನು ನೀಡಲಾಗುತ್ತಿದೆ. ಸದಸ್ಯರು ಲಾಭಾಂಶ ಪಡೆಯಲು ಬಂದಾಗ ಸದಸ್ಯರಿಗೆ ತಿಳುವಳಿಕೆ ನೀಡಲಾಗಿರುತ್ತದೆ. ಲೆಕ್ಕಪರಿಶೋಧಕರ ಸಲಹೆಯಂತೆ ಮುಂದೆಯೂ ಕ್ರಮವಿಡಲಾಗುವುದು. |

| | | |
|---|---|---|
| | ಮಹಾ ಸಭೆ ಹಾಗೂ ಆಡಳಿತ ಮಂಡಲಿಗೆ ನಡೆಯುವ ಚುನಾವಣೆಗಳಲ್ಲಿ ಭಾಗವಹಿಸಲು, ವಾರ್ಷಿಕ ವರದಿ/ಹಣಕಾಸು ತ:ಖ್ತೆಗಳನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಅಂತೆಯೇ ಸದಸ್ಯರು ಸಂಘದಲ್ಲಿ ಠೇವಣಿ ಹೂಡಿಕೆ ಮಾಡುವುದು ಮತ್ತು ಸಾಲ ಪಡೆಯುವುದರ ಮೂಲಕ ವ್ಯವಹಾರಗಳಲ್ಲಿ ತೊಡಗಿಸಿ ಕೊಂಡಿರುತ್ತಾರೆ. ಸಂಘದ ಸದಸ್ಯತ್ವ ಪಡೆದು, ಯಾವುದೇ ವ್ಯವಹಾರ ಕೈಗೊಳ್ಳದ ಸದಸ್ಯರನ್ನು ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | |
| 13(ಬಿ) (2) ಸದಸ್ಯೇತರರೊಂದಿಗಿನ ವ್ಯವಹಾರಗಳ ಬಗ್ಗೆ ಟಿಪ್ಪಣಿ | ಸಂಘದ ಸಿಬ್ಬಂದಿಗಳೂ ಕೂಡ ಸದಸ್ಯೇತರರಾಗಿರುತ್ತಾರೆ. ಇವರೊಂದಿಗೆ ಸಂಘವು ಸಾಲದ ವ್ಯವಹಾರವನ್ನು ಉಪನಿಯಮ 73ರಲ್ಲಿದ್ದಂತೆ ನಡೆಸಿರುತ್ತದೆ. ಇದನ್ನು ಹೊರತುಪಡಿಸಿದರೆ ಸಂಘವು ಸದಸ್ಯೇತರರೊಂದಿಗೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಎಂದು ಅನುಬಂಧ 1 ಕ್ರಂ ಸಂ 16 (ಊ)ರಲ್ಲಿ ಧೃಢೀಕರಿಸಿದ್ದಾರೆ. ಉಪನಿಯಮ 35.2 ರಲ್ಲಿ ಸೂಕ್ತ ತಿದ್ದುಪಡಿ ಮಾಡಲು ಕ್ರಮವಿಡುವುದು. | ಸಂಘದ ಸಿಬ್ಬಂದಿಯವರ ಅನುಕೂಲಕ್ಕಾಗಿ ಹಾಗೂ ವೇತನದಲ್ಲೇ ಕಡಿತಗೊಳಿಸುವುದರಿಂದ ಸಿಬ್ಬಂದಿ ಸಾಲ ನೀಡಲಾಗುತ್ತಿದೆ. ಉಪನಿಯಮ 35.2ರಂತೆ ಅವಶ್ಯಕತೆ ಕಂಡು ಬಂದಲ್ಲಿ ನಾಮಮಾತ್ರ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಆಡಳಿತ ಮಂಡಲಿಯಲ್ಲಿ ಕ್ರಮ ಕೈಗೊಳ್ಳಲಾಗುವುದು. |
| 14(ಬಿ)(1) ಸದಸ್ಯರಿಂದ ವಸೂಲಿಸಿದ ಷೇರಿನ ಮೊತ್ತವು ಸಂಘದ ಉಪನಿಯಮ ರನ್ವಯ ಷೇರಿನ ಮುಖ ಬೆಲೆಗೆ ಇದೆಯೇ? | ಉಪನಿಯಮ 10ರಲ್ಲಿ ತಿಳಿಸಿರುವಂತೆ ಸಂಘದ ಪ್ರತಿ ಷೇರಿನ ಮುಖ ಬೆಲೆಯು ರೂ.1000 ಇದ್ದು, ಹಾಲಿ ಮುಖ ಬೆಲೆಯ ಪೂರ್ತಿ ಮೊತ್ತ ಪಾವತಿ ಮಾಡದಿರುವ ಸದಸ್ಯರನ್ನು ಪಟ್ಟಿ ಮಾಡಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.<br>ಸಂಘವು ಸದಸ್ಯರಿಂದ ಸಾಲ ಕೋರಿ ಅರ್ಜಿ ಬಂದಾಗ ಸಾಲದ ಒಳನಿಯಮಗಳಲ್ಲಿ ಸೂಚಿಸಿದಂತೆ ಸಾಲದ ಮೊತ್ತಕ್ಕೆ ಅನುಗುಣವಾಗಿ ಹೆಚ್ಚುವರಿ ಷೇರನ್ನು ಸ್ವೀಕರಿಸುತ್ತದೆ. ರೂ.1000ಕ್ಕಿಂತಲು ಹೆಚ್ಚಿನ ಷೇರು ಮೌಲ್ಯವನ್ನು ಹೊಂದಿರುವ ಸದಸ್ಯರನ್ನು (ಹಿಂದಿನ ವರ್ಷಗಳ ಷೇರಿನ ಮುಖ ಬೆಲೆಯ ಪ್ರಕಾರ, ಉದಾಹರಣೆಗೆ, ರೂ.1100, ರೂ.1,200, ರೂ.1,500 ಷೇರುದಾರರೆಂದು ತೋರಿಸಲಾಗಿದೆ. | ಸಂಘದ ಕೆಲವು ಸದಸ್ಯರು ರೂ.1100, ರೂ.1,200, ರೂ.1,500 ಷೇರು ಮೊತ್ತವನ್ನು ಹೊಂದಿದ್ದು, ಸಂಘಕ್ಕೆ ಭೇಟಿ ನೀಡಿದಾಗ ಈ ವ್ಯತ್ಯಾಸದ ಮೊತ್ತವನ್ನು ಷೇರಿನ ಮುಖ ಬೆಲೆಗೆ ಪೂರ್ತಿ ಮಾಡಲಾಗುತ್ತಿದೆ. ಸಂಘದೊಂದಿಗೆ ನಿರಂತರ ವ್ಯವಹಾರ ಮಾಡದೇ ಇರುವ ಸದಸ್ಯರುಗಳಿಗೆ ಸರ್ವ ಸದಸ್ಯರ ಸಭೆಯ ವರದಿ ಪುಸ್ತಕದಲ್ಲಿ ಮಾಹಿತಿಯನ್ನು ನೀಡಲಾಗುತ್ತಿದೆ. ಆದರೂ ಸದಸ್ಯರು ಸ್ಪಂದಿಸಿರುವುದಿಲ್ಲ. |
| 18(4) ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ, ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ (ಕುಳುವಾರು ತಯಾರಿಸಿ) ಕಡ್ಡಾಯವಾಗಿ ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಶಿಸಿ | ಅ) ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಪಾವತಿಯಾಗಿರುತ್ತದೆ. ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗನ್ನು ಸೂಕ್ತವಾಗಿ ಲೆಕ್ಕಾಚಾರ ಮಾಡಿ ಅವಕಾಶ ಕಲ್ಪಿಸಲಾಗಿದೆ. ಬಡ್ಡಿಯ ಅವಕಾಶ ಕಲ್ಪಿಸುವಾಗ ಸಂಪೂರ್ಣ ತಿಂಗಳನ್ನು ಮಾತ್ರ ಪರಿಗಣಿಸಿ ಲೆಕ್ಕ ಹಾಕಲಾಗಿದೆ.<br>ಆ) ಅವಧಿ ಮೀರಿದ ಠೇವಣಿಗಳು: ಸದಸ್ಯರು ನವೀಕರಿಸದೆ ಅಥವಾ ನಗದೀಕರಿಸಲೂ (ಹಿಂಪಡೆಯಲು) ಬರದೇ ಇದ್ದಾಗ ಅಂತಹ ಠೇವಣಿಗಳ ಮೇಲೆ ಬಡ್ಡಿಯನ್ನು, ಸದಸ್ಯರು ನಗದೀಕರಿಸಲು ಬಂದಾಗ ಸಂಘದ ಒಳ ನಿಯಮಗಳಂತೆ ಉಳಿತಾಯ ಖಾತೆಯ ಬಡ್ಡಿಯ ದರದಲ್ಲಿ ಕೊಡಲಾಗಿದೆ. ವರ್ಷಾಂತ್ಯಕ್ಕೆ ಈ ಅವಧಿ ಮೀರಿದ ಠೇವಣಿಗಳನ್ನು ಸದಸ್ಯರು ನವೀಕರಿಸದೇ ಇದ್ದಾಗ ಇದರ ಮೇಲಿನ ಬಡ್ಡಿಗೆ ಆಯಾ ವರ್ಷಗಳಲ್ಲಿಯೇ ಅವಕಾಶ ಕಲ್ಪಿಸಲು ಕ್ರಮವಿಡುವುದು. | ಲೆಕ್ಕಪರಿಶೋಧಕರ ಸಲಹೆಯಂತೆ ಸೂಕ್ತವಾದ ಆಂತರಿಕ ನಿಯಮವನ್ನು ರಚಿಸಿಕೊಂಡು ಕ್ರಮಕೈಗೊಳ್ಳಲಾಗುವುದು. |

| | | |
|---|---|---|
| | ಬಡ್ಡಿ ಲೆಕ್ಕಾಚಾರದ ಬಗ್ಗೆ ಸೂಕ್ತ ಆಂತರಿಕ ನಿಯಮಗಳನ್ನು ರಚಿಸಲು ಕ್ರಮವಿಡುವುದು. | |
| 19(7) ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 28 ರಂತೆ ನಗದು ಮೀಸಲು (ಡಿ.ಟಿ.ಎಲ್.ನ 3%) ಮತ್ತು ಪ್ರವಾಹಿ ಧನ (ಡಿ.ಟಿ.ಎಲ್.ನ 10%) ಮಿತಿ ಕಾಯ್ದುಕೊಂಡು ರಿಜಿಸ್ಟರ್ ಬರೆದಿಡಲಾಗಿದೆಯೇ? (ಪ್ರವಾಹಿ ಧನ ಲೆಕ್ಕಾಚಾರ ಮಾಡುವಾಗ ಕಲಂ 58ಕ್ಕೆ ವಿರುದ್ಧವಾಗಿ ಮಾಡಿರುವ ಹೂಡಿಕೆಗಳನ್ನು ಪರಿಗಣಿಸಬಾರದು) | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 28 ರಂತೆ ನಗದು ಮೀಸಲು (ಡಿ.ಟಿ.ಎಲ್.ನ 3%) ಮತ್ತು ಪ್ರವಾಹಿ ಧನ (ಡಿ.ಟಿ.ಎಲ್.ನ 10%) ಮಿತಿ ಕಾಯ್ದುಕೊಂಡು ರಿಜಿಸ್ಟರ್ ತಂತ್ರಾಂಶದಲ್ಲಿ ಲಭ್ಯವಿರುತ್ತದೆ. ಸದರಿ ಮಿತಿಗಳ ಬಗ್ಗೆ ಮುಂದಿನ ದಿನಗಳಲ್ಲಿ ಕ್ರಮವಿಡಲು ಸೂಚಿಸಿದೆ. | ನಗದು ಮೀಸಲು (ಡಿ.ಟಿ.ಎಲ್.ನ 3%) ಮತ್ತು ಪ್ರವಾಹಿ ಧನ ಮಿತಿಯನ್ನು ಆದಾಯ ತೆರಿಗೆ ಸಲಹೆಗಾರರ ಸಲಹೆಯಂತೆ ಧನವಿನಿಯೋಗಗಳಲ್ಲಿ ತೊಡಗಿಸಿರುವುದರಿಂದ ಅಲ್ಲಿ ಕಡಿಮೆಯಾಗಿರುತ್ತದೆ. ಪ್ರವಾಹಿ ಧನ (ಡಿ.ಟಿ.ಎಲ್.ನ 10%) ಹೆಚ್ಚುವರಿ ಧನ ವಿನಿಯೋಗಗಳಲ್ಲಿ ಇರುತ್ತದೆ. ಸದರಿ ಮಿತಿಗಳನ್ನು ಕಾಯ್ದುಕೊಳ್ಳಲಾಗಿರುತ್ತದೆ. |
| 20(2) ಉಳಿತಾಯ ಖಾತೆಗಳ ಮೇಲಿನ ಬಡ್ಡಿ: | ಉಳಿತಾಯ ಖಾತೆಗಳ ಮೇಲಿನ ಬಡ್ಡಿಯನ್ನು ವರ್ಷದ ಅಂತ್ಯಕ್ಕೆ ಖಾತೆಯಲ್ಲಿ ಮೊತ್ತವಿದ್ದರೆ ಮಾತ್ರ ನೀಡಲಾಗುತ್ತಿದೆ. ವರ್ಷಾಂತ್ಯಕ್ಕೂ ಮುನ್ನ ಖಾತೆ ಅಂತ್ಯಗೊಳಿಸಿದಲ್ಲಿ ಅಂತಹ ಖಾತೆಗಳಿಗೆ ಯಾವುದೇ ಬಡ್ಡಿ ನೀಡಲಾಗುತ್ತಿಲ್ಲ. ಬಡ್ಡಿ ಪಾವತಿಯ ಅವಧಿಯ ಬಗ್ಗೆ ಸೂಕ್ತ ಆಂತರಿಕ ನಿಯಮಗಳನ್ನು ರಚಿಸಿಕೊಳ್ಳಲು ಸೂಚಿಸಿದೆ. ಉಳಿತಾಯ ಖಾತೆಗಳ ಮೇಲಿನ ಬಡ್ಡಿಯನ್ನು 01.03.2023 ರಿಂದ 28.02.2024ರವರೆಗೆ ನೀಡಲಾಗಿದೆ. | ಉಳಿತಾಯ ಖಾತೆ ಮೇಲೆ ಬಡ್ಡಿಯನ್ನು ವರ್ಷಕ್ಕೊಮ್ಮೆ ಲೆಕ್ಕಾಚಾರ ಮಾಡಿ ವರ್ಷಾಂತ್ಯಕ್ಕೆ ಚಾಲ್ತಿಯಲ್ಲಿರುವ ಖಾತೆಗಳಿಗೆ ನೀಡಲಾಗುತ್ತಿದೆ. ತಮ್ಮ ಈ ಸಲಹೆಯನ್ನು ಆಡಳಿತ ಮಂಡಲಿಯ ಗಮನಕ್ಕೆ ತಂದು ಸೂಕ್ತವಾದ ಆಂತರಿಕ ನಿಯಮವನ್ನು ರಚಿಸಿಕೊಂಡು ಕ್ರಮ ಕೈಗೊಳ್ಳಲಾಗುವುದು. |
| 22(2) ವರದಿ ವರ್ಷದಲ್ಲಿ ಪಾವತಿಯಾದ ಲಾಭಾಂಶ ಎಷ್ಟು? ಪಾವತಿಯಾಗದೇ ಉಳಿದ ಲಾಭಾಂಶ ಮೊತ್ತ? | ಪಾವತಿಯಾದ ಮೊತ್ತ ರೂ.29,11,934/- ಪಾವತಿಯಾಗದೇ ಉಳಿದ ಮೊತ್ತ ರೂ.25,00,406/- (2020-21, 2021-22, 2022-23) ವರ್ಷಾವಾರು ಮಾಹಿತಿ ನೀಡುವ ಡಿವಿಡೆಂಡ್ ಕುಳುವಾರು ಪಟ್ಟಿ ತಯಾರಿಸಲು ಸೂಚಿಸಲಾಗಿದೆ. | ಲೆಕ್ಕಪರಿಶೋಧಕರ ಸಲಹೆಯಂತೆ ವರ್ಷಾವಾರು ಮಾಹಿತಿ ನೀಡುವ ಡಿವಿಡೆಂಡ್ ಕುಳುವಾರು ಪಟ್ಟಿ ತಯಾರಿಸಲಾಗುವುದು. |
| 26(1) ಉಪನಿಯಮಗಳ ಹಾಗೂ ಸಾಲದ ನಿಯಮಾವಳಿಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲಗಳ ವಿವರ | ಉಪನಿಯಮಗಳನ್ನು ಹಾಗೂ ಸಾಲದ ಒಳ ನಿಯಮಗಳನ್ನು ಗಮನಿಸಿದಾಗ, ಅವುಗಳಲ್ಲಿ ವ್ಯತ್ಯಾಸ ಇರುವುದು ಕಂಡು ಬರುತ್ತದೆ. ಸಂಘವು ಸಾಲಗಳ ಮಿತಿಯನ್ನು ಉಪನಿಯಮಗಳ ಪ್ರಕಾರ ಜಾರಿ ಗೊಳಿಸಿರುತ್ತದೆ. ಸಂಘದ ಸಾಲದ ಒಳನಿಯಮಗಳನ್ನು ತಿದ್ದುಪಡಿ ಮಾಡಲು ಸಂಘವು ಶೀಘ್ರ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಆಡಳಿತ ಮಂಡಲಿಯ ತೀರ್ಮಾನದಂತೆ ಮುಂದಿನ ದಿನಗಳಲ್ಲಿ ಉಪನಿಯಮದನುಸಾರ ಸಾಲದ ಒಳನಿಯಮವನ್ನು ರಚಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು. |
| 26(3)& 27(1) ಸದಸ್ಯರಿಗೆ ನೀಡಿರುವ ಸಾಲವು ಉಪನಿಯಮದ ಮಿತಿ ಮೀರಿರುವ ಬಗ್ಗೆ ಹಾಗೂ ಕಾರ್ಯ ವ್ಯಾಪ್ತಿ ಮೀರಿರುವ ಬಗ್ಗೆ ವರದಿಯಲ್ಲಿ ವಿವರಿಸುವುದು. | ಉಪನಿಯಮ 65-'ಚಿನ್ನದ ಒಡವೆ ಒತ್ತೆಯ ಮೇಲೆ ಸಾಲ-ಅಂದಾಜು ದರದ ಮೇಲೆ ಶೇಕಡ 85ಕ್ಕೂ ಮೀರದಷ್ಟು ಅಥವಾ ಗರಿಷ್ಠ ರೂ.20 ಲಕ್ಷಕ್ಕೆ ಮೀರದಂತೆ' ಎಂದಿರುತ್ತದೆ. ಸಂಘವು ವರದಿ ಸಾಲಿನಲ್ಲಿ ಈ ಕೆಳಕಂಡ ಆಯ್ದ ಪ್ರಕರಣದಲ್ಲಿ ರೂ.20 ಲಕ್ಷ ಮೀರಿ ಚಿನ್ನಾಭರಣ ಸಾಲವನ್ನು ವಿತರಿಸಿರುತ್ತದೆ. 1.ಮಂಜುನಾಥ ಬಿ.ಎಸ್ ರೂ.21,50,900/- | ಚಿನ್ನಾಭರಣ ಸಾಲವನ್ನು ಶ್ರೀ ಮಂಜುನಾಥ್‌ರವರಿಗೆ ಗರಿಷ್ಠ ಮಿತಿಗಿಂತ ಹೆಚ್ಚುವರಿ ಪಾವತಿಸಲಾಗಿದ್ದು, ಇದನ್ನು ಸರಿಪಡಿಸಿಕೊಳ್ಳಲಾಗಿರುತ್ತದೆ. |
| 27(2) ವಾಹನ ಸಾಲ: | ಸಂಘವು ವಾಹನ ಸಾಲ ವಿತರಿಸಿದ ನಂತರ ಸದಸ್ಯರಿಂದ ವಾಹನ ಖರೀದಿಯ ರಶೀತಿಯನ್ನು (Orginal Invoice) ಪಡೆಯಲು ಕ್ರಮವಿಡುವುದು. ವಾಹನದ ವಿಮೆ ಪಡೆಯಲು ಸೂಚಿಸಲಾಗಿದೆ. | ಲೆಕ್ಕಪರಿಶೋಧಕರ ಸಲಹೆಯಂತೆ ಕ್ರಮವಿಡಲಾಗುವುದು. |
| 27(3) ಸ್ಥಿರಾಧಾರ ಸಾಲ: | ಸ್ಥಿರಾಧಾರ ಸಾಲದ ಅರ್ಜಿಯಲ್ಲಿ ನಮೂದಿಸಿರುವ ನಿರ್ದೇಶಕರ ಮಂಡಲಿ ಸಭೆ ತೀರ್ಮಾನವನ್ನು ಭರ್ತಿ ಮಾಡಲು ಕ್ರಮವಿಡುವುದು. ಸಾಲದ ಕರಾರು ಪತ್ರದಲ್ಲಿ ಸಂಘದ ಸೀಲ್ ಹಾಕಲು ಕ್ರಮವಿಡತಕ್ಕದ್ದು. ಸಾಲದ ಒಳನಿಯಮಗಳನ್ನು ಸಂಘದ ಉಪನಿಯಮಕ್ಕೆ ಸರಿ | ಲೆಕ್ಕಪರಿಶೋಧಕರ ಸಲಹೆಯಂತೆ ಸಾಲದ ಅರ್ಜಿಯಲ್ಲಿ ನಮೂದಿಸಿರುವ ನಿರ್ದೇಶಕರ ಮಂಡಲಿ ಸಭೆ ತೀರ್ಮಾನವನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುವುದು. ಸಾಲದ ಕರಾರು ಪತ್ರದಲ್ಲಿ ಸಂಘದ ಸೀಲ್ ಹಾಕಲು ಕ್ರಮವಿಡಲಾಗುವುದು. |

| | | |
|---|---|---|
| | ಹೊಂದುವಂತೆ ತಿದ್ದುಪಡಿ ಮಾಡಲು ಸೂಚಿಸಲಾಗಿದೆ. | ಉಪನಿಯಮದನುಸಾರ ಪರಿಷ್ಕೃತ ಒಳ ನಿಯಮಗಳನ್ನು ರಚಿಸಿ ಕೊಳ್ಳಲಾಗುವುದು. |
| 27(4) ಜಂಟಿ ಸಾಲ: | ಸಾಲದ ಕರಾರು ಪತ್ರದಲ್ಲಿ ಸಂಘದ ಸೀಲ್ ಹಾಕಲು ಕ್ರಮವಿಡತಕ್ಕದ್ದು. ಸ್ವಂತ ವ್ಯಾಪಾರದ ಆಧಾರದ ಮೇಲೆ ಸಾಲ ಪಡೆಯುವ ಸದಸ್ಯರಿಂದ ವ್ಯಾಪಾರದ ಪರವಾನಿಗೆ ಪಡೆಯಲು ಸೂಚಿಸಿದೆ. ಜಂಟಿ ಸಾಲ ವಿತರಿಸುವಾಗ ಸದಸ್ಯರ ಸಾಲ ಮರುಪಾವತಿ ಕ್ಷಮತೆಯನ್ನು ನಿರ್ಧರಿಸಿ, ಸಾಲ ವಿತರಿಸಲು ಸೂಚಿಸಲಾಗಿದೆ. ಸಾಲ ಮರುಪಾವತಿ ಕ್ಷಮತೆಯನ್ನು ನಿರ್ಧರಿಸಲು ಸೂಕ್ತ ದಾಖಲಾತಿಗಳನ್ನು ಸದಸ್ಯರಿಂದ ಪಡೆಯಲು ಸೂಚಿಸಿದೆ. | ಲೆಕ್ಕಪರಿಶೋಧಕರ ಸಲಹೆ ಸೂಚನೆಯಂತೆ ಸಾಲದ ಕರಾರು ಪತ್ರದಲ್ಲಿ ಸಂಘದ ಸೀಲ್ ಹಾಕಲು ಕ್ರಮವಿಡಲಾಗುವುದು. ಕೆಲವು ಸದಸ್ಯರು ಮನೆಯಲ್ಲೇ ಪರವಾನಿಗೆ ಪಡೆಯದೇ ಸ್ವಂತವಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಸಿಬ್ಬಂದಿವರ್ಗದವರು ವಿಳಾಸ ಪರಿಶೀಲನೆಗೆ ತೆರಳಿದ್ದಾಗ ವ್ಯಾಪಾರದ ಬಗ್ಗೆ ಮಾಹಿತಿ ಪಡೆದುಕೊಂಡಿರುತ್ತಾರೆ. ಸಂಘದ ಆಡಳಿತ ಮಂಡಲಿಯ ತೀರ್ಮಾನದಂತೆ ಸೂಕ್ತ ದಾಖಲಾತಿಗಳನ್ನು ಪಡೆಯಲಾಗುವುದು. |
| 27(5) | ಸಂಘವು ತನ್ನ ಸದಸ್ಯರಿಗೆ ಉಪನಿಯಮದಲ್ಲಿ ತಿಳಿಸಿರುವಂತೆ ವಿವಿಧ ಬಗೆಯ ಸಾಲವನ್ನು ವಿತರಿಸುವ ವ್ಯವಸ್ಥೆ ಹೊಂದಿರುತ್ತದೆ. ಸಾಲ ವಿತರಣೆ ಮತ್ತು ವಸೂಲಾತಿಯ ಬಗ್ಗೆ ವಿಸ್ತೃತವಾದ ಒಳ ನಿಯಮಗಳ ಕೈಪಿಡಿಯನ್ನು 2008 ರಲ್ಲಿ ರಚಿಸಲಾಗಿದೆ. ಈ ಒಳನಿಯಮಗಳು ಸಂಘದ ಉಪನಿಯಮಕ್ಕೆ ಸರಿಹೊಂದುವ ಹಾಗೆ ಪರಿಷ್ಕರಿಸಲು ಸೂಚಿಸಲಾಗಿದೆ. | ಆಡಳಿತ ಮಂಡಲಿಯ ತೀರ್ಮಾನದಂತೆ ಉಪನಿಯಮದನುಸಾರ ಪರಿಷ್ಕೃತ ಒಳನಿಯಮಗಳನ್ನು ರಚಿಸಿಕೊಳ್ಳಲಾಗುವುದು. |
| 29(ಎ)(1) ಲೆಕ್ಕಪರಿಶೋಧನಾ ಕಾಲಕ್ಕೆ ಇವುಗಳ ಸಂಪೂರ್ಣ ದಾಖಲಾತಿಗಳು ಹಾಗೂ ಇ.ಸಿ. ಖಾತಾಉತಾರೆ (Khatha Extract) ಪರಿಶೀಲಿಸಿದ ಬಗ್ಗೆ ವಿಮರ್ಶೆ | ಮೇಲಿನ ಸ್ಥಿರಾಸ್ತಿಗಳ ಪತ್ರವನ್ನು ಪರಿಶೀಲನೆಗೆ ನೀಡಿರುತ್ತಾರೆ ಹಾಗೂ ಪರಿಶೀಲಿಸಿದೆ. ಕೃಷ್ಣಮೂರ್ತಿ ಪುರಂನಲ್ಲಿ ನಿರ್ಮಿಸಲಾದ ಕಟ್ಟಡದ ಪೂರ್ಣಗೊಂಡ ಪ್ರಮಾಣಪತ್ರ ಪಡೆಯಲು ಸೂಚಿಸಲಾಗಿದೆ. | ಸಂಬಂಧಪಟ್ಟ ಪ್ರಾಧಿಕಾರಕ್ಕೆ ಈ ಬಗ್ಗೆ ಪತ್ರ ವ್ಯವಹಾರ ಮಾಡಲಾಗಿರುತ್ತದೆ. |
| 29(ಎ)(2) ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ಸ್ಥಿರಾಸ್ತಿ ರಿಜಿಸ್ಟರ್‌ನನ್ನು ಎಕ್ಸೆಲ್ ತಂತ್ರಾಂಶದಲ್ಲಿ ಬರೆದಿಡಲಾಗಿದೆ. ಸಂಪೂರ್ಣ ಮಾಹಿತಿಗಳನ್ನು ಮುಂದಿನ ದಿನಗಳಲ್ಲಿ ಬರೆದಿಡಲು ಸೂಚಿಸಿದೆ. | ಲೆಕ್ಕಪರಿಶೋಧಕರ ಸಲಹೆಯಂತೆ ಪುಸ್ತಕದಲ್ಲಿ ಬರೆದಿಡಲು ಕ್ರಮವಿಡಲಾಗುವುದು. |
| 29(ಬಿ)(2) ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ಚರಾಸ್ತಿ ರಿಜಿಸ್ಟರ್‌ನನ್ನು ಎಕ್ಸೆಲ್ ತಂತ್ರಾಂಶದಲ್ಲಿ ಬರೆದಿಡಲಾಗಿದೆ. ಅವುಗಳ ಕುರಿತಾದ ನನ್ನ ಅನಿಸಿಕೆಗಳು ಈ ಕೆಳಕಂಡಂತಿರುತ್ತದೆ.<br>ಅ) ಚರಾಸ್ತಿಗಳ ವಿಲೇವಾರಿ ವಿವರಗಳನ್ನು ಆಯಾ ಚರಾಸ್ತಿಯ ವಿವರದೊಂದಿಗೆ ತೋರಿಸುವ ಬದಲಾಗಿ ವಿಲೇವಾರಿ ಆಗಿರುವ ದಿನಾಂಕದಂದು ಒಟ್ಟು ವಿಲೇವಾರಿ ಎಂದು ತೋರಿಸಲಾಗಿದೆ. ಚರಾಸ್ತಿಗಳ ಪೂರ್ಣ ಮಾಹಿತಿಯನ್ನು ಅಂದರೆ ಮೊತ್ತ, ಸಂಖ್ಯೆ, ವಿಲೇವಾರಿಯಾದ ದಿನಾಂಕ ಇತ್ಯಾದಿ ಮಾಹಿತಿಗಳೊಂದಿಗೆ ಬರೆದಿಡಲು ಕ್ರಮವಿಡುವುದು.<br>ಆ)ಸದರಿ ರಿಜಿಸ್ಟರ್‌ನಲ್ಲಿ ಸವಕಳಿ ಮತ್ತು WDVವಿವರಗಳನ್ನೂ ಸೇರಿಸಲು ಕ್ರಮವಿಡುವುದು. | ಲೆಕ್ಕಪರಿಶೋಧಕರ ಸಲಹೆಯಂತೆ ಸಂಘದ ಸನ್ನದು ಲೆಕ್ಕಿಗರು ಹಾಗೂ ಆಂತರಿಕ ಲೆಕ್ಕಪರಿಶೋಧಕರ ಮಾರ್ಗದರ್ಶನ ಪಡೆದು ಪುಸ್ತಕದಲ್ಲಿ ಬರೆದಿಡಲಾಗುವುದು. |
| 29(ಬಿ)(7) ಅನುಪಯುಕ್ತ ಚರಾಸ್ತಿಗಳ ಬಗ್ಗೆ ಸಂಘವು ಕೈಗೊಂಡಿರುವ ಕ್ರಮಗಳ ಕುರಿತು ವಿಮರ್ಶೆ. | ಚರಾಸ್ತಿ ರಿಜಿಸ್ಟರ್‌ನಿಂದ ಅನುಪಯುಕ್ತ ಚರಾಸ್ತಿಗಳನ್ನು ಪ್ರತ್ಯೇಕಿಸಿ ಅವುಗಳ ಕುರಿತು ಸೂಕ್ತ ಕ್ರಮವಿಡುವುದು. | ಲೆಕ್ಕಪರಿಶೋಧಕರ ಸಲಹೆಯಂತೆ ಈ ಬಗ್ಗೆ ಆಡಳಿತ ಮಂಡಲಿಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು. |
| 36) ಲೆಕ್ಕಪರಿಶೋಧಕರ ಸಲಹೆ ಹಾಗೂ ಸೂಚನೆಗಳು(ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮುಕ್ತಾಯಗೊಳಿಸಿದ ನಂತರ ಸಂಘದ ಲೆಕ್ಕಪುಸ್ತಕಗಳ | 36.1) ತಂತ್ರಾಂಶ:<br>ಅ. ಪ್ರಸ್ತುತ ಕೇಂದ್ರ ಕಛೇರಿ ಮತ್ತು ವಿಜಯನಗರ ಶಾಖೆಯಲ್ಲಿ ಗಣಕೀಕೃತ ವ್ಯವಹಾರಗಳನ್ನು, ತನ್ನ ಲೆಕ್ಕಪತ್ರವನ್ನು ಯುನಿಫೈ ಎನ್ನುವ ತಂತ್ರಾಂಶದಲ್ಲಿ ನಿರ್ವಹಿಸುತ್ತಿರುತ್ತದೆ. ಅದರಲ್ಲಿ ಕೇಂದ್ರೀಕೃತ ನಿರ್ವಹಣಾ ತಂತ್ರಾಂಶ ವ್ಯವಸ್ಥೆ ಅಳವಡಿಸಿಕೊಳ್ಳಲು ಸೂಚಿಸಿದೆ. | ಸಂಘದ ಆಡಳಿತ ಮಂಡಲಿ ಸದಸ್ಯರ ಚುನಾವಣೆ ದಿನಾಂಕ:28/01/2024ರಲ್ಲಿ ನಡೆದಿದ್ದು, ತಂತ್ರಾಂಶದ ಉನ್ನತೀಕರಣದ ಯೋಜನೆಯನ್ನು ನೂತನ ಆಡಳಿತ ಮಂಡಲಿ ಸದಸ್ಯರು ಚರ್ಚಿಸಿರುತ್ತಾರೆ. ಮುಂದಿನ ದಿನಗಳಲ್ಲಿ ತಂತ್ರಾಂಶದ |

| | | |
|---|---|---|
| ನಿರ್ವಹಣೆ, ವ್ಯಾಪಾರ ವಹಿವಾಟು/ವ್ಯವಹಾರಗಳು, ಸಾಲಗಳ ನೀಡಿಕೆ ಹಾಗೂ ವಸೂಲಾತಿ, ಠೇವಣಿ ಸಂಗ್ರಹಣೆ ಹಾಗೂ ಹಿಂದಿರುಗಿಸುವಿಕೆ, ಸಂಘವು ಹೊಂದಿರುವ ಲಾಭ/ನಷ್ಟ ಹಾಗೂ ಸಂಘವು ಆರ್ಥಿಕಅಭಿವೃದ್ಧಿ ಹೊಂದಲು ಕೈಗೊಳ್ಳಬೇಕಾದ ಕ್ರಮಗಳ ಹಿನ್ನೆಲೆಯಲ್ಲಿ ನೀಡುವುದು) | ಆ. ತಂತ್ರಾಂಶದಲ್ಲಿ ಕೆಲವೊಂದು ನ್ಯೂನತೆಗಳಿದ್ದು ಅವುಗಳನ್ನು ಸರಿಪಡಿಸಿಕೊಳ್ಳಲು ಕ್ರಮವಿಡುವುದು ಉದಾಹರಣೆಗೆ ನಿಗದಿಯಾದ ಬಡ್ಡಿಯದರವನ್ನು ತಿದ್ದುಪಡಿ ಮಾಡಬಹುದಾಗಿದೆ. ರಶೀತಿಯ ಕ್ರಮ ಸಂಖ್ಯೆಗಳು ತಪ್ಪಾಗಿರುತ್ತದೆ.<br>ಇ. ಸದರಿ ತಂತ್ರಾಂಶದಲ್ಲಿಯೇ ಲೆಕ್ಕಪರಿಶೋಧನೆಗೆ ವ್ಯವಸ್ಥೆ ಕಲ್ಪಿಸಲು ಕ್ರಮವಿಡುವುದು ಮತ್ತು ಲೆಕ್ಕಪರಿಶೋಧಕರಿಗೆ ಅಂತಹ ತಂತ್ರಾಂಶ ಸ್ಥಾಪಿತವಾಗಿರುವ ಗಣಕಯಂತ್ರವು ಪೂರ್ಣ ಲಭ್ಯವಾಗುವ ಹಾಗೆ ಕ್ರಮವಿಡುವುದು.<br>ಈ. ಸಂಘವು ವರ್ಷಕ್ಕೊಮ್ಮೆಯಾದರೂ ತಾನು ಬಳಸುತ್ತಿರುವ ತಂತ್ರಾಂಶದ System Audit ಮಾಡಿಸಿಕೊಳ್ಳಲು ಸೂಚಿಸಿದೆ. | ಉನ್ನತೀಕರಣವನ್ನು ಮಾಡುವ ಸಂದರ್ಭದಲ್ಲಿ ಲೆಕ್ಕಪರಿಶೋಧಕರ ಸಲಹೆಯಂತೆ ಕಾರ್ಯಗತ ಗೊಳಿಸಲಾಗುವುದು. |
| | 36.2) ದಸ್ತಾವೇಜು ನಿರ್ವಹಣೆ: ಕಾಲಕಾಲಕ್ಕೆ ಸದಸ್ಯತ್ವದ ಅರ್ಜಿ, ಸಾಲ/ ಠೇವಣಿ ಪತ್ರಗಳ ನಮೂನೆ– ಅರ್ಜಿ, ಒಪ್ಪಂದ, ಇತ್ಯಾದಿಗಳನ್ನು ವಿಮರ್ಷೆಗೆ ಒಳಪಡಿಸಿ, ಪ್ರಚಲಿತ ತಿದ್ದುಪಡಿಯಾದ ಕಾನೂನುಗಳ ಅನ್ವಯ ಮಾರ್ಪಟು ಮಾಡಿಕೊಳ್ಳಲು ಸೂಚಿಸಿದೆ. | ಈಗಾಗಲೇ ಕ್ರಮವಿಡಲಾಗಿರುತ್ತದೆ. |
| | 36.3) ಸಾಲ ಬಾಕಿಯಿರುವ ಸದಸ್ಯರ ಪೈಕಿ ಮರಣ ಹೊಂದಿರುವ ಸದಸ್ಯರನ್ನು ಗುರುತಿಸಿ ಅಂತಹ ಸಾಲಗಳ ಹೊಂದಾಣಿಕೆ ಮಾಡಲು ಕ್ರಮವಿಡುವುದು. ಅಂತೆಯೇ ಬೇರೆ ಖಾತೆಗಳಿಗೆ/ಠೇವಣಿಗಳಿಗೆ ಕ್ರಮವಿಡುವುದು. | ದಿನಾಂಕ:26/09/2021ರ ಸರ್ವ ಸದಸ್ಯರ ಸಭೆಯಲ್ಲಿ ಸಂಘದ ಅಧಿಕೃತ ವ್ಬ್‌ಸೈಟ್‌ನಲ್ಲಿ ಮರಣ ಹೊಂದಿರುವ 15 ಸದಸ್ಯರ ಪಟ್ಟಿ ಮಾಡಿ, ಪ್ರಚಲಿತಪಡಿಸಲಾಗಿರುತ್ತದೆ. ಅವರು ಮರಣ ಹೊಂದಿರುವ ಬಗ್ಗೆ ಮೌಖಿಕ ಮಾಹಿತಿ ತಿಳಿದು ಬಂದಿರುತ್ತದೆ. ಅವರುಗಳು ಸಂಘಕ್ಕೆ ನೀಡಿರುವ ವಿಳಾಸಕ್ಕೆ ಕಾನೂನು ಸಲಹೆಗಾರರಿಂದ ತಿಳುವಳಿಕೆ ಕಳುಹಿಸಲಾಗಿದ್ದು, ವಿಳಾಸದಲ್ಲಿ ವಾಸವಿಲ್ಲದ ಕಾರಣ ಕೆಲವೊಂದು ವಾಪಸ್ಸ್ ಆಗಿರುತ್ತದೆ ಅವರ ಕುಂಟುಂಬದವರ ವಿವರಗಳು ಲಭ್ಯವಾಗುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿ ಕರಡು ಸಂಶಯಾಸ್ಪದ ಸಾಲದ ನಿಧಿಯಿಂದ ಹೊಂದಾಣಿಕೆ ಮಾಡಲು ಅನುಮತಿ ಕೇಳಲಾಗಿತ್ತು. ಆದರೆ ಸರ್ವ ಸದಸ್ಯರ ಸಭೆಯಲ್ಲಿ ಮರಣ ಧೃಢೀಕರಣ ಪಡೆದು ಕಾರ್ಯಗತಮಾಡಲು ತಿಳಿಸಲಾಗಿತ್ತು. ಆದರೆ ಸದಸ್ಯರ ಮರಣ ಪ್ರಮಾಣ ಪತ್ರ ಇದುವರೆಗೂ ಲಭ್ಯವಾಗದ ಕಾರಣ ಹೊಂದಾಣಿಕೆ ಮಾಡಿರುವುದಿಲ್ಲ. ದಿನಾಂಕ:01/09/2024 ರಂದು ನಡೆಯಲಿರುವ ಸರ್ವಸದಸ್ಯರ ಸಭೆಯಲ್ಲಿ ಮಾಹಿತಿಯನ್ನು ತಿಳಿಸಿ ತಮ್ಮ ಸಲಹೆ ಸೂಚನೆಯನ್ನು ಸಹ ತಿಳಿಸಿ ಅನುಮತಿ ಪಡೆದು ಹೊಂದಾಣಿಕೆ ಮಾಡಲಾಗುವುದು. |
| | 36.4) ಸಂಘವು ಹಿಂದಿನ 4–5 ವರ್ಷಗಳಿಂದಲೂ ಕಾರ್ಯದರ್ಶಿ ನೇಮಕ ಮಾಡಿರುವುದಿಲ್ಲ, ಬದಲಿಗೆ ಪ್ರಭಾರ ಕಾರ್ಯದರ್ಶಿಯವರನ್ನೇ ಮುಂದುವರಿಸಲಾಗುತ್ತಿದೆ. ಈ ಬಗ್ಗೆ 2022–23ರ ವಾರ್ಷಿಕ ಸಭೆಯಲ್ಲೂ ಆಕ್ಷೇಪಿಸಲಾಗಿರುವುದು ಸಭಾ ನಡಾವಳಿಯನ್ನು ಪರಿಶೀಲಿಸಿದಾಗ ಕಂಡುಬಂದಿರುತ್ತದೆ. ಸಂಘವು ಕಾರ್ಯದರ್ಶಿಯವರನ್ನು ನೇಮಕ ಮಾಡಲು ಈ ಕೂಡಲೇ ಕ್ರಮವಿಡುವುದು. | ಆಡಳಿತ ಮಂಡಲಿಯಲ್ಲಿ ಚರ್ಚಿಸಿ ಮುಂದಿನ ದಿನಗಳಲ್ಲಿ ಕಾರ್ಯದರ್ಶಿ ನೇಮಕಾತಿ ಮಾಡಲು ಕ್ರಮವಿಡಲಾಗುವುದು. |

| | | |
|---|---|---|
| | 36.5) 2022–23ರ ವಾರ್ಷಿಕ ಮಹಾಸಭೆ ನಡಾವಳಿಯನ್ನು ಪರಿಶೀಲಿಸಿದಾಗ, ಹೂಡಿಕೆಗಳನ್ನು ರಾಷ್ಟ್ರೀಕೃತ ಅಥವಾ ಷೆಡ್ಯೂಲ್ ಬ್ಯಾಂಕ್‌ನಲ್ಲಿಯೇ ಮಾಡಬೇಕೆಂದು ಸದಸ್ಯರು ಆಗ್ರಹಿಸಿರುತ್ತಾರೆ ಮತ್ತು ಕಾಯ್ದೆ ಕಲಂ 58(ಇ) ರೀತ್ಯ ಅನುಮೋದನೆಯನ್ನೂ ಪಡೆದಿರುತ್ತದೆ. ಸಂಘವು ವರದಿ ಸಾಲಿನಲ್ಲಿ ರಾಷ್ಟ್ರೀಕೃತ ಅಥವಾ ಷೆಡ್ಯೂಲ್ ಬ್ಯಾಂಕ್‌ನ ಹೊರತಾಗಿ ಕೆಲವು ಸಹಕಾರ ಬ್ಯಾಂಕ್‌ಗಳ ಹೂಡಿಕೆಗಳನ್ನು ಹಿಂಪಡೆದಿರುತ್ತದೆ ಮತ್ತು ಇನ್ನೂ ಕೆಲವು ಸಹಕಾರ ಬ್ಯಾಂಕ್‌ಗಳಲ್ಲಿನ ಹೂಡಿಕೆಗಳನ್ನು ಮುಂದುವರೆಸಿರುತ್ತದೆ. ಸರ್ವಸದಸ್ಯರ ತೀರ್ಮಾನದಂತೆ ಕ್ರಮವಿಡಲು ಸೂಚಿಸಲಾಗಿದೆ. | ರಾಷ್ಟ್ರೀಕೃತ ಅಥವಾ ಷೆಡ್ಯೂಲ್ ಬ್ಯಾಂಕ್‌ನಲ್ಲಿ ಠೇವಣಿ ಮಾಡಿದರೆ ಸಂಸ್ಥೆಗೆ ಆದಾಯ ತೆರಿಗೆ ಇಲಾಖೆಯವರು ನೀಡುವ 80ಪಿ ಸೌಲಭ್ಯ ನೀಡುವುದಿಲ್ಲ. ಸಂಘದ ಅಪೀಲ್‌ಗಳನ್ನು ನಿರ್ವಹಿಸುತ್ತಿರುವ **ಸನ್ನದು ಲೆಕ್ಕಿಗರಾದ ಶ್ರೀ ಸತೀಶ್‌ರವರು** ಸಂಘವು 80ಪಿ ಸೌಲಭ್ಯ ಪಡೆಯಲು ಸಹಕಾರ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡುವಂತೆ ಮೌಖಿಕ ಸಲಹೆ ನೀಡಿರುವ ರೀತ್ಯ ಹೂಡಿಕೆಗಳನ್ನು ಸಹಕಾರ ಬ್ಯಾಂಕ್‌ನಲ್ಲಿ ಮುಂದುವರೆಸಲಾಗಿರುತ್ತದೆ. |
| | 36.6) ಆರು ವರ್ಷ ಮೀರಿ ಡಿಕ್ರಿಯಾಗದ ಸಾಲಗಳಿಗೆ ಸೂಕ್ತ ಕ್ರಮವಹಿಸಲು ಸೂಚಿಸಲಾಗಿದೆ, ಮಹಾಸಭೆಯ ಒಪ್ಪಿಗೆ ಪಡೆದು ಕಾಯ್ದಿರಿಸಲು ಸೂಚಿಸಲಾಗಿದೆ.<br>36.7) ಡಿಕ್ರಿಯಾದ ದಿನಾಂಕದಿಂದ 12 ವರ್ಷದ ಒಳಗಾಗಿ ಅಮಲ್ಜಾರಿ ಕೈಗೊಳ್ಳದಿರುವಂತಹ ಸಾಲಗಳಿಗೆ ಶೇ.100 ರಷ್ಟು ಮೀಸಲು ಇಡಲು ಸೂಚಿಸಲಾಗಿದೆ. | ಸದರಿಯವರಿಗೆ ಕಾನೂನು ಸಲಹೆಗಾರರ ಮುಖಾಂತರ ತಿಳುವಳಿಕೆ ಪತ್ರವನ್ನು ಕಳುಹಿಸಲಾಗಿರುತ್ತದೆ. ಮುಂದಿನ ಕ್ರಮವಾಗಿ ದಾವಾ ಕ್ರಮ ಕೈಗೊಳ್ಳಲು ವಕೀಲರಿಗೆ ಅವಶ್ಯಕ ದಾಖಲೆಗಳನ್ನು ನೀಡಲಾಗಿದ್ದು, ಕಾರ್ಯ ಪ್ರಗತಿಯಲ್ಲಿರುತ್ತದೆ. |
| | 36.8) ವರ್ಷಾಂತ್ಯಕ್ಕೆ ಅಮಾನತ್ತು ಖಾತೆಯಲ್ಲಿ ರೂ.2,79,745 ಬಾಕಿ ಇರುತ್ತದೆ. ಸದರಿ ಖಾತೆಯಲ್ಲಿ 2008 ರಿಂದ ಸ್ವೀಕೃತವಾದ ಮೊತ್ತಗಳಿರುತ್ತದೆ, ಸದರಿ ಖಾತೆಯಲ್ಲಿರುವ ಮೊತ್ತಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ. | ಅಮಾನತ್ತು ಖಾತೆಯಲ್ಲಿ ಹೆಚ್ಚಾಗಿ ಬ್ಯಾಂಕ್ ಖಾತೆಗೆ ನೆಫ್ಟ್ ಮುಖಾಂತರ ಹಣ ವರ್ಗಾವಣೆ ಮಾಡಿರುವ ಸದಸ್ಯರು ಸಂಘಕ್ಕೆ ತಿಳಿಯಪಡಿಸದೇ ಇರುವ ಬಾಬ್ತುಗಳಾಗಿರುತ್ತದೆ. ಹಾಗೇ ಷೇರು ಮುಕ್ತಾಯಕ್ಕೆ ಸಂಘದಿಂದ ಚೆಕ್ ನೀಡಲಾಗಿದ್ದು, ಸದಸ್ಯರು ಅದನ್ನು ಅವರ ಖಾತೆಗೆ ಜಮಾ ಮಾಡಿಕೊಳ್ಳದೇ ಅವಧಿ ಮುಗಿದಿರುವುದನ್ನು ಅಮಾನತ್ತು ಖಾತೆಯಲ್ಲಿ ಇಡಲಾಗಿದೆ. ಈ ಮೊತ್ತವನ್ನು ಮುಂದಿನ ದಿನದಲ್ಲಿ ಸಂಬಂಧಪಟ್ಟವರು ಮಾಹಿತಿ ನೀಡಿದ ತಕ್ಷಣ ಅವರ ಖಾತೆಗೆ ವರ್ಗಾಯಿಸಲಾಗುವುದು ಹಾಗೂ ಷೇರು ವಾಪಸಾತಿಗಳ ಪಾವತಿಗೆ ಬೇರೆ ಬದಲಿ ಚೆಕ್ ನೀಡಲಾಗುವುದು. ಉಳಿತಾಯ ಖಾತೆಯಲ್ಲಿ ವ್ಯವಹಾರ ಮಾಡದೇ ಇರುವ ಕನಿಷ್ಟ ಮಿತಿಗಿಂತ ಕಡಿಮೆ ಮೊತ್ತ ಇರುವ ಮೊತ್ತವನ್ನೂ ಸಹ ವರ್ಗಾವಣೆ ಮಾಡಲಾಗಿರುತ್ತದೆ. |

2ಈ ಮೇಲಿನ ವಿವರಗಳಿಗೆ ಸಂಬಂಧಿಸಿದಂತೆ ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ಕೆಲವೊಂದು ನ್ಯೂನ್ಯತೆಗಳು ಈ ಹಿಂದಿನಿಂದ ಮುಂದುವರೆದುಕೊಂಡು ಬಂದಿರುತ್ತದೆ, ಈಗ ನೂತನ ಆಡಳಿತ ಮಂಡಲಿಯವರು ಇದರ ಬಗ್ಗೆ ಗಮನಹರಿಸಿ ಸರಿಪಡಿಸಿಕೊಳ್ಳಲು ಹಾಗೂ ಆಂತರಿಕ ಲೆಕ್ಕಪರಿಶೋಧಕರು ಸಿಎ ಆಗಿರುವುದರಿಂದ ಅವರ ಅನುಭವ ಮತ್ತು ಸಲಹೆಯನ್ನು ಪಡೆದು ಎಲ್ಲವನ್ನು ಸರಿಪಡಿಸಿಕೊಳ್ಳಲು ತಿಳಿಸಿದರು. ಉಪಾಧ್ಯಕ್ಷರು ಉತ್ತರಿಸಿ ತಮ್ಮ ಸಲಹೆಯಂತೆ ಸರಿಪಡಿಸಿಕೊಳ್ಳಲಾಗುವುದು ಹಾಗೂ ತಮ್ಮ ಸಹಾಯವನ್ನು ಸಹ ಪಡೆದುಕೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ಅಗತ್ಯವಿದ್ದಾಗ ಸದಸ್ಯರಾಗಿ ನಾನು ಸಲಹೆ ನೀಡುತ್ತೇನೆ ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ನಾವು ಈಗಾಗಲೇ ಇದರ ಬಗ್ಗೆ ವಿಚಾರವನ್ನು ಮಾಡಲಾಗಿದ್ದು, ಒಂದು ಸಲಹಾ ಸಮಿತಿಯನ್ನು ಮಾಡಿ ಅನುಭವಸ್ಥರ ಸಲಹೆಗಳನ್ನು ಪಡೆದು ಈ ರೀತಿ ತಪ್ಪುಗಳಾಗದಂತೆ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ಕೇಶವಪ್ರಸಾದ್‌ರವರು ಮಾತನಾಡಿ ನಾನು ಲೆಕ್ಕಪರಿಶೋಧನಾ ವರದಿಯನ್ನು ಕೇಳಿದ್ದು, ಅಪೂರ್ಣ ವರದಿ ನೀಡಲಾಗಿರುತ್ತದೆ. ಲೆಕ್ಕಪರಿಶೋಧನಾ ವರದಿಯಲ್ಲಿ ಪುಟ ಸಂಖ್ಯೆ:9ರಲ್ಲಿ ಕುಳುವಾರು ಲಗತ್ತಿಸಲಾಗಿದೆ. ನಾನು ಕೇಳಿದಾಗ ಸದಸ್ಯನಾದ ನಾನು ಅಪೇಕ್ಷಿಸಿದ್ದನ್ನು ನೀಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಮುಂದುವರೆದು ಮಾತನಾಡಿ ವಿಷಯ ಸೂಚಿಯಲ್ಲಿ ಇರುವಾಗ

ಅದಕ್ಕೆ ಸಂಬಂಧಿಸಿದಂತೆ ಮಾಹಿತಿ ಆಪೇಕ್ಷಿಸಿದಾಗ ತಾವು ನೀಡುವುದಿಲ್ಲವೆಂದು ಹೇಳುತ್ತಿರುವುದು ಸರಿಯಲ್ಲ ಎಂದರು ಇದರಲ್ಲಿ ಗೌಪ್ಯತೆ ಏನು ಇರುವುದಿಲ್ಲ ನೀವು ಈ ಮಾಹಿತಿಯನ್ನು ಸಭೆಗೆ ತಿಳಿಸಲೇಬೇಕು ಎಂದರು. ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ನಾವು ಸದಸ್ಯರ ವಿವರ ಕೇಳಿರುವುದಿಲ್ಲ ನಿರ್ದೇಶಕರ ಮಾಹಿತಿಯನ್ನು ನೀಡಬೇಕು ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಸಂಘಕ್ಕೆ ಮೊದಲು ಸದಸ್ಯನಾಗಿದ್ದು, ನಂತರ ನಿರ್ದೇಶಕನಾಗುವುದು ಆದುದರಿಂದ ಅವರ ಸ್ವಂತ ಮಾಹಿತಿಗಳನ್ನು ನೀಡಲು ಸಾಧ್ಯವಿರುವುದಿಲ್ಲವೆಂದು ತಿಳಿಸಿದರು. ಅಧ್ಯಕ್ಷರ ಅನುಮತಿ ಪಡೆದು ನಿರ್ದೇಶಕರು ಮಾಜಿ ಅಧ್ಯಕ್ಷರು ಆದ ಶ್ರೀ ಸಿ ವಿ ಪಾರ್ಥಸಾರಥಿಯವರು ಮಾತನಾಡಿ ಸನ್ನದು ಲೆಕ್ಕಿಗರು ಸಂಪೂರ್ಣವಾಗಿ ಪರಿಶೀಲಿಸಿ ಯಾವುದಾದರು ಲೋಪವಿದ್ದಲ್ಲಿ ಅಲ್ಲಿ ತಿಳಿಸಲಾಗುವುದು ಇದಲ್ಲದೇ ಪ್ರತಿ ಸಭೆಯಲ್ಲಿ ಈ ಮಾಹಿತಿಗಳನ್ನು ಪಾಲಿಸಲಾಗುತ್ತಿದೆ ಇದನ್ನು ಸನ್ನದು ಲೆಕ್ಕಿಗರು ಧೃಢೀಕರಣ ಮಾಡಿರುತ್ತಾರೆ ಎಂದು ತಿಳಿಸಿದರು. ಶ್ರೀ ಕೇಶವ ಪ್ರಸಾದ್‌ರವರು ಮಾತನಾಡಿ ಕುಳುವಾರು ಆಡಿಟ್ ವರದಿಯ ಒಂದು ಅವಿಬಾಜ್ಯ ಅಂಗವಾಗಿರುತ್ತದೆ ಅದನ್ನು ಆಪೇಕ್ಷಿಸಿದ್ದಲ್ಲಿ ನೀಡಬೇಕು ಎಂದು ತಿಳಿಸಿದರು. ಶ್ರೀ ಚಂದ್ರಶೇಖರ್‌ರವರು ಮಾತನಾಡಿ ನಿರ್ದೇಶಕರಿಗೆ ಆದ ಒಂದು ಸ್ಥಾನ ಮಾನವಿರುತ್ತದೆ ಸಂಘದ ವ್ಯವಹಾರಗಳಲ್ಲಿ ಪಾರದರ್ಶಕತೆಯನ್ನು ಕಾಪಾಡಬೇಕು, ಒಬ್ಬ ಸಾಮಾನ್ಯ ಸದಸ್ಯ ಸುಸ್ತಿದಾರನಾದರು ಆಡಳಿತ ಮಂಡಲಿ ಸದಸ್ಯರು ಸುಸ್ತಿದಾರರಾಗಬಾರದು ಎಂದು ತಿಳಿಸಿದರು, ಮುಂದುವರೆದು ಮಾತನಾಡಿ ಕೃಷ್ಣಮೂರ್ತಿಪುರಂನ ಕಟ್ಟಡದ ಸಿ ಆರ್ ಇದುವರೆಗೂ ಪಡೆದಿರುವುದಿಲ್ಲ ಪ್ರಾಮಾಣಿಕವಾಗಿ ಇದಕ್ಕೆ ಪ್ರಯತ್ನಿಸಲು ತಿಳಿಸಿದರು.

ಮುಂದುವರೆದು ಮಾತನಾಡಿ 36.4ರಲ್ಲಿ ಲೆಕ್ಕ ಪರಿಶೋಧಕರು ಕಾರ್ಯದರ್ಶಿ ಹುದ್ದೆಯನ್ನು ಮಾತ್ರ ಭರ್ತಿ ಮಾಡಲು ತಿಳಿಸಿರುತ್ತಾರೆ ಆದರೆ ಸಂಘದಲ್ಲಿ ಈಗಾಗಲೇ ಖಾಲಿ ಇರುವ ಬೇರೆ ಹುದ್ದೆಗಳನ್ನು ಭರ್ತಿ ಮಾಡಲು ತಿಳಿಸಿದರು. ಉಪಾಧ್ಯಕ್ಷರು ಉತ್ತರಿಸಿ ಇದನ್ನು ಗಮನಿಸಿ ಕಾರ್ಯಗತ ಮಾಡಲಾಗುವುದು ಎಂದು ತಿಳಿಸಿದರು. ಶ್ರೀ ಕೇಶವ ಪ್ರಸಾದ್ ರವರು ಮಾತನಾಡಿ ನಾನು ಈ ಹಿಂದೆ ನಿರ್ದೇಶಕನಾಗಿದ್ದು, ಇದರ ಬಗ್ಗೆ ತಿಳಿಸಲಾಗಿತ್ತು ನಿಯಮಾನುಸಾರ ಶೇ5% ಗಿಂತ ಹೆಚ್ಚು ಉಲ್ಲಂಘನೆಯಾಗಿರುವುದರಿಂದ ಸಿ ಆರ್ ಸಿಗುವುದಿಲ್ಲವೆಂದು ತಿಳಿಸಿದರು. ಮತ್ತೊಬ್ಬ ಸದಸ್ಯರು ಮಾತನಾಡಿ ಸರ್ಕಾರದ ಮಾರ್ಗಸೂಚಿ ಉಲ್ಲಂಘನೆ ಆಗಿರುವುದರಿಂದ ಸಿ ಆರ್ ಕೊಡುವುದಿಲ್ಲವೆಂದು ತಿಳಿಸಿದರು. ಈ ಎಲ್ಲಾ ಚರ್ಚೆಗಳ ನಂತರ 2023–24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು.

**10. <u>2023–24ನೇ ಸಾಲಿನ ನಿವ್ವಳ ಲಾಭ ಮತ್ತು ಅದರ ವಿನಿಯೋಗಗಳು:</u>**

2023–24ನೇ ಸಾಲಿನ ನಿವ್ವಳ ಲಾಭ ಮತ್ತು ಅದರ ವಿನಿಯೋಗಗಳ ಬಗ್ಗೆ, ನಿರ್ದೇಶಕರಾದ ಶ್ರೀಮತಿ ಪಿ ಮಹಿಮರವರು ಸಭೆಯಲ್ಲಿ ಮಂಡಿಸಿದರು.

| ಸಂಘದ ಉಪನಿಯಮದ ಸಂಖ್ಯೆ 89.3ರನ್ವಯ ಲಾಭ ಹಂಚಿಕೆಯನ್ನು ನಿರ್ದೇಶಕ ಮಂಡಲಿ ಸದಸ್ಯರ ಸಭೆಯಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದ್ದು, ಸರ್ವ ಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ. | | |
|---|---|---|
| **ಕ್ರ ಸಂ** | **ಲಾಭ ವಿಲೇವಾರಿ** | **ಹಂಚಿಕೆಯ ಮೊಬಲಗು ರೂ.** |
| | ನಿವ್ವಳ ಲಾಭ 31/03/2024ಕ್ಕೆ ಇದ್ದಂತೆ | **35,19,046.69** |
| 1 | ಆಪದ್ಧನ ನಿಧಿ (ಶೇಕಡ 25%) | 8,79,762.69 |
| 2 | ಸಹಕಾರ ಶಿಕ್ಷಣ ನಿಧಿ (ಶೇಕಡ 2%) | 52,786.00 |
| | | **25,86,498.00** |
| 3 | ಲಾಭಾಂಶ (ಶೇಕಡ 8 ರಂತೆ) | 25,72,791.00 |
| 4 | ಕರಡು ಸಾಲದ ನಿಧಿ | 81,153.00 |
| 5 | ಸದಸ್ಯರ ಮರಣೋತ್ತರ ನಿಧಿ | 1,50,000.00 |

| | | |
|---|---|---|
| 6 | ವಿದ್ಯಾ ನಿಧಿ | – |
| 7 | ಕಟ್ಟಡ ನಿಧಿ | – |
| 8 | ಸಿಬ್ಬಂದಿ ಕ್ಷೇಮನಿಧಿ | – |
| 9 | ಸುವರ್ಣ ಮಹೋತ್ಸವ ನಿಧಿ | – |
| 10 | ಸಿಬ್ಬಂದಿ ಬೋನಸ್ಸ್/ಎಕ್ಸ್‌ಗ್ರೇಷಿಯ | 85,000.00 |
| 11 | ಧರ್ಮದ ನಿಧಿ | – |
| 12 | ಲಾಭಾಂಶ ಸಮೀಕರಣ ನಿಧಿ | –3,02,446.00 |
| 13 | ಶತಮಾನೋತ್ಸವ ನಿಧಿ | – |
| 14 | ಸಿಬ್ಬಂದಿ ವಿದ್ಯಾನಿಧಿ | – |
| 15 | ಪ್ರಚಾರ/ಜಾಹೀರಾತು ನಿಧಿ | – |
| | **ಒಟ್ಟು ಮೊತ್ತ** | **25,86,498.00** |

ಕ್ರಮ ಸಂಖ್ಯೆ (3) ರಲ್ಲಿ ಲಾಭಾಂಶ ಶೇಕಡ 8 ರಂತೆ ಪಾವತಿಸಲು ರೂ.3,02,446/– ಗಳನ್ನು ಲಾಭಾಂಶ ಸಮೀಕರಣ ನಿಧಿಯಿಂದ ಹೊಂದಾಣಿಕೆ ಮಾಡಿಕೊಳ್ಳಲು ಸರ್ವ ಸದಸ್ಯರ ಅನುಮೋದನೆ ಕೋರಲಾಗಿದೆ.

ಈ ಮೇಲಿನ ಶಿಫಾರಸ್ಸನ್ನು ಉದ್ದೇಶಿಸಿ ಶ್ರೀ ಚಂದ್ರಶೇಖರ್‌ರವರು ಲಾಭಾಂಶ ಶೇ.8ರಂತೆ ನೀಡುವುದಕ್ಕೆ ನಮ್ಮ ಒಪ್ಪಿಗೆ ಇರುವುದಿಲ್ಲ ಇದನ್ನು ಸರಿದೂಗಿಸಲು ಲಾಭಾಂಶ ಸಮೀಕರಣ ನಿಧಿಯಿಂದ ತೆಗೆದುಕೊಳ್ಳುತ್ತಿರುವುದು ಸರಿ, ಆದರೆ ಲಾಭಾಂಶ ಕ್ರಮವಾಗಿ ಎಷ್ಟು ಕೊಡಲು ಸಾಧ್ಯ ಎಂದು ಕೇಳಿದರು. ಅಧ್ಯಕ್ಷರು ಉತ್ತರಿಸಿ ಶೇ.7ರಂತೆ ನೀಡಬಹುದು ಆದರೆ ಲಾಭಾಂಶ ಸಮೀಕರಣ ನಿಧಿಯಿಂದ ತೆಗೆದುಕೊಳ್ಳುವ ಅವಕಾಶವಿರುವುದರಿಂದ ಶೇ.8 ಕ್ಕೆ ಶಿಫಾರಸ್ಸು ಮಾಡಲಾಗಿದೆ ಎಂದು ತಿಳಿಸಿದರು. ಶ್ರೀ ಎಂ ಎನ್ ವೆಂಕಟಸುಬ್ಬಯ್ಯರವರು ಮಾತನಾಡಿ ನನ್ನ ಮತ್ತು ಎಲ್ಲಾ ಹಿರಿಯ ಸದಸ್ಯರಿಗೂ ಅನುಕೂಲವಾಗುವಂತೆ ಲಾಭಾಂಶವನ್ನು ಖಾತೆಗೆ ವರ್ಗಾವಣೆ ಮಾಡಲು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಹಿರಿಯ ಸದಸ್ಯರಿಗೆ ಅನುಕೂಲಕರವಾಗಿ ಅವರ ಮನೆಗೆ ತಲುಪಿಸುವ ವ್ಯವಸ್ಥೆ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ನೀಡಿದರು. ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ಮರಣ ನಿಧಿಯಲ್ಲಿ ಈಗ 41,000/– ಬಾಕಿ ಇದ್ದು, ಅದೇ ಲೆಕ್ಕ ತೆಗೆದುಕೊಂಡರು ರೂ.1,50,000/– ಸಾಲುವುದಿಲ್ಲ ಈ ಮೊತ್ತವನ್ನು ರೂ.2.50ಲಕ್ಷ ಮಾಡಿಕೊಳ್ಳಲು ತಿಳಿಸಿದರು. ಶ್ರೀ ಜಗದೀಶ್‌ರವರು ಮಾತನಾಡಿ ಸಿಬ್ಬಂದಿ ಕ್ಷೇಮನಿಧಿಯನ್ನು ತೆಗೆದಿಟ್ಟಿಲ್ಲ ಏಕೆ ಎಂದು ಪ್ರಶ್ನಿಸಿದರು. ಅಧ್ಯಕ್ಷರು ಉತ್ತರಿಸಿ ಈ ನಿಧಿಯಲ್ಲಿ ಮೂರು ಲಕ್ಷದವರೆಗು ಹಣ ಇರುವುದರಿಂದ ಈ ಬಾರಿ ಲಾಭವು ಕಡಿಮೆಯಾಗಿದ್ದು ತೆಗೆದಿಟ್ಟಿರುವುದಿಲ್ಲವೆಂದು ತಿಳಿಸಿದರು. ಶ್ರೀ ಜಗದೀಶ್‌ರವರು ಮಾತು ಮುಂದುವರೆಸಿ ಈ ಹಿಂದೆ ಸದಸ್ಯತ್ವ ಹೆಚ್ಚಿದ್ದು ಲಾಭವು 33 ಲಕ್ಷವಿರುತ್ತದೆ ಆಗೆಲ್ಲ ಶೇ.10 ಲಾಭಾಂಶ ನೀಡಲಾಗಿರುತ್ತದೆ. ಈಗ ಶೇ.8 ಶಿಫಾರಸ್ಸು ಮಾಡಿರುವುದು ಸರಿಯೇ ಎಂದು ಕೇಳಿದರು. ಖಜಾಂಚಿಗಳು ಉತ್ತರಿಸಿ ಈಗ ಷೇರು ಮುಖಬೆಲೆ ಹೆಚ್ಚಾಗಿರುತ್ತದೆ ಎಂದು ತಿಳಿಸಿದರು. ಶ್ರೀ ಜಗದೀಶ್‌ರವರು ಮಾತನಾಡಿ ಈಗಾಗಲೇ ಲಾಭಾಂಶ ಸಮೀಕರಣ ನಿಧಿಯಿಂದ ತೆಗೆದುಕೊಳ್ಳಲು ಅನುಮತಿ ಕೇಳುತ್ತಿದ್ದು ಶೇ.10ಕ್ಕೆ ನಿರ್ಧರಿಸಿ ಹೆಚ್ಚುವರಿ ಮೊತ್ತವನ್ನು ಲಾಭಾಂಶ ಸಮೀಕರಣ ನಿಧಿಯಿಂದ ತೆಗೆದುಕೊಳ್ಳಲು ತಿಳಿಸಿದರು. ಎಲ್ಲಾ ಸದಸ್ಯರು ಇದೇ ಅಭಿಪ್ರಾಯವನ್ನು ಸೂಚಿಸಿದ್ದರ ಮೇರೆಗೆ ಸದಸ್ಯರ ಅಪೇಕ್ಷೆಯಂತೆ ಅಧ್ಯಕ್ಷರು ಲಾಭಾಂಶವನ್ನು ಶೇ 10ರಂತೆ ನೀಡಲು ಒಪ್ಪಿ ಘೋಷಿಸಿದರು.

ಈ ಮೇಲೆ ಚರ್ಚಿಸಿದ ವಿವರದಂತೆ ಸರ್ವ ಸದಸ್ಯರ ಸರ್ವಾನುಮತದ ಒಪ್ಪಿಗೆ ಮೇರೆಗೆ ಈ ಕೆಳಗಿನಂತೆ ಲಾಭಾಂಶವನ್ನು ಹಂಚಿಕೆ ಮಾಡಲಾಯಿತು.

**ಸಂಘದ ಉಪನಿಯಮದ ಸಂಖ್ಯೆ 89.3ರನ್ವಯ ಲಾಭ ಹಂಚಿಕೆಯನ್ನು ಸರ್ವ ಸದಸ್ಯರ ಸಭೆಯ**

| ಅನುಮೋದನೆಯಂತೆ ನಿವ್ವಳ ಲಾಭ ಹಂಚಿಕೆಯನ್ನು ಮಾಡಲಾಗಿದೆ | | |
|---|---|---|
| **ಕ್ರ ಸಂ** | **ಲಾಭ ವಿಲೇವಾರಿ** | **ಹಂಚಿಕೆಯ ಮೊಬಲಗು ರೂ.** |
| | ನಿವ್ವಳ ಲಾಭ 31/03/2024ಕ್ಕೆ ಇದ್ದಂತೆ | **35,19,046.69** |
| 1 | ಆಪದ್ಧನ ನಿಧಿ (ಶೇಕಡ 25%) | 8,79,762.69 |
| 2 | ಸಹಕಾರ ಶಿಕ್ಷಣ ನಿಧಿ (ಶೇಕಡ 2%) | 52,786.00 |
| | | **25,86,498.00** |
| 3 | ಲಾಭಾಂಶ (ಶೇಕಡ 10ರಂತೆ)<br>(ಲಾಭಾಂಶ ಹಂಚಿಕೆಯಿಂದ ರೂ. 21,70,345+ಲಾಭಾಂಶ ಸಮೀಕರಣ ನಿಧಿಯಿಂದ ರೂ. 10,83,313=32,53,658) | 21,70,345.00 |
| 4 | ಕರಡು ಸಾಲದ ನಿಧಿ | 81,153.00 |
| 5 | ಸದಸ್ಯರ ಮರಣೋತ್ತರ ನಿಧಿ | 2,50,000.00 |
| 6 | ವಿದ್ಯಾ ನಿಧಿ | – |
| 7 | ಕಟ್ಟಡ ನಿಧಿ | – |
| 8 | ಸಿಬ್ಬಂದಿ ಕ್ಷೇಮನಿಧಿ | – |
| 9 | ಸುವರ್ಣ ಮಹೋತ್ಸವ ನಿಧಿ | – |
| 10 | ಸಿಬ್ಬಂದಿ ಬೋನಸ್/ಎಕ್ಸ್‌ಗ್ರೇಷಿಯಾ | 85,000.00 |
| 11 | ಧರ್ಮದ ನಿಧಿ | – |
| 12 | ಲಾಭಾಂಶ ಸಮೀಕರಣ ನಿಧಿ | – |
| 13 | ಶತಮಾನೋತ್ಸವ ನಿಧಿ | – |
| 14 | ಸಿಬ್ಬಂದಿ ವಿದ್ಯಾನಿಧಿ | – |
| 15 | ಪ್ರಚಾರ/ಜಾಹಿರಾತು ನಿಧಿ | – |
| | **ಒಟ್ಟು ಮೊತ್ತ** | **25,86,498.00** |

ಕ್ರಮ ಸಂಖ್ಯೆ (3) ರಲ್ಲಿ ಲಾಭಾಂಶ ಶೇಕಡ 10 ರಂತೆ ಪಾವತಿಸಲು ರೂ.10,83,313/– ಗಳನ್ನು ಲಾಭಾಂಶ ಸಮೀಕರಣ ನಿಧಿಯಿಂದ ಹೊಂದಾಣಿಕೆ ಮಾಡಿಕೊಳ್ಳಲು ಸರ್ವಸದಸ್ಯರ ಅನುಮೋದನೆ ಕೋರಲಾಗಿದೆ. ಲಾಭಾಂಶದ ಒಟ್ಟು ಮೊತ್ತ ರೂ.32,53,658/–ಗಳಾಗುತ್ತದೆ ಎಂದು ತಿಳಿಸಲಾಗಿ ಸರ್ವಾನುಮತದ ಅನುಮೋದನೆ ನೀಡಲಾಯಿತು.

**11. 2023–24ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಾಗಿ ಖರ್ಚಾಗಿರುವ ಮೊತ್ತಕ್ಕೆ ಅನುಮೋದನೆ ನೀಡುವುದು ಮತ್ತು 2024–25ನೇ ಸಾಲಿನ ಆಯವ್ಯಯದ ಅಂದಾಜು ಮಂಜೂರಾತಿ:**

ನಿರ್ದೇಶಕರಾದ ಶ್ರೀ ಎಂ ಆರ್ ಬಾಲಕೃಷ್ಣರವರು, ಮೇಲ್ಕಂಡ ವಿಷಯವನ್ನು ಸರ್ವಸದಸ್ಯರ ಸಭೆಯಲ್ಲಿ ಮಂಜೂರಾತಿಗೆ ಮಂಡಿಸಿದರು. ವಿವರಗಳು ಈ ಕೆಳಗಿನಂತೆ:

# ಅಗಸ್ತ್ಯ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ (ರಿ)

**2024-25ನೇ ಸಾಲಿಗೆ ಅಂದಾಜು ಆಯ-ವ್ಯಯ ಪಟ್ಟಿಯನ್ನು ಆಡಳಿತ ಮಂಡಲಿ ಸಭೆಯ ದಿನಾಂಕ:16/03/2024 ವಿ.ಸಂಖ್ಯೆ:3ರಲ್ಲಿ ಅನುಮೋದನೆಗೆ ಮಂಡಿಸಲಾಗಿರುತ್ತದೆ. ಆಯ-ವ್ಯಯ ಪಟ್ಟಿಯನ್ನು ಮರು ನಿಗದಿಪಡಿಸಿ ಸರ್ವ ಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ**

**2023-24ರ ವೆಚ್ಚವು ಸರ್ವ ಸದಸ್ಯರ ಸಭೆಯ ಮಂಜೂರಾತಿ ವೆಚ್ಚಕ್ಕಿಂತ ಹೆಚ್ಚುವರಿಯಾಗಿ ರೂ.8,27,423/-ಗಳು ಖರ್ಚಾಗಿರುವುದನ್ನು ಸರ್ವ ಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ**

| ವಿವರಗಳು | 2023-24ಕ್ಕೆ ಸರ್ವಸದಸ್ಯರ ಸಭೆಯ ಮಂಜೂರಾಗಿದ್ದ ಮೊತ್ತ (ರೂ) | 31/03/2024 ಕ್ಕೆ ವಾಸ್ತವವಾಗಿ ಆಗಿರುವುದು ಒಟ್ಟು (ರೂ) | ಮಂಜೂರಾತಿ ಗಿಂತ ಹೆಚ್ಚಾಗಿ ಖರ್ಚಾ ಗಿರುವುದು (ರೂ) | 2024-25ನೇ ಸಾಲಿಗೆ ಅಂದಾಜು ಆಯ-ವ್ಯಯ ಅನುಮೋದನೆಗೆ (ರೂ). |
|---|---|---|---|---|
| ಖರ್ಚು ವಿವರಗಳು | | | | |
| 1) ಠೇವಣಿಗಳ ಮೇಲಿನ ಬಡ್ಡಿ ಪಾವತಿ: | 1,75,00,000 | 1,81,14,517.00 | 6,14,517 | 1,90,00,000 |
| **ಮೊತ್ತ(1)** | **1,75,00,000** | **1,81,14,517.00** | **6,14,517** | **1,90,00,000** |
| 2) ಆಡಳಿತ ನಿರ್ವಹಣಾ ವೆಚ್ಚಗಳು: | | | | |
| ಸಿಬ್ಬಂದಿ ವೆಚ್ಚಗಳು: | 50,00,000 | 41,14,379.00 | – | 50,00,000 |
| **ಮೊತ್ತ(2)** | **50,00,000** | **41,14,379.00** | – | **50,00,000** |
| 3) ರಿಪೇರಿ ಮತ್ತು ನವೀಕರಣ ವೆಚ್ಚಗಳು: | | | | |
| ರಿಪೇರಿ ಮತ್ತು ನವೀಕರಣ | 1,00,000 | 63,916.00 | – | 1,00,000 |
| ನಾಮಫಲಕ ವೆಚ್ಚ | | 11,490.00 | – | |
| ಗಣಕಯಂತ್ರ ನಿರ್ವಹಣಾ ವೆಚ್ಚ | 1,00,000 | 63,050.00 | – | 1,00,000 |
| ನಿರ್ವಹಣಾ ವೆಚ್ಚ (ಜೆರಾಕ್ಸ್ ಯಂತ್ರ, ಯು ಪಿ ಎಸ್, ಜನರೇಟರ್, ಮಾಪನ ಯಂತ್ರದ ಬಾಬ್ತು ಪಾವತಿ) | 50,000 | 47,273.00 | – | 50,000 |
| **ಮೊತ್ತ (3)** | **2,50,000** | **1,85,729.00** | – | **2,50,000** |
| 4) ಕಮಿಷನ್ ಮತ್ತು ಸಾಲ ವಸೂಲಾತಿ ವೆಚ್ಚಗಳು: | | | | |
| ದಿನವಹಿ ಮರುಪಾವತಿ ಸಾಲದ ಕಮೀಷನ್ | 75,000 | 32,987.00 | – | 50,000 |
| ಪಿಗ್ಮಿ ಸಂಗ್ರಹಕಾರರಿಗೆ ಪ್ರೋತ್ಸಾಹ ಧನ | 75,000 | 56,000.00 | – | 75,000 |
| ಪ್ರೋತ್ಸಾಹ ಧನ (ಎಲ್.ಆರ್.ಸಿ) | 75,000 | 46,893.00 | – | 75,000 |
| ಪಿಗ್ಮಿ ಕಮಿಷನ್ | 3,75,000 | 3,73,447.00 | – | 4,00,000 |
| ಸಾಲ ವಸೂಲಾತಿ ವೆಚ್ಚ | 25,000 | 1,301.00 | – | 25,000 |
| **ಮೊತ್ತ (4)** | **6,25,000** | **5,10,628.00** | – | **6,25,000** |

# ಅಗಸ್ತ್ಯ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ (ರಿ)

| 5) ಇತರೆ ಆಡಳಿತ ನಿರ್ವಹಣಾ ವೆಚ್ಚಗಳು: | | | | |
|---|---|---|---|---|
| ನೀರಿನ ಕಂದಾಯ | 20,000 | 19,714.00 | – | 25,000 |
| ಸಂಘದ ವೃತ್ತಿ ತೆರಿಗೆ | 5,000 | 5,000.00 | – | 5,000 |
| ವಿದ್ಯುತ್ ವೆಚ್ಚ | 1,25,000 | 96,952.00 | – | 1,25,000 |
| ವಿದ್ಯುತ್ ಉಪಕರಣ | – | 2,800.00 | 2,800 | 5,000 |
| ವಿಮೆ ವಂತಿಗೆ | 1,25,000 | 88,932.00 | – | 1,25,000 |
| ಲಾಕರ್ ಬಾಡಿಗೆ | 2,000 | 1,750.00 | – | – |
| ದೂರವಾಣಿ ವೆಚ್ಚ | 60,000 | 51,253.00 | – | 60,000 |
| ಅಂಚೆ ವೆಚ್ಚ | 50,000 | 24,861.00 | – | 40,000 |
| ಮುದ್ರಣ ಮತ್ತು ಲೇಖನ ಸಾಮಗ್ರಿ | 1,50,000 | 1,53,529.00 | 3,529 | 1,75,000 |
| ಪಹರೆ ಮತ್ತು ರಕ್ಷಣೆ | 6,00,000 | 4,73,575.00 | – | 5,50,000 |
| ದಿನಪತ್ರಿಕೆ ಚಂದಾ | 15,000 | 7,926.00 | – | 10,000 |
| ಗೌರವ ಧನ ಪಾವತಿ (ಪದಾಧಿಕಾರಿಗಳಿಗೆ) | 30,000 | 21,000.00 | – | 30,000 |
| ಗೌರವ ಧನ ಪಾವತಿ (ಇತರೆ) | 10,000 | 2,500.00 | – | 10,000 |
| ವಾರ್ಷಿಕೋತ್ಸವದ ವೆಚ್ಚ | 75,000 | 31,232.00 | – | 50,000 |
| ಸರ್ವ ಸದಸ್ಯರ ಸಭೆಯ ವೆಚ್ಚ | 5,00,000 | 4,66,891.00 | – | 5,50,000 |
| ಲೆಕ್ಕ ಪರಿಶೋಧನಾ ಶುಲ್ಕ | 1,50,000 | 1,35,000.00 | | 1,50,000 |
| ವೃತ್ತಿ ಶುಲ್ಕ | 1,75,000 | 68,386.00 | – | 2,50,000 |
| ಕಟ್ಟಡ ಕಂದಾಯ | 1,25,000 | 1,02,922.00 | – | 1,25,000 |
| ಪ್ರಯಾಣ ಭತ್ಯೆ | 75,000 | 76,000.00 | 1,000 | 1,00,000 |
| ಸಭಾ ಭತ್ಯೆ | 1,50,000 | 1,07,200.00 | – | 1,50,000 |
| ಜಾಹಿರಾತು ವೆಚ್ಚ | – | 1,905.00 | 1,905 | |
| ಸಂಭಾವನೆ | 1,50,000 | 1,20,000.00 | – | 2,00,000 |
| ಸಾದಿಲ್ವಾರು | 6,00,000 | 6,14,458.60 | 14,459 | 6,50,000 |
| ಕಾನೂನು ವೆಚ್ಚ , ದಾವಾ ಶುಲ್ಕ | 50,000 | 8,260.00 | – | 50,000 |
| ಕ್ಯಾಲೆಂಡರ್ ಮುದ್ರಣ ಬಾಬ್ತು | 60,000 | 48,000.00 | | 60,000 |
| ಬ್ಯಾಂಕ್ ಛಾರ್ಜಸ್ | 10,000 | 6,410.46 | – | 10,000 |
| ಗ್ರಾಹಕರ ಸಭೆಯ ಹಾಗೂ ಸಹಕಾರ ಸಪ್ತಾಹದ ವೆಚ್ಚ | 2,00,000 | 1,440.00 | – | 1,50,000 |
| ಅಧ್ಯಯನ ಪ್ರವಾಸ | 1,00,000 | – | – | 1,00,000 |
| ಉಪನಿಯಮ ತಿದ್ದುಪಡಿ ಶುಲ್ಕ | 5,000 | 2,500.00 | – | 5,000 |
| ಚುನಾವಣಾ ವೆಚ್ಚ | 4,00,000 | 5,24,933.00 | 1,24,933 | – |
| ಕಛೇರಿ ಉಪಕರಣ,ಯುಪಿಎಸ್ ಬ್ಯಾಟರಿ ((buy back)) | – | 409.00 | – | – |
| ಮೊತ್ತ (5) | **40,17,000** | **32,65,739.06** | **7,63,143** | **37,60,000** |

| | | | | |
|---|---|---|---|---|
| 7. ಆಯವ್ಯಯೇತರ ಖರ್ಚು: | | | | |
| ಆದಾಯ ತೆರಿಗೆ ಮೇಲ್ಮನವಿ ಶುಲ್ಕ | 7,00,000 | 1,000.00 | – | 7,00,000 |
| ಆದಾಯ ತೆರಿಗೆ (ಇ ಡಿ ಎಸ್ ಡಂಡ ಶುಲ್ಕ ಪಾವತಿ) | | 1,79,045.00 | 64,280 | |
| ಅನರ್ಹ ಜಿಎಸ್‌ಟಿ ಮೊತ್ತ | | 1,52,119.00 | – | |
| ಕಾಯ್ದಿರಿಸಿದ ಲೆಕ್ಕಗಳು: ಸವಕಳಿ | | 4,32,116.00 | – | |
| **ಮೊತ್ತ (6)** | **7,00,000** | **7,64,280.00** | **64,280** | **7,00,000** |
| **ಒಟ್ಟು ಖರ್ಚು (ಮೊತ್ತ (1) ರಿಂದ (7)ರವರೆಗೆ** | **2,80,92,000** | **2,69,55,272.06** | **8,27,423** | **2,93,35,000** |
| **ನಿವ್ವಳ ಲಾಭ** | **1,09,08,000** | **35,19,046.69** | | **91,65,000** |
| **ಆದಾಯದ ವಿವರಗಳು** | | | | |
| **1. ಸಾಲಗಳ ಮೇಲಿನ ಬಡ್ಡಿ** | 3,00,00,000 | 2,22,35,733.00 | – | 3,00,00,000 |
| **ಮೊತ್ತ (1)** | **3,00,00,000** | **2,22,35,733.00** | – | **3,00,00,000** |
| **2. ಧನವಿನಿಯೋಗಗಳ ಮೇಲಿನ ಬಡ್ಡಿ:** | 80,00,000 | 72,45,921.25 | – | 75,00,000 |
| **ಮೊತ್ತ (2)** | **80,00,000** | **72,45,921.25** | – | **75,00,000** |
| **3. ಇತರೆ ಆದಾಯಗಳು:** | 10,00,000 | 9,86,821.00 | – | 10,00,000 |
| **ಮೊತ್ತ (3)** | **10,00,000** | **9,86,821.00** | – | **10,00,000** |
| **4. ಇತರೆ ಜಮಾ:** | – | 5,843.50 | – | – |
| **ಮೊತ್ತ (4)** | – | **5,843.50** | – | – |
| **ಒಟ್ಟು ಲಾಭದ ಮೊತ್ತ (1) ರಿಂದ (4)ರವರೆಗೆ** | **3,90,00,000** | **3,04,74,318.75** | – | **3,85,00,000** |
| | | | | |
| ಬಂಡವಾಳ ಖರ್ಚುಗಳು (ಅಂದಾಜು) | | | | |
| ಗಣಕ ಯಂತ್ರ ನೂತನ ತಂತ್ರಾಂಶ ಮತ್ತು ಗಣಕ ಯಂತ್ರದ ಅಳವಡಿಕೆಗಾಗಿ | **5,00,000** | 53,008.00 | – | **8,00,000** |
| ಪೀಠೋಪಕರಣ ಖರೀದಿಗಾಗಿ (ಪ್ರಧಾನ ಕಛೇರಿ ಮತ್ತು ಶಾಖಾ ಕಛೇರಿಗಾಗಿ) ಹಾಗೂ ಕಛೇರಿ ಉಪಕರಣಗಳು | **1,00,000** | 15,550.00 | – | **1,00,000** |
| ಯುಪಿಎಸ್/ಜನರೇಟರ್ ಮತ್ತು ಸಿಸಿಟಿವಿ ಕ್ಯಾಮರಾ | **1,00,000** | 86,638.00 | – | **1,00,000** |
| ಪ್ರಧಾನ ಕಛೇರಿಗೆ ಲಿಫ್ಟ್ ಅಳವಡಿಸಲು | – | – | – | **19,80,000** |
| ಪ್ರಧಾನ ಕಛೇರಿಯಲ್ಲಿ ಸಭಾಂಗಣ ನಿರ್ಮಾಣ ಮಾಡಲು | – | – | – | **9,00,000** |

ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಠೇವಣಾತಿಗಳ ಮೇಲಿನ ಬಡ್ಡಿಯನ್ನು ಹೆಚ್ಚಾಗಿ ಪಾವತಿ ಮಾಡಿರುವುದಕ್ಕೆ ಅನುಮತಿಯ ಅವಶ್ಯಕತೆ ಇರುವುದಿಲ್ಲವೆಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಈ ಬಡ್ಡಿದರವನ್ನು ಸದಸ್ಯನಿಂದ ಠೇವಣಿ ಸ್ವೀಕರಿಸಿದಾಗ ಒಂದು ನಿರ್ದಿಷ್ಟ ಕಾಲವಧಿಗೆ ವಚನ ಬದ್ಧರಾಗಿ ನೀಡುವಂತಹ ಬಡ್ಡಿಯಾಗಿರುತ್ತದೆ. ಇದರಲ್ಲಿ ಯಾವುದೇ ಮಾರ್ಪಾಡು ಸಾಧ್ಯವಿರುವುದಿಲ್ಲವೆಂದು, ಆದರೆ ಸಭೆಗೆ ಮಾಹಿತಿ ನೀಡಬೇಕಾಗಿರುವುದರಿಂದ ಹೆಚ್ಚುವರಿ ಮೊತ್ತ ತಿಳಿಸಲಾಗಿದೆ ಎಂದು ತಿಳಿಸಿದರು. ಮುಂದುವರೆದು ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಸಿಬ್ಬಂದಿ ವೆಚ್ಚ ರೂ.55ಲಕ್ಷ ಕೇಳಿರುವುದು ಖರ್ಚಾಗಿರುವುದು 41 ಲಕ್ಷಗಳಾಗಿರುತ್ತದೆ. ಆದುದರಿಂದ 50 ಲಕ್ಷವನ್ನು ಮಾಡಿಕೊಳ್ಳಲು ತಿಳಿಸಿದರು. ಮುಂದುವರೆದಂತೆ

ಖರ್ಚುಗಳಿಗೆ ಆದಷ್ಟು ಕಡಿವಾಣ ಹಾಕಲು ತಿಳಿಸಿದರು ಹಾಗೂ ಆದಾಯ ನಾವು ತಿಳಿಸಿರುವಂತೆ ಗುರಿ ತಲುಪಲು ಸಾಧ್ಯವಾಗುತ್ತಿಲ್ಲ ಆದರೆ ಗಮನಹರಿಸಲು ತಿಳಿಸಿದರು. ಈ ಎಲ್ಲ ಚರ್ಚೆಗಳ ನಂತರ ಲಿಫ್ಟ್ ಅಳವಡಿಕೆ ಮತ್ತು ಸಭಾಂಗಣ ನಿರ್ಮಾಣ ಈ ಎರಡನ್ನು ಹೊರತುಪಡಿಸಿ ಅನುಮೋದನೆಯನ್ನು ಸರ್ವಾನುಮತದಿಂದ ಸೂಚಿಸಲಾಯಿತು.

12. **ಸಹಕಾರ ಸಂಘಗಳ ಕಾಯಿದೆ ಕಲಂ 63(2)ರ ರೀತ್ಯ 2024-25ನೇ ಸಾಲಿನ ಸನ್ನದು ಲೆಕ್ಕ ಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ:**

ನಿರ್ದೇಶಕರಾದ ಶ್ರೀ ಕೆ ಎನ್ ಅರುಣ್‌ರವರು ಈ ವಿಷಯವನ್ನು ಸರ್ವಸದಸ್ಯರ ಸಭೆಯಲ್ಲಿ ಮಂಡಿಸಿದರು. ವಿವರ ಈ ಕೆಳಗಿನಂತೆ,

ಸಹಕಾರ ಸಂಘಗಳ ಕಾಯಿದೆ ಕಲಂ 63(2) ರೀತ್ಯ 2024-25ನೇ ಸಾಲಿಗೆ ಸನ್ನದು ಲೆಕ್ಕಿಗರಾದ **ಶ್ರೀ ಕೆ. ಎಸ್. ಸದಾಶಿವ & ಕೋ.,** ರವರನ್ನು ಅಥವಾ **ಸನ್ನದು ಲೆಕ್ಕಿಗರಾದ ಶ್ರೀ ಸಿ ಎಸ್ ಸತ್ಯನಾರಾಯಣ** ಇಬ್ಬರಲ್ಲಿ ಒಬ್ಬರನ್ನು ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿಕೊಳ್ಳಲು ಹಾಗೂ ಸಂಭಾವನೆಯನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ನೀಡುವ ಮಾರ್ಗಸೂಚಿಯಂತೆ ಪಾವತಿಸಲು ಸರ್ವ ಸದಸ್ಯರ ಸಭೆಯ ಅನುಮತಿಯನ್ನು ಕೇಳಿ ಮಂಡಿಸಿದರು. ಸಹಕಾರ ಸಂಘಗಳ ಕಾಯಿದೆ ಕಲಂ 63(2)ರ ರೀತ್ಯ 2024-25ನೇ ಸಾಲಿನ ಸನ್ನದು ಲೆಕ್ಕ ಪರಿಶೋಧಕರನ್ನಾಗಿ ಶ್ರೀ ಸಿ ಎಸ್ ಸತ್ಯನಾರಾಯಣರವನ್ನು ಆಯ್ಕೆ ಮಾಡಿ ನೇಮಕ ಮಾಡಿಕೊಳ್ಳಲು ಮತ್ತು ಸಂಭಾವನೆಯನ್ನು ಮಾರ್ಗಸೂಚಿಯಂತೆ ನೀಡಲು ಸಭೆಯು ಸರ್ವಾನುಮತನಿಂದ ಅನುಮೋದನೆ ನೀಡಿತು.

13. **ಸಹಕಾರ ಸಂಘಗಳ ಕಾಯಿದೆ ಕಲಂ 58ರ ರೀತ್ಯ ರಾಷ್ಟ್ರೀಕೃತ ಹಾಗೂ ಇತರೇ ಬ್ಯಾಂಕುಗಳಲ್ಲಿ ಖಾತೆ ತೆರೆದು ವ್ಯವಹರಿಸಲು ಮತ್ತು ಸಂಘದ ಠೇವಣಾತಿಗಳನ್ನು ಹೂಡಿಕೆ ಮಾಡಲು ಅನುಮೋದನೆ ನೀಡುವುದು:**

ನಿರ್ದೇಶಕರಾದ ಶ್ರೀ ಕೆ ಎನ್ ಅರುಣ್‌ರವರು ಈ ವಿಷಯವನ್ನು ಸಭೆಗೆ ಮಂಡಿಸಿದರು. ಸಂಘದ ದಿನನಿತ್ಯದ ವ್ಯವಹಾರದಲ್ಲಿ ಹಣದ ಒಳಹರಿವನ್ನು ಗಮನಿಸಿ ಗುಣಮಟ್ಟದ ಸಾಲದ ವಿತರಣೆ ಮಾಡಿದ ನಂತರ ಹೆಚ್ಚುವರಿ ಹಣವನ್ನು ಸಹಕಾರಿ ಬ್ಯಾಂಕ್‌ಗಳಲ್ಲಿ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಹೂಡಿಕೆಯಲ್ಲಿ ತೊಡಗಿಸಲು ಅನುಮತಿ ಕೋರಲಾಗಿದೆ. ಹಾಲಿ ಅನುಮೋದನೆಯಂತೆ ಸಂಘವು ಸಹಕಾರ ಬ್ಯಾಂಕ್ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆ ತೆರೆದು ವ್ಯವಹರಿಸಲಾಗುತ್ತಿದೆ. ಸಂಘದ ಹೆಚ್ಚುವರಿ ಹಣವನ್ನು ನಿಯಮಾನುಸಾರ ಆಗಿದ್ದಾಂಗೆ ಠೇವಣಿಗಳಲ್ಲಿ ತೊಡಗಿಸಲಾಗಿದೆ ವಿವರ ಈ ಕೆಳಗಿನಂತೆ:

**ದಿನಾಂಕ 31/03/2024ಕ್ಕೆ ಇದ್ದಂತೆ ಬ್ಯಾಂಕ್ ಶಿಲ್ಕು**

| | |
|---|---|
| ಯೂಕೋ ಬ್ಯಾಂಕ್ ಚಾಲ್ತಿ ಖಾತೆ | (15,33,873.62) |
| ಬ್ಯಾಂಕ್ ಆಫ್ ಇಂಡಿಯಾ ಚಾಲ್ತಿ ಖಾತೆ | 5,01,714.71 |
| ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಚಾಲ್ತಿ ಖಾತೆ | 12,21,413.49 |
| ಎಸ್ ಬಿ ಐ, ವಿಜಯನಗರ ಉಳಿತಾಯ ಖಾತೆ | 5,30,310.26 |
| ಕೆನರಾ ಬ್ಯಾಂಕ್ ಚಾಲ್ತಿ ಖಾತೆ | 9,97,050.00 |
| **ಒಟ್ಟು ಮೊತ್ತ** | **17,16,614.84** |

**ದಿನಾಂಕ 31/03/2024ಕ್ಕೆ ಇದ್ದಂತೆ ಹೂಡಿಕೆಗಳು**

| SL NO | BANK DETAILS | | AMOUNT |
|---|---|---|---|
| 1 | MDCC BANK LTD., | Reserve Fund | 1,99,06,755.41 |
| 2 | MDCC BANK LTD., | Share | 10,000.00 |
| 3 | MYSORE MERCHANTS CO OPERATIVE BANK LTD., | FD | 3,86,74,395.00 |
| 4 | UCO BANK | FD | 3,88,80,390.00 |
| 5 | UCO BANK SWEEP DEPOSIT | | 34,80,800.00 |
| 6 | BANK OF INDIA SWEEP DEPOSIT | | 1,00,542.00 |
| 8 | THE NATIONAL CO-OPERATIVE BANK LTD., | FD | 1,39,00,088.00 |
| | **TOTAL** | | **11,13,71,628.41** |

ಸದಸ್ಯರಾದ ಶ್ರೀ ಶ್ರೀನಿವಾಸಶರ್ಮಾರವರು ಮಾತನಾಡಿ ಈ ಹಿಂದೆ ಸರ್ವಸದಸ್ಯರ ಸಭೆಯ ನಿರ್ಣಯವನ್ನು ಓದಲು ತಿಳಿಸಿದರು. ಖಜಾಂಚಿಗಳು ಹಿಂದಿನ ಸಭೆಯ ನಡಾವಳಿಯನ್ನು ಓದಿದರು. ರಾಷ್ಟ್ರೀಕೃತ ಮತ್ತು ಷೆಡ್ಯೂಲ್ ಬ್ಯಾಂಕ್‌ಗಳಲ್ಲಿ ಮಾತ್ರ ಹೂಡಿಕೆ ಮಾಡಲು ಹಾಗೂ ಯಾವುದೇ ಕೋ–ಆಪರೇಟಿವ್ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡುವುದು ಬೇಡ. ಈಗ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಠೇವಣಿಗಳಿಗೆ ಅನುಮೋದನೆ ನೀಡಲಾಗುವುದಿಲ್ಲ, ಅದನ್ನು ವಾಪಸ್ ಪಡೆಯಲು ಕ್ರಮ ಅಗತ್ಯ. ಎಂ.ಡಿ.ಸಿ.ಸಿ. ಬ್ಯಾಂಕಿನಲ್ಲಿ ಇರುವ ಹಣವನ್ನು ಸಹ ಸಲಹೆ ಪಡೆದು ರಾಷ್ಟ್ರೀಕೃತ ಮತ್ತು ಷೆಡ್ಯೂಲ್ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಲು ತಿಳಿಸಿದರು. ಅಧ್ಯಕ್ಷರು ತಮ್ಮ ಸಲಹೆ ಉತ್ತಮವಾಗಿದ್ದು, ಕಾನೂನಿನ ವ್ಯಾಪ್ತಿಯಲ್ಲಿ ಅಗತ್ಯ ಸಲಹೆ ಪಡೆದು ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮಾರವರು, ಶ್ರೀ ಚಂದ್ರಶೇಖರ್‌ರವರು ಸೂಚಿಸಿ ಶ್ರೀ ಡಿ.ಎನ್. ಕೃಷ್ಣಮೂರ್ತಿರವರು ಅನುಮೋದನೆ ನೀಡಿದರು. ಸರ್ವಸದಸ್ಯರ ಸಭೆಯ ಅಭಿಪ್ರಾಯದಂತೆ ನಡೆದುಕೊಳ್ಳಲು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ತಾವು ತಿಳಿಸಿದಂತೆ ಎಂಡಿಸಿಸಿ ಬ್ಯಾಂಕ್ ಠೇವಣಿ ತೆಗೆಯಲಾಗಿದೆ. ಎಂಎಂಸಿಬಿ ಬ್ಯಾಂಕ್‌ನ್ನು ಕ್ರಮೇಣವಾಗಿ ಸಹಕಾರ ಬ್ಯಾಂಕಿನ ಠೇವಣಿಯನ್ನು ಕಡಿಮೆ ಮಾಡಲಾಗುವುದೆಂದು ತಿಳಿಸಲಾಯಿತು. ಶ್ರೀ ಶ್ರೀನಿವಾಸ ಶರ್ಮಾರವರು ಮಾತನಾಡಿ ರಿಸರ್ವ್ ಫಂಡ್ ಮೊತ್ತವನ್ನು ರಾಷ್ಟ್ರೀಕೃತ ಮತ್ತು ಷೆಡ್ಯೂಲ್ಡ್ ಬ್ಯಾಂಕ್‌ಗಳಲ್ಲಿ ಮಾತ್ರ ಹೂಡಿಕೆ ಮಾಡಲು ತಿಳಿಸಿದರು. ಶ್ರೀ ವೆಂಟಸುಬ್ಬಯ್ಯರವರು ಮಾತನಾಡಿ ರಾಷ್ಟ್ರೀಕೃತ ಮತ್ತು ಷೆಡ್ಯೂಲ್ ಬ್ಯಾಂಕ್‌ಗಳಲ್ಲಿ ಮಾತ್ರ ಹೂಡಿಕೆ ಮಾಡಲು ಶೇ100ರಷ್ಟು ಭದ್ರತೆಯಿರುವುದರಿಂದ ತಮ್ಮ ಸಮ್ಮತಿಯನ್ನು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮಾರವರು ಮಾತನಾಡಿ ಈ ಹಿಂದಿನ ಸಭೆಯಲ್ಲಿ ನೀಡಿದ ನಿರ್ಣಯಕ್ಕೆ ಬದ್ಧರಾಗಬೇಕಾಗಿ ತಿಳಿಸಿದರು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಲಾಯಿತು.

**14. ಸಂಘದ ಹಾಲಿ ನಿರ್ದೇಶಕರುಗಳಿಗೆ ಮತ್ತು ಅವರ ಸಂಬಂಧಿಕರಿಗೆ ಸಂಘದಿಂದ ನೀಡಲಾದ ಸಾಲಗಳ ಬಾಕಿ, ಸುಸ್ತಿಬಾಕಿ ಯಾವುದಾದರೂ ಇದ್ದರೆ ಅವುಗಳ ವಸೂಲಿಗಾಗಿ ಕೈಗೊಂಡ ಕ್ರಮದ ಪರಿಶೀಲನೆ:**

ಪ್ರಭಾರ ಕಾರ್ಯದರ್ಶಿಯವರು ಮಾತನಾಡಿ, ಸಂಘದ ಹಾಲಿ ನಿರ್ದೇಶಕರುಗಳಿಗೆ ಮತ್ತು ಅವರ ಸಂಬಂಧಿಕರಿಗೆ ಸಂಘದಿಂದ ನೀಡಲಾದ ಸಾಲಗಳ ಬಾಕಿ, ಸುಸ್ತಿ ಬಾಕಿ ಯಾವುದೂ ಇಲ್ಲವೆಂದು ಪ್ರತಿ ನಿರ್ದೇಶಕ ಮಂಡಲಿ ಸಭೆಯಲ್ಲಿ ಮಾಹಿತಿ ನೀಡಲಾಗುತ್ತಿದೆ ಎಂದು ಸಭೆಗೆ ವಿವರ ನೀಡಿದರು. ಶ್ರೀ ಕೇಶವ ಪ್ರಸಾದ್‌ರವರು ಮಾತನಾಡಿ ನಾನು ಇದರ ಪ್ರತಿಯನ್ನು ಆಪೇಕ್ಷಿಸಿದ್ದು ಅದನ್ನು ನೀಡಿದ ನಂತರ ಒಪ್ಪಿಗೆ ನೀಡಲಾಗುವುದು ಎಂದು ತಿಳಿಸಿದರು. ಪ್ರಭಾರ ಕಾರ್ಯದರ್ಶಿಯವರು ಮುಂದುವರೆದು ಮಾತನಾಡಿ ಲೆಕ್ಕ ಪರಿಶೋಧಕರು ಸಂಪೂರ್ಣವಾಗಿ ಪರಿಶೀಲಿಸಿರುವ ವಿವರವನ್ನೇ ಸಭೆಯಲ್ಲಿ ನೀಡಲಾಗಿದೆ ತಾವು ಇದನ್ನು ಪರಿಶೀಲಿಸಬಹುದು ಎಂದು ತಿಳಿಸಿದರು. ಶ್ರೀ ಕೇಶವ ಪ್ರಸಾದ್ ಹಾಗೂ ಶ್ರೀ ಶ್ರೀನಿವಾಸಶರ್ಮ ರವರು ಮಾತನಾಡಿ ಪ್ರಭಾರ ಕಾರ್ಯದರ್ಶಿಯವರು ಇದಕ್ಕೆ ಈ ರೀತಿ ಉತ್ತರ ನೀಡಬಾರದು ಸದಸ್ಯರಿಗೆ ಅವಮಾನಕರವಾಗಿದ್ದು, ಕ್ಷಮಾಪಣೆ ಕೇಳಲು ತಿಳಿಸಿದರು. ಅಧ್ಯಕ್ಷರು ಪ್ರಭಾರ ಕಾರ್ಯದರ್ಶಿಯವರಿಗೆ ಆದೇಶಿಸಿ ಆ ಮಾತನ್ನು ಹಿಂಪಡೆಯಲು ತಿಳಿಸಿದರು. ಅದರಂತೆ ಸಭೆಯನ್ನು ಉದ್ದೇಶಿಸಿ ತಮ್ಮ ಮಾತನ್ನು ಅನ್ಯಥಾ ಭಾವಿಸಬಾರದೆಂದು ತಿಳಿಸಿದರು. ನಂತರ ಮುಂದುವರೆದು ಮಾತನಾಡಿ ಶ್ರೀ ಕೇಶವ ಪ್ರಸಾದ್‌ರವರಿಂದ ಬಂದ ಪತ್ರವನ್ನು ಮತ್ತು ಅದಕ್ಕೆ ನೀಡಿರುವ ಉತ್ತರವನ್ನು ಸಭೆಯಲ್ಲಿ ಓದಿದರು. ಈ ಹಿಂದಿನ ವಿಷಯದಲ್ಲಿ ತಿಳಿಸಿದಂತೆ ಲೆಕ್ಕ ಪರಿಶೋಧಕರು ಪರಿಶೀಲಿಸಿ ಕುಳುವಾರು ಲಗತ್ತಿಸಿರುವ ವಿವರವನ್ನು ಪರಿಶೀಲನೆಗೆ ನೀಡಲು ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 19ಎ ಪ್ರಕಾರ ಸ್ವಂತ ವಿಷಯಗಳ ಪರಿಶೀಲನೆಗೆ ಅವಕಾಶವಿರುತ್ತದೆ. ಆದರೆ ಶ್ರೀ ಕೇಶವಪ್ರಸಾದ್‌ರವರು ಸಂಘದ ಹಾಲಿ ನಿರ್ದೇಶಕರುಗಳಿಗೆ ಮತ್ತು ಅವರ ಸಂಬಂಧಿಕರುಗಳಿಗೆ ಸಂಘದಿಂದ ನೀಡಲಾದ ವಿವಿಧ ಸಾಲಗಳ ವಿವರಗಳು ಅಂದರೆ ಸಾಲ ನೀಡಲಾದ ದಿನಾಂಕ ಹಾಗೂ ಮೊತ್ತ, ಅಸಲು ಬಡ್ಡಿ ಮರುಪಾವತಿಗಳ ವಿವರ ಹಾಗೂ ಅವರುಗಳ ಸಾಲಕ್ಕೆ ಜಂಟೀದಾರರ ವಿವರ (ಹೆಸರು ಮತ್ತು ವಿಳಾಸ) ಕೇಳಿರುವುದು ತಮಗೆ ತಿಳಿದಿರುವುದಿಲ್ಲ, ಆದರೆ ನಿರ್ದೇಶಕರು ತೆಗೆದುಕೊಂಡಿರುವ ಸಾಲಗಳ ವಿವರಗಳು ಲೆಕ್ಕ ಪರಿಶೋಧನಾ ವರದಿಯ ಒಂದು ಭಾಗವಾಗಿರುವುದರಿಂದ ಈ ಮಾಹಿತಿಯನ್ನು ಒದಗಿಸಬೇಕು ಎಂದು ತಿಳಿಸಿದರು. ಇದೇ ಉತ್ತರವನ್ನು ಶ್ರೀ ಕೇಶವ ಪ್ರಸಾದ್‌ರವರು ಸೂಚಿಸಿ ಇದಕ್ಕೆ ತಗಲುವ ವೆಚ್ಚವನ್ನು ಭರಿಸಲಾಗುವುದು ಎಂದು ತಿಳಿಸಿದರು. ಸದಸ್ಯರಾದ ಶ್ರೀ ಪಾರ್ಥಸಾರಥಿಯವರು ಮಾತನಾಡಿ ನಾನು ನೀಡಿರುವ ಪತ್ರಕ್ಕೆ ಇದುವರೆಗೂ ಉತ್ತರ ನೀಡಿರುವುದಿಲ್ಲವೆಂದು ಅಸಮಧಾನವನ್ನು ವ್ಯಕ್ತಪಡಿಸಿದರು. ಮುಂದುವರೆದು ಮಾತನಾಡಿ ನಾನು ನೀಡಿರುವ ಅರ್ಜಿಗೆ ಹಿಂಬರಹ ಸಹ ಬಂದಿರುವುದಿಲ್ಲ ಎಂದು ತಿಳಿಸಿದರು. ಶ್ರೀ ವೆಂಕಟೇಶ ಕೌಶಿಕ್‌ರವರು ಮಾತನಾಡಿ ಒಬ್ಬರಿಗೆ ಪ್ರತಿಯನ್ನು ಕೊಟ್ಟ ಮೇಲೆ ಎಲ್ಲರಿಗೂ ನೀಡಬೇಕು ಎಂದು ತಿಳಿಸಿದರು. ಸದಸ್ಯರಾದ ಶ್ರೀ ಪಾರ್ಥಸಾರಥಿಯವರು ಮಾತನಾಡಿ ನನ್ನ

ಪತ್ರಕ್ಕೆ ಉತ್ತರ ನೀಡುವಂತೆ ತಿಳಿಸಿದರು. ಶ್ರೀ ಕೇಶವಪ್ರಸಾದ್‌ರವರನ್ನು ಹೊರತು ಪಡಿಸಿ ಮೇಲ್ಕಂಡ ವಿಷಯಕ್ಕೆ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

ಅಧ್ಯಕ್ಷರ ಮತ್ತು ಸಭೆಯ ಅನುಮತಿ ಮೇರೆಗೆ ಸದಸ್ಯರಾದ ಶ್ರೀ ಪಾರ್ಥಸಾರಥಿಯವರ ಪತ್ರವನ್ನು ಪ್ರಭಾರ ಕಾರ್ಯದರ್ಶಿಯವರು ಸಭೆಯಲ್ಲಿ ಓದಿದರು ಈ ಪತ್ರದಲ್ಲಿ ಮುಖ್ಯವಾಗಿ ಚಿನ್ನ ಮತ್ತು ಬೆಳ್ಳಿ ಹರಾಜು ಪ್ರಕ್ರಿಯೆಗಳು ಸದಸ್ಯರ ಗಮನಕ್ಕೆ ಬರದೇ ಯಾವುದೋ ಚಾಲ್ತಿಯಿಲ್ಲದ ಸಾಧ್ವಿ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿದೆ ಈ ಕ್ರಮ ಸರಿಯಲ್ಲವೆಂದು ತಿಳಿಸಿರುತ್ತಾರೆ. ಸದಸ್ಯರ ಗಮನಕ್ಕೆ ತರುವ ವ್ಯವಸ್ಥೆ ಮಾಡುವಂತೆಯು ತಿಳಿಸಿರುತ್ತಾರೆ. ಈ ಹಿಂದೆ ಪ್ರಭಾರ ಕಾರ್ಯದರ್ಶಿಯವರು ನಮ್ಮ ಗಮನಕ್ಕೆ ತಂದಾಗ ನಾವು ನಾಲ್ಕು ಜನ ಸದಸ್ಯರು ಹಾಜರಾಗಿರುತ್ತೇವೆ ಸದಸ್ಯರು ಕಷ್ಟಕ್ಕೆ ಪಡೆದಿದ್ದು, ಕಾರಣಾಂತರದಿಂದ ಮರುಪಾವತಿ ಆಗದಿದ್ದಾಗ ಕಾನೂನು ಕ್ರಮ ತೆಗೆದುಕೊಂಡಿರುವುದು ಸರಿ. ಸಾಧ್ವಿ ಪತ್ರಿಕೆಯಲ್ಲಿ ಪ್ರಕಟಿಸುವುದು ಸರಿ ಇರುವುದಿಲ್ಲ, ಇನ್ನು ಮುಂದಿನ ದಿನಗಳಲ್ಲಿ ಹೊರಗಿನವರಿಗಿಂತ ಸದಸ್ಯರಿಗೆ ಪ್ರಾಶಸ್ತ್ಯ ನೀಡಲು ಹಾಗೂ ನಾವು ನೀಡುವ ಪತ್ರಕ್ಕೆ ಹಿಂಬರಹ ನೀಡಲು ಪ್ರಭಾರ ಕಾರ್ಯದರ್ಶಿಯವರಿಗೆ ಸೂಚಿಸಲು ಅಧ್ಯಕ್ಷರಿಗೆ ತಿಳಿಸಿದರು. ಇದಕ್ಕೆ ಅಧ್ಯಕ್ಷರು ಉತ್ತರಿಸಿ ಹರಾಜು ಪ್ರಕ್ರಿಯೆ ಕಾನೂನಿನ ರೀತಿಯಲ್ಲಿಯೇ ನಡೆಯಬೇಕು, ಹರಾಜಿನಲ್ಲಿ ಹೊರಗಿನವರು ಅಥವಾ ಸದಸ್ಯರು ಬರುವುದಿಲ್ಲ, ಆದತೆ ನಿಮ್ಮ ಸಲಹೆಯಂತೆ ಸದಸ್ಯರಿಗೂ ತಿಳಿಸಲು ಕ್ರಮ ಕೈಗೊಳ್ಳಲಾಗುವುದು. ಎಂದು ತಿಳಿಸಿದರು.

**15. <u>ಮರಣ ಹೊಂದಿರುವ ಸದಸ್ಯರ ಸಾಲದ ಮೊತ್ತವನ್ನು ಕರಡು ಸಂಶಯಾಸ್ಪದ ಸಾಲದ ನಿಧಿ ಮೊತ್ತದಿಂದ ಹೊಂದಾಣಿಕೆ ಮಾಡುವ ಬಗ್ಗೆ ಅನುಮೋದನೆ ನೀಡುವುದು.</u>**

ಈ ವಿಷಯವನ್ನು ನಿರ್ದೇಶಕರಾದ ಶ್ರೀಮತಿ ರಾಜಮ್ಮರವರು ಸರ್ವಸದಸ್ಯರ ಸಭೆಗೆ ಪ್ರಸ್ತುತ ಪಡಿಸಿದರು. ಈ ವಿಷಯದ ಬಗ್ಗೆ ಶ್ರೀ ಕೇಶವಪ್ರಸಾದ್ ಹಾಗೂ ಚಂದ್ರಶೇಖರ್‌ರವರು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮರಣ ಹೊಂದಿರುವವರ ಬಗ್ಗೆ ಯಾವುದೇ ಧೃಢೀಕರಣವಿಲ್ಲದಿರುವುದರಿಂದ ಇದಕ್ಕೆ ಒಪ್ಪಿಗೆ ನೀಡಲು ಸಾಧ್ಯವಿರುವುದಿಲ್ಲವೆಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಈ ಹಿಂದೆ ವರ್ಚ್ಯೂಯಲ್ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಿದ್ದು, ಕಾನೂನು ರೀತಿಯಲ್ಲಿ ದಾಖಲೆ ಪಡೆದು ನಂತರ ಕ್ರಮವಿಡುವಂತೆ ತಿಳಿಸಲಾಗಿತ್ತು. ಆದರೆ ಇದುವರೆಗೂ ದಾಖಲೆಗಳನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ ಎಂದು ಆಕ್ಷೇಪಣೆ ವ್ಯಕ್ತಪಡಿಸಿದರು. ಇದಕ್ಕೆ ಅಧ್ಯಕ್ಷರು ಉತ್ತರಿಸಿ ಅವರುಗಳು ಸಂಘಕ್ಕೆ ನೀಡಿರುವ ವಿಳಾಸದಲ್ಲಿ ಲಭ್ಯವಿಲ್ಲದಿದ್ದು, ನಾವು ಸಾಕಷ್ಟು ಪ್ರಯತ್ನ ಮಾಡಲಾತದ್ದರೂ ಪ್ರಯೋಜನವಾಗುತ್ತಿಲ್ಲವೆಂದು ತಿಳಿಸಿದರು. ಶ್ರೀ ಕೇಶವಪ್ರಸಾದ್‌ರವರು ಮಾತನಾಡಿ ಸಾಲಕ್ಕೆ ಶಿಫಾರಸ್ಸು ಮಾಡಿರುವವರು ಅಥವಾ ಅವರಿಗೆ ತಿಳಿದಿರುವವರಿಂದ ಪ್ರಮಾಣಪತ್ರ ಪಡೆಯಲು ಸಲಹೆ ನೀಡಿದರು. ಅಧ್ಯಕ್ಷರು ಉತ್ತರಿಸಿ ಶ್ರೀ ಕೇಶವ ಪ್ರಸಾದ್‌ರವರೇ ತಮಗೆ ತಿಳಿದವರು ಇದ್ದರೆ ಇದಕ್ಕೆ ತಾವು ಪ್ರಮಾಣಪತ್ರ ನೀಡುತ್ತೀರಾ ಎಂದು ಕೇಳಿದರು. ಶ್ರೀ ರಾಮಸ್ವಾಮಿಯವರು ಮಾತನಾಡಿ ಒಂದೇ ವಿಳಾಸದ ಇಬ್ಬರು ಒಟ್ಟಿಗೆ ಮರಣ ಹೊಂದಿರುತ್ತಾರೆಯೇ, ಖಜಾಂಚಿಗಳು ಉತ್ತರಿಸಿ ಕೆಲವು ದಿನಗಳ ಅಂತರದಲ್ಲಿ ಮರಣ ಹೊಂದಿರುತ್ತಾರೆ. ಇವು 15 ವರ್ಷಗಳ ಹಿಂದಿನ ಸಾಲವಾಗಿರುತ್ತದೆ ಎಂದು ತಿಳಿಸಿದರು. ಶ್ರೀ ಪ್ರೀತನ್‌ರವರು ಮಾತನಾಡಿ ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಪತ್ರಿಕೆಯಲ್ಲಿ ಯಾವ ದಿನಾಂಕದಲ್ಲಿ ಸಾಲ ಪಡೆದಿರುತ್ತಾರೆ ಇದುವರೆಗೂ ಸಾಲ ಪಾವತಿ ಮಾಡಿಲ್ಲದಿರುವುದರ ಬಗ್ಗೆ ಪ್ರಕಟಿಸಿ ಮುಂದಿನ ಕ್ರಮ ಕೈಗೊಳ್ಳಲು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಈ ಕ್ರಮಗಳನ್ನು ಅನುಸರಿಸಿ ಮುಂದಿನ ಸರ್ವಸದಸ್ಯರ ಸಭೆಯಲ್ಲಿ ಅನುಮತಿ ಪಡೆಯಲು ತಿಳಿಸಿದರು. ಈ ಎಲ್ಲಾ ಚರ್ಚೆಗಳ ನಂತರ ಅಧ್ಯಕ್ಷರು ಮಾತನಾಡಿ ಸರ್ವಸದಸ್ಯರ ಅಭಿಪ್ರಾಯದಂತೆ ಮುಂದಿನ ಸರ್ವ ಸದಸ್ಯರ ಸಭೆಯ ಅನುಮತಿಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

**16. <u>ಸಂಘದ ಪ್ರಧಾನ ಕಛೇರಿಯಲ್ಲಿ ಸದಸ್ಯರಿಗೆ ಅನುಕೂಲವಾಗುವಂತೆ ಲಿಫ್ಟ್ ಅಳವಡಿಸುವ ಬಗ್ಗೆ ಹಾಗೂ ಪ್ರಧಾನ ಕಛೇರಿಯಲ್ಲಿ ಸಭಾಂಗಣ ನಿರ್ಮಾಣ ಮಾಡಲು ಕಾಮಗಾರಿ ವೆಚ್ಚಗಳಿಗೆ ಸಂಘದ ಮೀಸಲು ನಿಧಿಯಿಂದ ಬಳಸಿಕೊಳ್ಳುವ ಬಗ್ಗೆ ಸರ್ವಸದಸ್ಯರ ಅನುಮೋದನೆ ನೀಡುವುದು.</u>**

ನಿರ್ದೇಶಕರಾದ ಶ್ರೀ ಹೆಚ್ ಪಿ ಚೇತನ್‌ರವರು ಈ ವಿಷಯವನ್ನು ಸರ್ವಸದಸ್ಯರ ಸಭೆಯಲ್ಲಿ ಮಂಡಿಸಿದರು. ಸಂಘದಲ್ಲಿ ಮುಖ್ಯವಾಗಿ ಹಿರಿಯ ಸದಸ್ಯರ ಅನುಕೂಲಕ್ಕಾಗಿ ಲಿಫ್ಟ್ ಅಳವಡಿಸಲು ಹಾಗೂ ಪ್ರಧಾನ ಕಛೇರಿಯಲ್ಲಿ ಸಭಾಂಗಣ ಕಟ್ಟಲು ಅನುಮತಿ ಕೇಳಿದರು. ಶ್ರೀ ಶ್ರೀನಿವಾಸ್‌ಶರ್ಮರವರು ಮಾತನಾಡಿ ಕಟ್ಟಡ ನಿಧಿಯಲ್ಲಿ ಬಳಸಿಕೊಳ್ಳಲು ಸಾದ್ಯವಿರುವುದಿಲ್ಲವೆಂದು ತಿಳಿಸಿದ್ದು, ಕಾರಣ ತಿಳಿಯಲಿಲ್ಲವೆಂದು ಹೇಳಿದರು. ತಾವು ಈಗ ಆಪೇಕ್ಷಿಸಿರುವ ಲಿಫ್ಟ್ ಅಳವಡಿಕೆ ಕಟ್ಟಡ ನಿಧಿಗೆ ಬರುವುದಿಲ್ಲ ಲಿಫ್ಟ್ ವಿದ್ಯುತ್ ಉಪಕರಣವಾಗಿದ್ದು, ಇದನ್ನು ಬೇರೆ ತೋರಿಸಬೇಕು ಇದಕ್ಕೆ ಸವಕಳಿ ಶೇ.15 ಆಗುತ್ತದೆ ಎಂದರು. ಅಧ್ಯಕ್ಷರು ಮಾತನಾಡಿ ಹೆಚ್ಚಿನ ಸದಸ್ಯರಿಗೆ ಮೆಟ್ಟಲು ಹತ್ತಲು

ಕಷ್ಟವಾಗುತ್ತಿರುವುದರಿಂದ ಲಿಫ್ಟ್ ಅಳವಡಿಕೆ ಮಾಡಬೇಕಾಗಿರುತ್ತದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ಮೀಸಲು ನಿಧಿಯಿಂದ ತೆಗೆದುಕೊಳ್ಳಬಾರದು. ಲಿಫ್ಟ್ ಅಳವಡಿಕೆ ಬದಲಾಗಿ ಕೆಳಗೆ ಒಂದು ಕೌಂಟರ್ ಮಾಡಲು ಸೂಚಿಸಿದರು. ಅಧ್ಯಕ್ಷರು ಉತ್ತರಿಸಿ ಕೆಳಗೆ ಪಾರ್ಕಿಂಗ್ ಜಾಗ ಕಡಿಮೆ ಆಗುತ್ತದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ್‌ಶರ್ಮರವರು ಮಾತನಾಡಿ ಲಿಫ್ಟ್ ಅಳವಡಿಕೆ ಜಾಗ ಬೇಡವೇ ಎಂದು ಕೇಳಿದರು. ಶ್ರೀ ಚೇತನ್‌ರವರು ಉತ್ತರಿಸಿ 5x5 ಅಳತೆ ಸ್ಥಳಾವಕಾಶ ಬೇಕಾಗುತ್ತದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ಇದಕ್ಕೆ ತಗಲುವ ವೆಚ್ಚದ ಬಗ್ಗೆ ಆಯ ವ್ಯಯದಲ್ಲಿ ತಿಳಿಸಿರುವುದಿಲ್ಲ ಇದರ ಖರ್ಚು ಹೆಚ್ಚಾಗುವುದರಿಂದ ಕೆಳಗೆ ಕೌಂಟರ್ ಮಾಡವುದು ಉತ್ತಮ ಈಗಾಗಲೇ ಸಿ ಆರ್ ತೆಗೆದುಕೊಳ್ಳುವುದು ಸಾಧ್ಯವಾಗುತ್ತಿಲ್ಲ ಅಲ್ಲೇ ಉಲ್ಲಂಘನೆ ಆಗಿದೆ ಎಂದು ತಿಳಿಸಿದರು. ಶ್ರೀ ಚೇತನ್‌ರವರು ಮಾತನಾಡಿ ನನಗೆ ತಿಳಿದಿರುವ ರೀತ್ಯ ಈಗಿರುವ ಕಟ್ಟಡಕ್ಕೆ ಸಿಆರ್ ಪಡೆಯಲು ಸಾಧ್ಯವಿರುವುದಿಲ್ಲ ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ಕೆಲವು ಹಿರಿಯ ಸದಸ್ಯರು ಲಾಕರ್ ಉಪಯೋಗಿಸುತ್ತಿದ್ದು, ಅವರನ್ನು ಗಣನೆಗೆ ತೆಗೆದುಕೊಳ್ಳಬೇಕು ಎಲ್ಲಾ ಸದಸ್ಯರಿಗೂ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಲಿಫ್ಟ್ ಅಳವಡಿಕೆ ಮಾಡಬೇಕಾಗಿರುತ್ತದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ವಿಜಯನಗರದಲ್ಲಿ ಕಟ್ಟಡ ದೊಡ್ಡದಾಗಿರುವುದರಿಂದ ಶಾಖೆಗೆ ವರ್ಗಾವಣೆ ಮಾಡಿಕೊಳ್ಳಬಹುದು, ಪ್ರಧಾನ ಕಛೇರಿಗೆ ಈಗಾಗಲೇ ಸಿ ಆರ್ ಇಲ್ಲದೆ ಇರುವುದರಿಂದ ಲಿಫ್ಟ್ ಅಳವಡಿಕೆ ಮಾಡುವುದು ಬೇಡ ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ನಿರ್ದೇಶಕರಾದ ಶ್ರೀ ಸಿ ವಿ ಪಾರ್ಥಸಾರಥಿಯವರು ಆಪರೇಷನ್ ಆದಾಗ ಮೆಟ್ಟಲು ಹತ್ತಲು ಕಷ್ಟವಾಗುತ್ತಿದ್ದನ್ನು ಗಮನಿಸಲಾಗಿದೆ ಎಂದು ತಿಳಿಸಿದರು. ಅಧ್ಯಕ್ಷರ ಅನುಮತಿ ಪಡೆದು ನಿರ್ದೇಶಕರಾದ ಶ್ರೀ ಸಿ ವಿ ಪಾರ್ಥಸಾರಥಿಯವರು ಮಾತನಾಡಿ ನನ್ನನ್ನು ಮಾತ್ರ ಗಮದಲ್ಲಿಟ್ಟು ಕೊಳ್ಳುವುದು ಬೇಡ ಬೇರೆ ಹಿರಿಯರು ಈ ಹಿಂದಿನಿಂದಲು ಕೇಳುತ್ತಿದ್ದು, ಅನೇಕ ಹೃದ್ರೋಗಿಗಳು ಇರುತ್ತಾರೆ ಇದಕ್ಕೆ ಮಾನವೀಯತೆಯ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಒಪ್ಪಿಗೆ ನೀಡಲು ಕೇಳಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಮಾಜಿ ಅಧ್ಯಕ್ಷರು ಹೇಳಿದ್ದನ್ನು ಕೇಳಿ ವೈದ್ಯಕೀಯ ತೊಂದರೆ ಇರುವಂತಹ ಸದಸ್ಯರಿಗೆ ಡೋರ್ ಸರ್ವೀಸ್ ನೀಡಬಹುದಲ್ಲವೇ, ಈಗ ಮೂರೂ ಫ್ಲೋರ್‌ಗೆ ಲಿಫ್ಟ್ ಅಳವಡಿಕೆಯಾಗಬೇಕು ಇದಕ್ಕೆ ತಗಲುವ ವೆಚ್ಚಗಳು ಸವಕಳಿ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ವೈಯಕ್ತಿಕವಾಗಿ ಒಪ್ಪಿಗೆ ಇಲ್ಲವೆಂದು ತಿಳಿಸಿದರು. ಶ್ರೀ ರಾಮಸ್ವಾಮಿಯವರು ಈ ವಿಷಯವಾಗಿ ಈಗ ಇರುವ ಕಟ್ಟಡ ರಚನೆಯನ್ನು ಬದಲಾವಣೆ ಮಾಡುವುದು ಸರಿಯಲ್ಲವೆಂದು ಈ ಹಿಂದೆ ಕೆಲವು ಮಾರ್ಪಾಟು ಮಾಡಲಾಗಿದ್ದು, ಅದರಿಂದ ಯಾವುದೇ ಉಪಯೋಗವಿರುವುದಿಲ್ಲ ಇದರಿಂದ ಅನಾವಶ್ಯಕ ವೆಚ್ಚ ಈಗ ಮೂರೂ ಫ್ಲೋರ್‌ಗೆ ಲಿಫ್ಟ್ ಅಳವಡಿಕೆಯಾಗಬೇಕು ಈಗಾಗಲೇ ಸಿ ಆರ್ ಸಿಗುವುದಿಲ್ಲ ದುಪ್ಪಟ್ಟು ಕಂದಾಯ ಪಾವತಿ ಮಾಡಬೇಕು. ಮತ್ತೊಂದು ಫ್ಲೋರ್‌ಗೆ ವರ್ಷದಲ್ಲಿ ಒಂದು ಬಾರಿ ಲಕ್ಷ್ಮೀ ಪೂಜೆ ಮಾಡಲು ಸಭಾಂಗಣ ಅವಶ್ಯಕತೆ ಇರುವುದಿಲ್ಲವೆಂದು ತಿಳಿಸಿದರು. ಶ್ರೀ ಯೋಗನರಸಿಂಹರವರು ಮಾತನಾಡಿ ತಮ್ಮ ವೈಯಕ್ತಿಕ ಅಭಿಪ್ರಾಯದಂತೆ ಲಿಫ್ಟ್ ಅಳವಡಿಕೆಯಾಗಬೇಕು ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ಈ ವಿಷಯವನ್ನು ಕೈ ಬಿಡಲಾಗಿದೆ ಎಂದು ತಿಳಿಸಿದರು. ಮುಂದಿನ ಸಭೆಯಲ್ಲಿ ಮೊದಲಿಗೆ ವಿಷಯವನ್ನು ಪ್ರಸ್ತಾಪ ಮಾಡಿ ಅಭಿಪ್ರಾಯ ತೆಗೆದುಕೊಳ್ಳೂವಂತೆ ತಿಳಿಸಿದರು.

**17. ಸದಸ್ಯರಿಂದ ಸ್ವೀಕೃತವಾದ ಸಲಹೆ/ಸೂಚನೆಗಳ ಪರಿಶೀಲನೆ:**

ಸದಸ್ಯರಾದ ಶ್ರೀ ಕೇಶವ ಪ್ರಸಾದ್‌ರವರು ಮಾತನಾಡಿ ಪ್ರಭಾರ ಕಾರ್ಯದರ್ಶಿಯವರನ್ನು ಖಾಯಂಗೊಳಿಸಲು ತಿಳಿಸಿದರು. ಅಧ್ಯಕ್ಷರು ಅದಕ್ಕೆ ಒಪ್ಪಿಗೆ ಸೂಚಿಸಿದರು. ಸದಸ್ಯರು ಸಂಘದ ಹಿತದೃಷ್ಟಿಯಿಂದ ಹಾಗೂ ಸದಸ್ಯರಗಳ ಹಿತದೃಷ್ಠಿಯಿಂದ ಸಲಹೆಗಳನ್ನು ನೀಡಬಹುದು ಎಂದು ಸಭೆಯಲ್ಲಿ ಕೇಳಲಾಗಿ, ಈಗಾಗಲೇ ಮೇಲೆ ಸೂಚಿಸಲಾದ ಸಲಹೆ/ಸೂಚನೆಗಳನ್ನು ಅನುಸರಿಸುವಂತೆ ಕೋರಿದರು.

**18. ಅಧ್ಯಕ್ಷರ ಅನುಮತಿಯೊಂದಿಗೆ ಬರಬಹುದಾದ ಇತರೆ ವಿಷಯಗಳು:**

ಯಾವುದೂ ಇರುವುದಿಲ್ಲ.

**19. ಅಧ್ಯಕ್ಷರ ಭಾಷಣ:**

ಅಧ್ಯಕ್ಷರು ಎಲ್ಲಾ ಸದಸ್ಯ ಭಾಂದವರು ಇದುವರೆಗೂ ಎಲ್ಲಾ ವಿಷಯಗಳಲ್ಲೂ ಭಾಗವಹಿಸಿ ಸದಸ್ಯರು ಸಂಘದ ಉನ್ನತಿಗಾಗಿ ಹಾಗೂ ಸದಸ್ಯರಗಳೆಲ್ಲರ ಹಿತದೃಷ್ಠಿಯಿಂದ ಸಾಕಷ್ಟು ಸಲಹೆಗಳನ್ನು ನೀಡಿರುತ್ತಾರೆ. ಈ ಎಲ್ಲವೂ ಸಂಸ್ಥೆಗೆ ಪೂರಕವಾಗಿದ್ದು, ಎಲ್ಲಾ ಸಲಹೆಗಳನ್ನು ಅಳವಡಿಸಿಕೊಂಡು ಸಂಘದ ಪ್ರಗತಿ ಮತ್ತು ಅಭಿವೃದ್ಧಿಗೆ ಯೋಜನೆ

ರೂಪಿಸಿಕೊಳ್ಳಲಾಗುವುದು. ಈಗಾಗಲೇ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿದೆ ತಮ್ಮ ಅಭಿಪ್ರಾಯದಂತೆ ಶೇ.8 ರಿಂದ ಶೇ.10ಕ್ಕೆ ಲಾಭಾಂಶವನ್ನು ನೀಡಲು ಒಪ್ಪಿಗೆ ಸೂಚಿಸಲಾಗಿದೆ. ನಮ್ಮ ಸಂಸ್ಥೆಯಲ್ಲಿ ಏನೋ ಆಗಿರುವ ರೀತಿ ಕಲ್ಪನೆ ಮಾಡಿಕೊಳ್ಳುವುದು ಬೇಡ ಮತ್ತು ಅನುಮಾನ ಪಡಬಾರದು. ಒಬ್ಬ ಸನ್ನದು ಲೆಕ್ಕಿಗರು ಪರಿಶೀಲನೆ ಮಾಡಿರುವುದನ್ನು ನಂಬದಿರುವುದು ಸರಿಯಲ್ಲ. ನಮಗಿಂತ ದೊಡ್ಡ ಸಂಸ್ಥೆಯವರು ಕೋಟಿಗಟ್ಟಲೆ ವ್ಯವಹಾರ ಮಾಡುವವರು ನಿರಾಳವಾಗಿ ಸಭೆಯನ್ನು ಮುಗಿಸುತ್ತಾರೆ. ನಮ್ಮ ಸಂಸ್ಥೆಯಲ್ಲಿ ಮಾತ್ರ ಎಷ್ಟು ಹೊತ್ತಾದರು ಸಭೆ ಮುಗಿಯುವುದಿಲ್ಲ ಸದಸ್ಯರು ಬರೀ 15 ಜನರು ಮಾತ್ರ ಮಾತನಾಡುತ್ತಿದ್ದು ಬೇರೆಯವರು ಮಾತನಾಡುವುದಿಲ್ಲ ಎಲ್ಲರೂ ನಮ್ಮ ಮಿತ್ರರೇ ಕೆಲವು ಸದಸ್ಯರು ನಿರ್ದೇಶಕರಾಗಿಯು ಸೇವೆ ಸಲ್ಲಿಸಿದ್ದು, ಇಲ್ಲಿನ ಆಗು ಹೋಗುಗಳು ತಿಳಿದಿರುತ್ತದೆ. ಈಗಾಗಲೇ ಸಮಯ 6.15 ಆಗಿದ್ದು, ಇಷ್ಟು ಹೊತ್ತು ಸಭೆಯನ್ನು ನಡೆಸಿದ್ದು ಒಳ್ಳೆ ಲಕ್ಷಣವಲ್ಲ ಎಂದರು. ಶ್ರೀ ಜಗದೀಶ್‌ರವರು ಮಾತನಾಡಿ ತುಂಬಾ ಕಾಲವಕಾಶವಾದರು ಸಭೆಯಲ್ಲಿ ಹೆಚ್ಚಿನ ವಿಚಾರಗಳು ಚರ್ಚೆಯಾಗಿದ್ದು, ಎಲ್ಲರಿಗೂ ವಿಷಯ ತಿಳಿಯಲು ಅನುಕೂಲವಾಗಿರುತ್ತದೆ ಸಂಸ್ಥೆ ಚೆನ್ನಾಗಿ ನಡೆಯುತ್ತಿದ್ದು ನಿಮ್ಮ ಉತ್ತರ ವಿಚಾರ ವಿನಿಮಯವು ಸಮಂಜಸವಾಗಿರುತ್ತದೆ ಎಂದು ತಿಳಿಸಿದರು. ಅಧ್ಯಕ್ಷರು ಮಾತು ಮುಂದುವರೆಸಿ ನಾನು ಸಂಘದಲ್ಲಿ ಪ್ರಾರಂಭದ ದಿನದಿಂದ ಹಲವು ಹುದ್ದೆಗಳಾದ ಆಂತರಿಕ ಲೆಕ್ಕಪರಿಶೋಧಕರಾಗಿ, ನಿರ್ದೇಶಕರಾಗಿ, ಖಜಾಂಚಿಯಾಗಿ ಈಗ ಅಧ್ಯಕ್ಷನಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದೇನೆ. ಈ ಸಂಸ್ಥೆಯನ್ನು ಮಹಾನ್ ವ್ಯಕ್ತಿಗಳು ಪ್ರಾರಂಬಿಸಿದ್ದು, ತಮಗೆ ತಿಳಿದಿರುತ್ತದೆ ಅವರ ಸೇವಾ ಮನೋಭಾವನೆ ಅವರು ಹಾಕಿದ ಬುನಾದಿಯಲ್ಲಿ ನಾವು ನಡೆಯಲಾಗುತ್ತಿದೆ. ಈಗ ಚುನಾಯಿಸಿರುವ ಆಡಳಿತ ಮಂಡಲಿ ಸದಸ್ಯರು ಅದೇ ಮನೋಭಾವನೆಯನ್ನು ಹೊಂದಿದ್ದು ಸಂಘದ ವ್ಯವಹಾರದಲ್ಲಿ ಪಾರದರ್ಶಕತೆ ಇರುತ್ತದೆ, ನಮ್ಮ ಸಿಬ್ಬಂದಿಯವರು ಸಹ ಚೆನ್ನಾಗಿ ಕೆಲಸ ಮಾಡುತ್ತಿರುತ್ತಾರೆ. ಕೆಲವು ಸಣ್ಣ ಪುಟ್ಟ ತಪ್ಪುಗಳಾಗಿದ್ದರು ಸರಿಪಡಿಸಿಕೊಳ್ಳಬಹುದು. ಸದಸ್ಯರು ತಮ್ಮ ಜ್ಞಾನವನ್ನು ಸಂಘದ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಬಹುದು ತಮ್ಮ ಸಲಹೆಯನ್ನು ನಾವು ಸ್ವೀಕರಿಸಲಾಗುವುದು ಎಂದು ತಿಳಿಸಿದರು. ಸಮಾರಂಭ ಯಶಸ್ವಿಯಾಗಿ ನಡೆದಿದೆ, ಪ್ರತಿಯೊಬ್ಬರಿಗೂ ಧನ್ಯವಾದ ಎಂದು ತಿಳಿಸಿದರು. ಮಂಗಳವಾರ ಸಂಘಕ್ಕೆ ರಜೆ ಘೋಷಿಸಲಾಯಿತು. ಎಲ್ಲರಿಗೂ ಅನಂತಾನಂತ ಧನ್ಯವಾದಗಳು ಎಂದು ತಿಳಿಸಿದರು.


**20. ವಂದನಾರ್ಪಣೆ:**

ನಿರ್ದೇಶಕರಾದ ಶ್ರೀ ಕೆ ವಿಕ್ರಮ್‌ರವರು ಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು, ಖಜಾಂಚಿಯವರು, ಎಲ್ಲ ನಿರ್ದೇಶಕರು, ಹಾಜರಿರುವ ಎಲ್ಲ ಸದಸ್ಯರುಗಳಿಗೂ ವಕೀಲರು, ಆಂತರಿಕ ಲೆಕ್ಕ ಪರಿಶೋಧಕರು, ಸಿಬ್ಬಂದಿ ವರ್ಗದವರೆಲ್ಲರಿಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹಾಗೂ ಇಂದಿನ ಕಾರ್ಯಕ್ರಮಕ್ಕೆ ಸ್ಥಳಾವಕಾಶ ನೀಡಿದ, ಮೈಕ್ ಒದಗಿಸಿದ ಎಲ್ಲರಿಗೂ ವಂದನೆಯನ್ನು ಸಲ್ಲಿಸಿದರು.

**21. ಸಂಜೆ 6.30ಕ್ಕೆ ಕಾರ್ಯಕಲಾಪಗಳು ಮುಕ್ತಾಯಗೊಂಡ ಕಾರಣ ವಂದನಾರ್ಪಣೆಯೊಂದಿಗೆ ಸಭೆಯ ಕಾರ್ಯಕಲಾಪಗಳನ್ನು ಮುಕ್ತಾಯಗೊಳಿಸಲಾಯಿತು.**

ಎಸ್.ಪ್ರಶಿ

ಂತ್ ತಾತಾಚಾರ್‌ರವರು ಸಭೆಯ ಗಮನಕ್ಕೆ ತಂದರು.



ಪ್ರಭಾರ ಕಾರ್ಯದರ್ಶಿ



ಅಧ್ಯಕ್ಷರು